

1928ರಲ್ಲಿ ಜನಿಸಿದ ಹಿಮಾಲಯದ ವಸಿಷ್ಠ ಗುಹೆಯ ಪರಮಪೂಜ್ಯ ಸ್ವಾಮಿ ಶ್ರೀ ಶಾಂತಾನಂದ ಪುರಿ ಮಹಾರಾಜ್ ಅವರು ಸ್ವಾಮಿ ಶ್ರೀ ಪುರುಷೋತ್ತಮಾನಂದ ಪುರಿ ಮಹಾರಾಜ್ (ಹಿಮಾಲಯದ ವಸಿಷ್ಠ ಗುಹ) ಅವರ ಶಿಷ್ಯರು.

ಸ್ವಾಮೀಜಿ ಅವರು ವೇದವಾಙ್ಮಯ ಹಾಗೂ ಪುರಾಣ ಗ್ರಂಥಗಳಲ್ಲಿ ಪ್ರಕಾಂಡ ಪಂಡಿತರು. ಭಾಗವತ ಹಾಗೂ ಶ್ರೀಮದ್ ಭಗವದ್ಗೀತೆ ಮತ್ತು ಅಷ್ಟಾವಕ್ರಗೀತೆಯಲ್ಲಿನ ಅವರ ಆಳವಾದ ಜ್ಞಾನ ಹಾಗೂ ಸುಸ್ಪಷ್ಟವಾದ ವ್ಯಾಖ್ಯಾನಗಳು ಸ್ವಾಮೀಜಿಯವರನ್ನು ಅಧ್ಯಾತ್ಮ ಪಿಪಾಸುಗಳಿಗೆ ಜನಪ್ರಿಯ ಮಾರ್ಗದರ್ಶಿಗಳನ್ನಾಗಿ ಮಾಡಿದೆ. ಅವರ ಸರಳತೆ, ದೈವೀ ಶಕ್ತಿಯಲ್ಲಿ ಗಾಢವಾದ ವಿಶ್ವಾಸ ಮತ್ತು ಪರಮಾತ್ಮನಲ್ಲಿ ಸಂಪೂರ್ಣ ಸಮರ್ಪಣೆ, ಇವು ಅವರನ್ನು ಜ್ಞಾನ, ಭಕ್ತಿ, ವೈರಾಗ್ಯಗಳ ಆದರ್ಶ ಸಮನ್ವಯ ಮೂರ್ತಿಯನ್ನಾಗಿ ಮಾಡಿದೆ.

ಸ್ವಾಮೀಜಿಯವರ ಅದ್ಭುತ ಜ್ಞಾನ, ಗಾಢವಾದ ಭಕ್ತಿ ಅವರ ಎಲ್ಲ ಕೃತಿಗಳಲ್ಲಿ ಪ್ರತಿಫಲಿಸುತ್ತಾ ಪ್ರತಿಯೊಬ್ಬನ ಅಂತರಂಗದ ಅನುಭವಕ್ಕೆ ಕಾರ್ಯಶೀಲ ಮಾರ್ಗದರ್ಶಿಯಾಗಿದ್ದು, ವ್ಯಕ್ತಿತ್ವದ ಉನ್ನತ ನೆಲೆಗೆ ಕೊಂಡೊಯ್ಯುತ್ತದೆ. ಸ್ವಾಮೀಜಿಯವರು ಯಾವಾಗಲೂ ಒತ್ತಿ ಹೇಳುವುದು– "ಅಭ್ಯಾಸ, ಅಭ್ಯಾಸ, ಅಭ್ಯಾಸ" ಎಂಬುದೇ ಆಗಿದೆ.

ಅಷ್ಟಾವಕ್ರಗೀತೆಯು ಸಾಧಕನು ಅತ್ಯಂತ ಸರಳವಾಗಿ ಕೈಗೊಳ್ಳಬಹುದಾದ ಹಲವಾರು ಸಾಧನೆಗಳ ವ್ಯಾವಹಾರಿಕ ಮಾರ್ಗದರ್ಶಿಯಾಗಿದೆ. ಅಂತಿಮ ಸತ್ಯದ ಶೋಧನೆಯನ್ನು ಪ್ರಾರಂಭಿಸಿರುವವನ ದಾರಿದೀಪವಾಗಿದೆ. ಹಲವಾರು ಧಾರ್ಮಿಕ ಪೂಜಾ ಕ್ರಿಯೆಗಳು, ಹಿಂದೂಧರ್ಮದ ಅಸಂಖ್ಯಾತ ದೇವತೆಗಳ ಅರ್ಚನೆಗಳ ಬಗೆಗೆ ಗೊಂದಲವನ್ನುಂಟುಮಾಡುವುದು ಈ ಕೃತಿಯ ಉದ್ದೇಶವಲ್ಲ. ಇಲ್ಲಿರುವುದು ಶೀಘ್ರ ಪರಿಣಾಮಕಾರಿಯಾದ ಮೋಕ್ಷ ಕ್ಯಾಪ್ಸೂಲ್ (ಗುಳಿಗೆ)ಗಳು. ಇವೆಲ್ಲವೂ ಉಪನಿಷತ್ತುಗಳ ಆದೇಶಗಳ ಕಕ್ಷೆಯಲ್ಲಿಯೇ ಬರುವಂಥವುಗಳು. ಅಂತಿಮ ಸತ್ಯ ಸಾಕ್ಷಾತ್ಕಾರಕ್ಕೆ ಅವು ಚಿಕ್ಕ ಚಿಕ್ಕ ಸಂಕ್ಷಿಪ್ತ ನೇರ ಮಾರ್ಗವೇ ಆಗಿರುವುವು.

ಈ ಗ್ರಂಥದಲ್ಲಿ ಸ್ವಾಮೀಜಿ ಒತ್ತಿ ಹೇಳುತ್ತಿರುವುದು ತಾತ್ತ್ವಿಕ ವಿಷಯಗಳನ್ನಲ್ಲ. ಬೇರೆ ಬೇರೆ ಎಂದು ಭಾವಿಸುವ ವ್ಯಾವಹಾರಿಕ ಸಾಧನೆಗಳನ್ನೂ ಅಲ್ಲ. ಬದಲಾಗಿ ಬದುಕಿನ ಸಾಮಾನ್ಯ ರೀತಿಯಲ್ಲೇ ಜೀವನ ಮಾರ್ಗವನ್ನು ತಿದ್ದಿಕೊಳ್ಳುವ ಅಥವಾ ನಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳುವುದನ್ನು. ಪ್ರತಿಯೊಬ್ಬರೂ ಪ್ರೀತಿಸುವಂತಹ ಪುಸ್ತಕ ಇದು.

ಅಷ್ಟಾವಕ್ರಗೀತೆಯ ಆಯ್ದ ರತ್ನಗಳು

# ಅಷ್ಟಾವಕ್ರಗೀತೆಯ
## ಆಯ್ದ ರತ್ನಗಳು




ಡಾ. ಎ.ಎಸ್. ವೇಣುಗೋಪಾಲ ರಾವ್
ಅನುವಾದಕರು

ಸ್ವಾಮಿ ಶಾಂತಾನಂದ ಪುರಿ
ಮೂಲ ಲೇಖಕರು

# ಅಷ್ಟಾವಕ್ರಗೀತೆಯ
## ಆಯ್ದ ರತ್ನಗಳು

ಮೂಲ ಇಂಗ್ಲಿಷ್ ಕೃತಿ :
ಸ್ವಾಮಿ ಶಾಂತಾನಂದ ಪುರಿ

ಕನ್ನಡ ಅನುವಾದ :
ಡಾ॥ ಎ. ಎಸ್. ವೇಣುಗೋಪಾಲ ರಾವ್
ಶಿವಮೊಗ್ಗ

ಪಾರ್ವತಮ್ಮ ಸುಬ್ಬರಾಜು ಶೆಟ್ಟಿ ಸಿ.ಪಿ. ಚಾರಿಟಬಲ್ ಟ್ರಸ್ಟ್
13/8, ಪಂಪಮಹಾಕವಿ ರಸ್ತೆ, ಶಂಕರಪುರಂ, ಬೆಂಗಳೂರು
ದೂರವಾಣಿ : 26708186, 26709026

**ಅಷ್ಟಾವಕ್ರಗೀತೆಯ ಆಯ್ದ ರತ್ನಗಳು**
ಲೇ: ಸ್ವಾಮಿ ಶಾಂತಾನಂದ ಪುರಿ ಮಹಾಸ್ವಾಮೀಜಿ
ಅನುವಾದಕರು : ಡಾ॥ ಎ.ಎಸ್.ವೇಣುಗೋಪಾಲ ರಾವ್

ಪ್ರಥಮ ಮುದ್ರಣ : ಜುಲೈ 3, 2012
(ಗುರು ಪೂರ್ಣಿಮ)

ಪರಮಪೂಜ್ಯ ಶ್ರೀ ಶಾಂತಾನಂದ ಪುರಿ ಮಹಾಸ್ವಾಮಿಜಿಯವರ
ಪುಸ್ತಕಗಳೆಲ್ಲವು ಕೆಳಗಿನ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ.
www.scribd.com/vedavita
(ಪುಸ್ತಕಗಳ ಪಟ್ಟಿ : ಪುಟಗಳು 113–114)

© ಪ್ರಕಾಶಕರು

ಪ್ರತಿಗಳು : 1000

ಮುದ್ರಕರು :
ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್
ನಂ 3/4, 1ನೇ ಮುಖ್ಯ ರಸ್ತೆ,
ಹೊಸತರಗುಪೇಟೆ, ಬೆಂಗಳೂರು – 560 002
e-mail:omkaroffset@gmail.com
website : www.omkaroffset.com

# ಸಮರ್ಪಣ

ಈ ಕೃತಿಯನ್ನು ರಚಿಸಲು ನನ್ನನ್ನು ಪ್ರೇರೇಪಿಸಿದ

ನನ್ನ ಪರಮಪೂಜ್ಯ ಗುರುವರ್ಯ

ಹಿಮಾಲಯದ ವಸಿಷ್ಠಗುಹೆಯ

ಸ್ವಾಮಿ ಪುರುಷೋತ್ತಮಾನಂದಜೀ ಮಹಾರಾಜ್ ಅವರ

ಪಾದಪದ್ಮಗಳಲ್ಲಿ ಭಕ್ತಿಪೂರ್ವಕವಾಗಿ

ಈ ಕೃತಿಯು ಸಮರ್ಪಿತವಾಗಿದೆ.


**ಸ್ವಾಮಿ ಶಾಂತಾನಂದ ಪುರಿ**



ಪರಮಪೂಜ್ಯ ಶ್ರೀಮದ್ ಸ್ವಾಮಿ ಪುರುಷೋತ್ತಮಾನಂದಜಿ ಮಹಾರಾಜರು

## ವಿಷಯಾನುಕ್ರಮಣಿಕೆ


| | |
|---|---|
| ಪ್ರಸ್ತಾವನೆ | 1 – 2 |
| ಅನುವಾದಕನ ನುಡಿನಮನ | 3 |
| ಅಷ್ಟಾವಕ್ರಗೀತೆಯಿಂದ ಆಯ್ದ ರತ್ನಗಳು | 5 – 111 |



ಪರಮಪೂಜ್ಯ ಶ್ರೀಮದ್ ಸ್ವಾಮಿ ಶಾಂತಾನಂದ ಪುರಿ ಮಹಾರಾಜರು

# ಪ್ರಸ್ತಾವನೆ

ಈ ಲೇಖಕನು ಬಹು ಮೊದಲು, ಅದ್ವೈತ ಸಿದ್ಧಾಂತದ ಅತ್ಯಮೋಘ ಸಾಧನ ಗ್ರಂಥವಾದ 'ಅಷ್ಟಾವಕ್ರಗೀತ'ವನ್ನು ಕುರಿತು ಎರಡು ಕೃತಿಗಳನ್ನು ಬರೆದದ್ದು ನಿಜವೇ. ಅವು The quantum Leap into Absolute (ಮೂಲಕೃತಿಯ ಸಂಗ್ರಹ) ಮತ್ತು Instant Self realisation. ಈ ಎರಡೂ ಕೃತಿಗಳು ವೆಬ್‌ಸೈಟ್‌ನಲ್ಲಿ ದೊರೆಯುತ್ತವೆ. ಅದು ಹೇಗೋ ಲೇಖಕನು ಮೂಲಕೃತಿಗೆ ಪೂರ್ಣ ನ್ಯಾಯವನ್ನು ಮಾಡಲಾಗಿಲ್ಲ ಎಂದು ಭಾವಿಸಿ, ಆತನ ಮನಸ್ಸು ಅತೃಪ್ತವಾಗಿಯೇ ಇತ್ತು. 'ಅಷ್ಟಾವಕ್ರಗೀತ'ದ 300 ರಷ್ಟು ಶ್ಲೋಕಗಳಲ್ಲಿ ಪ್ರತಿಯೊಂದೂ ಪ್ರಸನ್ನ ಉಜ್ವಲ ರತ್ನದ 'ಅತಿಶುದ್ಧ ಕಿರಣ'ವೇ ಆಗಿರುವಾಗ, ಅವುಗಳಲ್ಲಿ ಕೆಲವೇ ರತ್ನಗಳನ್ನು ಆಯ್ಕೆ ಮಾಡುವುದು, ವಿಸ್ತೃತವಾದ ವ್ಯಾಖ್ಯಾನದೊಡನೆ ಅವುಗಳನ್ನು ನಿರೂಪಿಸುವುದು ಸುಲಭವಾದ ಸಾಹಸವಾಗಿಲ್ಲ.

ಅನೇಕರು ಪ್ರಶಂಸಾ ಪತ್ರವನ್ನು ನೀಡಿರುವಂತೆ, 'ಅಷ್ಟಾವಕ್ರ'ರು ಒಂದು ಹೊಸ ಸಿದ್ಧಾಂತವನ್ನು ಪ್ರಚುರ ಪಡಿಸಿದ ಪ್ರಖರ ಕ್ರಾಂತಿಕಾರರೇನಲ್ಲ. ಅಷ್ಟಾವಕ್ರಗೀತದಲ್ಲಿ ಅವರು ಹೇಳಿರುವುದಾದರೂ, ಭಗವದ್ಗೀತೆ ಹಾಗೂ ಅನ್ನಪೂರ್ಣೋಪನಿಷತ್ತು, ಅಧ್ಯಾತ್ಮೋಪನಿಷತ್ತು, ವರಾಹೋಪನಿಷತ್ತು, ಅವಧೂತೋಪನಿಷತ್ತು, ಸಂನ್ಯಾಸೋಪನಿಷತ್ತು, ಕೈವಲ್ಯೋಪನಿಷತ್ತು, ಆತ್ಮ ಪ್ರಭೋಧೋಪನಿಷತ್ತು, ಸರ್ವಸಾರೋಪನಿಷತ್ತು, ನಿರಾಲಂಬೋಪನಿಷತ್ತು, ತೇಜೋಬಿಂದೋಪನಿಷತ್ತು, ಕಠೋಪನಿಷತ್ತು, ಬ್ರಹ್ಮಬಿಂದೂಪನಿಷತ್ತು, ಮಹೋಪನಿಷತ್ತು, ಯೋಗ ಶಿಖಾ ಉಪನಿಷತ್ತು, ಮುಕ್ತಿಕೋಪನಿಷತ್ತು, ಕೇನೋಪನಿಷತ್ತು ಮತ್ತು ಆದಿಶಂಕರರ ಪ್ರಕರಣ ಗ್ರಂಥಗಳಾದ ವಿವೇಕ ಚೂಡಾಮಣಿ ಮತ್ತು ಅಪರೋಕ್ಷಾನುಭೂತಿ, ಇತ್ಯಾದಿ ಕೃತಿಗಳಲ್ಲಿ ಸಹ ಕಾಣಬರುತ್ತವೆ. ಅಷ್ಟಾವಕ್ರರು ಅವೆಲ್ಲವನ್ನೂ ಅತ್ಯಂತ ಆಕರ್ಷಕವಾದ ರೀತಿಯಲ್ಲಿ, ಚಾಟಿಯ ಪೆಟ್ಟಿನಂತಹ ತೀವ್ರ ರೀತಿಯಲ್ಲಿ ನಿರೂಪಿಸಿದ್ದಾರೆ. ಅವರ ಭಾಷೆ ನೇರ ಹಾಗೂ ಸರಳ. ಕೆಲವು ಶ್ಲೋಕಗಳಂತೂ ಜಾನಪದ ಸಂಗೀತದ ನಡುವಿನ ಸಮಯೋಕ್ತಿಗಳಂತೆ ಮನಸ್ಸಿಗೆ ತಟ್ಟುತ್ತವೆ. ಉದಾಹರಣೆಗೆ– ವಿಶ್ವಸಾಕ್ಷೀ ಸುಖೀಭವ (1–5), ನ ಭಯಂ ತಸ್ಯ ಕುತ್ರಚಿತ್ (IV-6) ನ ಹೃಷ್ಯತಿ ನ ಕುಪ್ಯತಿ (VIII-2), ವೀತತೃಷ್ಣಃ ಸುಖೀ ಭವ (X-3), ನ ಚಿನ್ತಾ ಮುಕ್ತಯೇ ಮಮ (XIV-3), ನಿರಪೇಕ್ಷಃ ಸುಖಂ ಚರ (XV-4), ನ ತೇ ವೃದ್ಧಿರ್ನ ವಾ ಕ್ಷತಿಃ (XV-II), ನಿಃಸಂಕಲ್ಪಃ ಸುಖೀ ಭವ (XV-15), ಕಿಮಭ್ಯಸ್ಯತಿ ಬಾಲವತ್, ಯದಾ ನಾಹಂ ತದಾ ಮೋಕ್ಷೋ, (VIII-4), ನಾಹಂ ದೇಹೋ ನ ಮೇ ದೇಹೋ (XI-6), ತ್ಯಜೈವ ಧ್ಯಾನಂ ಸರ್ವತ್ರ (XV-20), ಮತ್ತು ಚಿತ್ತಂ ಮುಕ್ತಸ್ಯ ರಾಜತೇ (XVII-30), ಇವೆಲ್ಲ ತುಂಬ ಸುಂದರ, ನೆನಪಿಡಲು ಸುಲಭ.

ಈ ಶ್ಲೋಕಗಳಲ್ಲಿ ಪ್ರತಿಯೊಂದೂ, ಒಮ್ಮೆ ಓದಿದರೂ ಸಾಕು, ನಮ್ಮನ್ನು ಜೀವನ್ಮುಕ್ತಿಗೇ ನೇರವಾಗಿ ಚಿಮ್ಮಿಸಿ ಬಿಡುವ ಬಾಣವಾಗಿಬಿಡುತ್ತದೆ. ನಾವೆಲ್ಲರೂ ಇಹಜನ್ಮದಲ್ಲೇ ಜೀವನ್ಮುಕ್ತರಾಗುವ, ಹಾಗೂ ಈ ಮಾರ್ಗದಲ್ಲಿ ಕ್ರಮಿಸುತ್ತಿರುವ ಎಲ್ಲರಿಗೂ ಸ್ಫೂರ್ತಿಯ ಸೆಲೆಯಾಗುವ, ಧನ್ಯತೆ ನಮಗೆ ಉಂಟಾಗಲಿ.

ಸಾಹಿತ್ಯ, ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಸುಪರಿಚಿತರಾಗಿರುವ, ನಮಗೆ ಅತ್ಯಂತ ಪ್ರಿಯರಾದ ಡಾ॥ ಎ.ಎಸ್.ವೇಣುಗೋಪಾಲರಾವ್ ಅವರು ಆಂಗ್ಲ ಭಾಷೆಯಲ್ಲಿ ನಾನು ರಚಿಸಿರುವ ಅಷ್ಟಾವಕ್ರಗೀತೆಯ ಅಣಿಮುತ್ತುಗಳನ್ನು ಕನ್ನಡದ ಬಂಧದಲ್ಲಿ ಪೋಣಿಸಿರುವುದು ಸುಂದರವಾಗಿಯೂ ಸುಭಗವಾಗಿಯೂ ಇರುವುದೇ ಅಲ್ಲದೇ ಮೂಲ ಆಶಯವನ್ನು ಕನ್ನಡದಲ್ಲಿ ಸೊಗಸಾಗಿ ಮೂಡಿಸಿರುವುದು ಶ್ಲಾಘನೀಯವಾಗಿದೆ. ಇವರು ಈ ಹಿಂದೆಯೇ ನನ್ನ ಕೆಲವು ಗ್ರಂಥಗಳ ಕನ್ನಡ ಅವತರಣಿಕೆಗೆ ಕಾರಣಕರ್ತರಾಗಿದ್ದಾರೆ. ಇವರಿಗೂ ಇವರ ಕುಟುಂಬದವರೆಲ್ಲರಿಗೂ ನನ್ನ ಪರಿಪೂರ್ಣ ಆಶೀರ್ವಾದ ಇದೆ.

ಸ್ವಾಮಿ ಶಾಂತಾನಂದ ಪುರಿ

# ಅನುವಾದಕನ ನುಡಿನಮನ

"ಓಂ ನಮೋ ಭಗವತೇ ಶ್ರೀರಮಣಾಯ"

ಸ್ವಾಮಿ ಶ್ರೀ ಶಾಂತಾನಂದಪುರಿ ಅವರು Selected Gems from Ashtavakra Gita ಎಂಬ ಈ ಅನನ್ಯ ಕೃತಿ-ಅನುವಾದದ ಕೈಂಕರ್ಯಕ್ಕಾಗಿ ಈ ವಿನೀತ ಭಕ್ತನನ್ನು ಆಯ್ಕೆ ಮಾಡಿಕೊಂಡದ್ದು ಆತನ ಸೌಭಾಗ್ಯ. ಅದು ಪೂಜ್ಯ ಸ್ವಾಮೀಜಿಯವರಿಗೆ ಅನುವಾದಕನಲ್ಲಿರುವ ಅಸೀಮವಾತ್ಸಲ್ಯ, ಅಂತಃಕರಣದ, ದ್ಯೋತಕ. ಅಷ್ಟಾವಕ್ರ ಗೀತದ ಒಂದು ಶ್ಲೋಕದಲ್ಲಿ "ಬಹುನಾತ್ರ ಕಿಮುಕ್ತೇನ" ಎಂಬ ಧ್ವನಿಪೂರ್ಣ ಉದ್ಗಾರವಿದೆ. (XIII-80) ಕೃತಿಯ ಮಹತ್ವ, ಅನನ್ಯತೆಯ ಬಗೆಗೆ ಸ್ವಾಮೀಜಿಯವರೇ ಹೇಳುವುದನ್ನೆಲ್ಲ ಹೇಳಿಬಿಟ್ಟಿದ್ದಾರೆ. ಈ ಕೃತಿ ಮನೋಹರವಾದ ಕಾವ್ಯವೂ ಹೌದು, ಅದ್ವೈತ ತತ್ತ್ವದ ಉನ್ನತ ಶಿಖರವೂ ಹೌದು. ಜಾನಪದ ಸಂಗೀತದಲ್ಲಿ ಜೀವದ್ಧ್ವನಿಯಾದ ಸೂಕ್ತಿ ಸುಧಾಮೃತವೂ ಹೌದು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಪ್ರತಿ ಶ್ಲೋಕದ ಬಗೆಗೆ ಅವರು ನೀಡುವ ವ್ಯಾಪಕ ವ್ಯಾಖ್ಯಾನ, ಆಲೋಚನಾಮೃತವೂ, ಆಪಾತಮಧುರವೂ, ತಪೋನಿಷ್ಠರಿಗೆ ಮಾತ್ರ ಸಿದ್ಧಿಸತಕ್ಕ ಅನುಭವಾಮೃತವೂ ಆಗಿದೆ. ಅವರ ಅನುಗ್ರಹವಾಹಿನಿ ಈ ಅನುವಾದಕನೆಡೆಗೆ ಹರಿದು ಬರುವಂತೆ ಮಾಡಿ. ಆತನನ್ನು ಧನ್ಯವಾಗಿಸಿದ ಈ ಕನ್ನಡ ಅನುವಾದಕ್ಕೆ ಕಾರಣಕರ್ತರಾದ ಶ್ರೀ ಎಲ್. ಸುದರ್ಶನ, ಮಂಗಳೂರು ಅವರಿಗೂ, ಆತ್ಮೀಯ ಹಿತೈಷಿ ಶ್ರೀಯುತ ಡಿ.ಎನ್. ಆನಂದ್ ಅವರಿಗೂ, ಅನುವಾದಿತ ಕೃತಿಯನ್ನು ಅಚ್ಚುಕಟ್ಟಾಗಿಯೂ ನಯನ ಮನೋಹರವಾಗಿಯೂ ಮುದ್ರಿಸಿ ಪ್ರಕಟಿಸುತ್ತಿರುವ ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್‌ನ ಮಿತ್ರ ವರ್ಗಕ್ಕೂ ಅದರಲ್ಲೂ ವಿಶೇಷವಾಗಿ ಆತ್ಮೀಯ ಶ್ರೀ ಪಿ.ಎಸ್. ವೆಂಕಟೇಶ್‌ಬಾಬುರವರಿಗೂ ಅನುವಾದಕನ ವಿನಮ್ರ ನುಡಿನಮನ.

"ಬಹುನಾತ್ರ ಕಿಮುಕ್ತೇನ"

ಅನುವಾದಕ

# ಅಷ್ಟಾವಕ್ರಗೀತೆಯ ಆಯ್ದ ರತ್ನಗಳು

॥ ಓಂ ನಮೋ ಭಗವತೇ ಶ್ರೀ ರಮಣಾಯ ॥
ಅಷ್ಟಾವಕ್ರ ಗೀತೆಯಿಂದ ಆರಿಸಿದ ರತ್ನಗಳು

ಅಷ್ಟಾವಕ್ರ ಗೀತೆಯು, ನಮ್ಮ ಪರಮಗುರಿಯಾದ ಮೋಕ್ಷಕ್ಕೆ ನೇರಮಾರ್ಗದ ಗುರಿಯನ್ನು ತಕ್ಷಣ ಗಳಿಸಿಕೊಡುವ ಕೆಲವು ಶೀಘ್ರ ಫಲದಾಯಕ ಕ್ಯಾಪ್ಸೂಲ್‌ಗಳಿಂದ ಪ್ರಾರಂಭವಾಗುತ್ತದೆ. ಅತ್ಯುನ್ನತ ಸ್ತರದ ಜ್ಞಾನವನ್ನು ಸಾಧಿಸಿಯೂ ಈ ಸ್ಥಿತಿಯನ್ನು ಪಡೆಯಲು ಅಸಮರ್ಥರಾದವರಿಗೂ ಪರಮಗುರಿಯನ್ನು ಅತ್ಯಲ್ಪಕಾಲದಲ್ಲಿ ಈ ರತ್ನಗಳು ಸಾಧಿಸಿಕೊಡುತ್ತವೆ ಎಂದು ತಿಳಿಯಬಹುದಾಗಿದೆ. ಇಂತಹ ಮೋಕ್ಷ ಕ್ಯಾಪ್ಸೂಲ್‌ಗಳನ್ನು ಪ್ರಾರಂಭದಲ್ಲಿ ಮಾತ್ರವಲ್ಲದೆ. ಅಷ್ಟಾವಕ್ರ ಗೀತೆಯ ಹಲವಾರು ಕಡೆಗಳಲ್ಲಿ, ಮಧ್ಯದಲ್ಲಿ, ಕೊನೆಯಲ್ಲಿ ಸಹ ಕಾಣಬಹುದಾಗಿದೆ. ಈ ನಡುವಿನಲ್ಲಿ, ಅಷ್ಟಾವಕ್ರರು ಅಧ್ಯಾತ್ಮ ಪಥದ ಯಾವುದೇ ರೀತಿಯ ಸಾಧನೆಗೆ ಪೂರ್ವಭಾವಿಯಾದ ಕೆಲವು ಕನಿಷ್ಠ ಅಗತ್ಯಗಳನ್ನೂ ಸೇರಿಸಿದ್ದಾರೆ. ಆರಿಸಿದ ಕೆಲವು ಅಂತಹ ರತ್ನಗಳನ್ನು ಈ ಕೆಳಗೆ ನೀಡಲಾಗಿದೆ:

1 **ಧರ್ಮಾಧರ್ಮೌ ಸುಖಂ ದುಃಖಂ ಮಾನಸಾನಿ ನತೇ ವಿಭೋ।**
**ನ ಕರ್ತಾಽಸಿ ನ ಭೋಕ್ತಾಸಿ ಮುಕ್ತ ಏವಾಸಿ ಸರ್ವದಾ ॥**(1–6)

ಧರ್ಮ. ಅಧರ್ಮ, ಸುಖ. ದುಃಖ ಈ ಎಲ್ಲವೂ ಕೇವಲ ಮನಸ್ಸಿನದು. ನಿನಗೆ ಸೇರಿದುದೇ ಅಲ್ಲ. ನೀನು ಕರ್ತನೂ ಅಲ್ಲ, ಭೋಕ್ತನೂ ಅಲ್ಲ. ನೀನು ಸದಾ ಸರ್ವದಾ ಮುಕ್ತನೇ ಆಗಿದ್ದೀಯೆ.

ಪರಿಪೂರ್ಣ ಆತ್ಮದ ಅಖಂಡ ಮತ್ತು ಅವಿಭಾಜ್ಯ ಅಂಗವೇ ನೀನು. ನಿನ್ನಿಂದ ಮಾಡಲ್ಪಟ್ಟಿದ್ದು ಎಂದು ತೋರುವ ಎಲ್ಲ ಕಾರ್ಯಗಳೂ ಈ ಸಮಗ್ರತೆಯಿಂದಲೇ ಹೊರಹೊಮ್ಮಿದುದು.

ವಿಶಾಲ ಸಾಗರದಲ್ಲಿ, ಪ್ರತಿಯೊಂದು ಅಲೆಯೂ ತನ್ನ ಶಕಿಯಿಂದಲೇ ಉದ್ಭವಿಸುತ್ತಿದೆ ಎಂದು ಭಾವಿಸಿ ಇತರ ಅಲೆಗಳೊಂದಿಗೆ ಸ್ಪರ್ಧಿಸುತ್ತದೆ. ಅದು ತಪ್ಪು ಕಲ್ಪನೆ. ಪೂರ್ಣಸಾಗರದಿಂದಲೇ ಅದರ ಶಕ್ತಿಯಿಂದಲೇ ಎಲ್ಲ ಅಲೆಗಳೂ ಚಲಿಸುತ್ತವೆ, ತನ್ನ ಏಳು ಬೀಳುಗಳಿಗೆ ಅದು ಕೇವಲ ಸಾಕ್ಷಿಯಾಗಿದೆ. ನಾವೆಲ್ಲರೂ ಪರಿಪೂರ್ಣ ಪ್ರಜ್ಞೆಯ ಅಲೆಗಳು ಮಾತ್ರ. ದೇಹ–ಮನಸ್ಸಿನ ಸಂಮಿಶ್ರಣ ಎಂಬುದು, ಸ್ವಪ್ನದಲ್ಲಿ ಗೋಚರಿಸುವ ಹಲವಾರು ದೇಹಗಳಂತೆ, ಮನಸ್ಸಿನ ಕಲ್ಪನೆ ಮಾತ್ರ. ಎಲ್ಲ ದೈಹಿಕ ಚಟುವಟಿಕೆಗಳನ್ನೂ ಪುಣ್ಯ–ಪಾಪ ಎಂದು ವರ್ಗೀಕರಿಸುವುದು ಮನಸ್ಸಿನ ಅವಸ್ಥೆಯೇ. ಪುಣ್ಯ ಕರ್ಮಗಳು ಪಾಪಕರ್ಮಗಳು ಸುಖ– ದುಃಖಗಳಲ್ಲಿ ಪರಿಣಮಿಸುತ್ತವೆ ಎಂದು ಭಾವಿಸಲಾಗುತ್ತದೆ. ನಾವು ಕರ್ತೃಗಳಲ್ಲವೇ ಅಲ್ಲ ಎಂದು ಅರ್ಥಮಾಡಿಕೊಂಡಾಗ ಕರ್ಮಗಳ ಫಲವನ್ನು ಅನುಭವಿಸುವವರು ನಾವಲ್ಲವೇ ಅಲ್ಲ. ಕರ್ಮದ ಫಲಗಳು ನಮ್ಮನ್ನು ಬಂಧಿಸುವುದಿಲ್ಲ. ಏಕೆಂದರೆ ನಾವು ಅನಂತ ಸತ್ಯವೇ ಅದುದರಿಂದ ನಾವು ಸದಾ ಸ್ವತಂತ್ರರು, ಮುಕ್ತರು.

ಒಂದು ಜನ್ಮದಲ್ಲಿ ನಾವು ಮಾಡಿದ ಕರ್ಮಗಳು ನಮ್ಮನ್ನು ಬಂಧಿಸು ವುದರಿಂದ, ಕರ್ಮದ ಫಲಗಳನ್ನು ಅನುಭವಿಸಲು ಮತ್ತೆ ಮತ್ತೆ ಜನ್ಮ ತಾಳಲೇ ಬೇಕಾಗುತ್ತದೆ. ದೇಹ–ಮನಸ್ಸು ಈ ಸಂಮಿಶ್ರಣವನ್ನು ಒಮ್ಮೆಲೇ ತಿರಸ್ಕರಿಸಿ ಕರ್ತತ್ವ ಭಾವವನ್ನು ಕಿತ್ತೊಗೆದಾಗ ಈ ಹುಟ್ಟು–ಸಾವುಗಳಿಗೆ ತುತ್ತಾಗುವುದೇ ಇಲ್ಲ. ಸದಾ ಮುಕ್ತರೇ ಆಗುತ್ತೇವೆ.

ಅಷ್ಟಾವಕ್ರರು ಈ ಕರ್ತೃತ್ವ ಭಾವದ ಬೇರಿಗೇ ಕೊಡಲಿಪೆಟ್ಟು ಕೊಡುತ್ತಾರೆ. ಆದರೆ ಭಗವದ್ಗೀತೆ ಸ್ವಲ್ಪ ರಿಯಾಯಿತಿ ತೋರಿ, ಕರ್ಮಗಳನ್ನು ಮಾಡುತ್ತಲೇ ಇರುವಾಗಲೂ ಅದರ ಫಲವನ್ನು ಅಪೇಕ್ಷಿಸಬಾರದು. ಫಲದಾತೃ ಭಗವಂತನಿಗೇ ಅರ್ಪಿಸಬೇಕು ಎನ್ನುತ್ತದೆ. "ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ" (ಭ.ಗೀ.2–47)

ಭಗವದ್ಗೀತೆಯು ಮಾರ್ಗವನ್ನು ತೋರಿಸುತ್ತದೆ. ಅಷ್ಟಾವಕ್ರ ಗೀತೆಯಾದರೋ ಗುರಿಯತ್ತಲೇ ನೇರವಾಗಿ ಕರೆದೊಯ್ಯುತ್ತದೆ.

ಅಷ್ಟಾವಕ್ರರ ಭೋಧನೆಯ ಮತ್ತೊಂದು ಅಂಶವೆಂದರೆ. ಅದು ಕರ್ತೃತ್ವ ಭಾವವನ್ನು ಕುರಿತ ಎಲ್ಲ ಸಮರ್ಥನೆಯನ್ನೂ ನಿಷೇಧಿಸು



ವುದಲ್ಲದೆ. ಸಾಧಕನು ಎಲ್ಲ ಕ್ರಿಯೆ ಹಾಗೂ ಉದ್ಯಮಗಳನ್ನೂ ವರ್ಜಿಸಿ ಬಿಡಬೇಕು ಹಾಗೂ ಭವಿಷ್ಯಕ್ಕಾಗಿ ಎಂದು ಯಾವ ಯೋಜನೆಯನ್ನೂ ಹೊಂದಿರಬಾರದು ಎನ್ನುತ್ತದೆ. ಉಸಿರಾಟ ಮುಂತಾದ ಕೆಲವು ಅತ್ಯಗತ್ಯ ಕೆಲಸಗಳನ್ನು ಮಾಡಬಹುದಷ್ಟೆ. ಅಂತಹ ಸಂದರ್ಭಗಳಲ್ಲೂ ಈ ಎಲ್ಲ ಕ್ರಿಯೆಗಳೂ ಸಂಪೂರ್ಣತೆಯ ಹಂತದಲ್ಲಿ ಮಾತ್ರ ಎಂದು ತಿಳಿಯತಕ್ಕದ್ದು. ಉಸಿರನ್ನು ನಿಶ್ವಾಸಿದೆವೆಂದರೆ ಅದನ್ನು ಉಚ್ಛ್ವಾಸಿಸುವುದಕ್ಕಾಗಿ, ನಾವು ಮಾಡುವುದು ಮತ್ತೇನೂ ಇಲ್ಲ. ಆದುದರಿಂದ ವ್ಯಕ್ತಿಗೆ ಯಾವ ಕರ್ತೃತ್ವವನ್ನೂ ಆರೋಪಿಸುವಂತಿಲ್ಲ. ಈ ಅಂಶವನ್ನೂ ಭಗವದ್ಗೀತೆಯಲ್ಲಿ– "ಸರ್ವಾರಂಭ ಪರಿತ್ಯಾಗೀ" ಎಂದು ಒತ್ತಿಹೇಳಲಾಗಿದೆ. ಈ ವಿಷಯದಲ್ಲಿ ಶ್ರೀ ಶಂಕರರು ಆರಂಭ ಎನ್ನುವುದಕ್ಕೆ ಎಲ್ಲಕ್ರಿಯೆಗಳು–ಕ್ರಿಯೆಗಳ ಆರಂಭ ಮಾತ್ರವಲ್ಲ ಎಂದೇ ಅರ್ಥೈಸಿದ್ದಾರೆ. ಉಪನಿಷತ್ತು ಸಹ ಕರ್ಮದಿಂದ ಅಮೃತತ್ವ ಖಂಡಿತ ದೊರೆಯುವುದಿಲ್ಲ ಎಂದೇ ಸ್ಪಷ್ಟಪಡಿಸಿದೆ. "ನ ಕರ್ಮಣಾ ನ ಪ್ರಜಯಾ..." [ಮಹಾ ನಾರಾಯಣೋಪನಿಷದ್]

ಶ್ರೀ ರಮಣ ಮಹರ್ಷಿಗಳ ಜೀವನದಲ್ಲಿ ಒಂದು ಘಟನೆಯ ಬಗ್ಗೆ ಪ್ರಾಸಂಗಿಕವಾಗಿ ಕೇಳಿ ತಿಳಿದಿದ್ದೇನೆ. ಒಮ್ಮೆ ಒಬ್ಬ ವ್ಯಕ್ತಿ ಭಗವಾನ್ ರಮಣರ ಬಳಿ ಬಂದು ಅವರನ್ನು ಕೇಳಿದ: "ಪೂಜ್ಯರೇ ನಾನು ದೇವಾಲಯಗಳನ್ನು ಕಟ್ಟಿಸಿದ್ದೇನೆ. ಶಾಲೆಗಳು, ಹಾಸ್ಟೆಲ್‌ಗಳನ್ನು ಅಂಧರಿಗಾಗಿ ನಿರ್ಮಿಸಿದ್ದೇನೆ. ಅದೆಷ್ಟೋ ಸಾಮಾಜಿಕ ಸೇವಾಕಾರ್ಯಗಳನ್ನು ಮಾಡಿದ್ದೇನೆ. ಈಗ ಮೋಕ್ಷ ಸಾಧನೆಗೆ ತೊಡಗಬೇಕೆಂದು ನಿರ್ಧರಿಸಿದ್ದೇನೆ. ಅದಕ್ಕಾಗಿ ನಾನು ಮಾಡಬೇಕಾದುದೇನು?" ಭಗವಾನರು ಅವನಿಗೆ ಹೀಗೆ ಉತ್ತರಿಸಿದರು: "ಏನನ್ನೂ ಮಾಡುವುದು ಬೇಡ. ಎಲ್ಲ ಚಟುವಟಿಕೆ ಗಳನ್ನೂ ನಿಲ್ಲಿಸಿ–ನೀನು ಹೇಗಿದ್ದೀಯೋ ಹಾಗೆ ನಿಶ್ಚಲವಾಗಿ ಇರು!"

ಮೋಕ್ಷ ಕ್ಯಾಪ್ಸೂಲ್‌ಗಳಲ್ಲಿ ಈ ಶ್ಲೋಕ ಹಾಗೂ ಮುಂದಿನದು ಸುಲಭೋಪಾಯಗಳನ್ನು ಬಿಂಬಿಸುತ್ತವೆ.

**ಮುಕ್ತಾಭಿಮಾನೀ ಮುಕ್ತೋಹಿ ಬದ್ಧೋ ಬದ್ಧಾಭಿಮಾನ್ಯಪಿ।**
**ಕಿಂವದಂತೀಹ ಸತ್ಯೇಯಮ್ ಯಾ ಮತಿ: ಸಾ ಗತಿರ್ಭವೇತ್॥**

(1-11)

"ನಾನು ಮುಕ್ತ–ಸ್ವತಂತ್ರ ಎಂದು ಮನಸ್ಸಿನಲ್ಲಿ ದೃಢನಿಶ್ಚಯ ಹೊಂದಿದವನು ಮುಕ್ತನೇ ಆಗಿದ್ದಾನೆ. ನಾನು ಬದ್ಧ ಎಂಬ ನಿಶ್ಚಯ

ಉಳ್ಳವನು ಬದ್ಧನೇ ಆಗುತ್ತಾನೆ. ನಾವು ಹೇಗೆ ಚಿಂತಿಸುತ್ತೇವೋ ಅದೇ ಆಗಿ ಬಿಡುತ್ತೇವೆ." ಎಂಬ ಹಳೆಯ ಸೂಕ್ತಿಯು ಈ ಸಂದರ್ಭದಲ್ಲಿ ಸತ್ಯವೇ ಆಗಿದೆ.

ಗುರಿಯನ್ನು ನೇರವಾಗಿ ಮುಟ್ಟುವ ಮತ್ತೊಂದು ಅಸ್ತ್ರ ಇದು. ಗ್ರಂಥಗಳು ಹಾಗು ಗುರುಗಳಿಂದ, ಜನ್ಮ ಜನ್ಮಗಳಲ್ಲಿ 'ನಾವೆಲ್ಲರೂ ಬದ್ಧರು' ಎಂಬ ಕಾಲ್ಪನಿಕ ಮಾಯೆಗೆ ಒಳಗಾಗಿ ಬಿಟ್ಟಿದ್ದೇವೆ. ಇದರ ಪರಿಣಾಮವಾಗಿಯೇ ನಾವು ದುಃಖ ಸಂಕಟಗಳೇ ಪರಿಣಮಿಸುವ ಬಗೆ ಬಗೆಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತೇವೆ. ಈ ಸಂಸಾರವೆಂಬ ಅಗಾಧ ಪ್ರಂಪಂಚದಲ್ಲಿ ನಾವು ಒಬ್ಬೊಬ್ಬರು ಬೇರೆ ಬೇರೆ ವ್ಯಕ್ತಿಗಳು ಎಂಬ ಕೃತಕವಾದ ಪ್ರಬಲ ಸಂಮೋಹನಕ್ಕೆ ಬಳಗಾಗಿಬಿಟ್ಟಿದ್ದೇವೆ. ಇದಕ್ಕೆ ಪ್ರತಿಯಾಗಿ "ನಾನು ಸದಾ ಮುಕ್ತನೇ ಆಗಿದ್ದೇನೆ" ಎಂಬ ಸಂಮೋಹನವನ್ನು ಮಾರೊಡ್ಡುವುದರಿಂದ ಮಾತ್ರ ನಾವು ಈ ಕೃತಕ ಸಂಮೋಹನದಿಂದ ಮುಕ್ತರಾಗಬಹುದು. ಇದೊಂದೇ ದಾರಿ. ಪ್ರಬಲ ದೃಢನಿಶ್ಚಯ ಎಂದರೆ ಕೇವಲ ಬೌದ್ಧಿಕವಾಗಿ ನಿಶ್ಚಯದಲ್ಲಿ ನಿಲ್ಲುವುದು– "ನಾನು ಬದುಕಿದ್ದೇನೆ. ನಾನು ಇದ್ದೇನೆ" ಎಂಬ ದೃಢ ನಿಶ್ಚಯದಂತೆ. ಇದರ ಅರ್ಥವೆಂದರೆ ನಮ್ಮ ದಿನನಿತ್ಯದ ಬದುಕಿನಲ್ಲಿ ನಾವು ಕಾಲ ದೇಶಗಳಿಂದ ಎಂದೂ ಬದ್ಧರಾದವರಲ್ಲ ಎಂಬುದೇ. ಉದಾಹರಣೆಗೆ, ಊಟದ ಗಂಟೆ ಬಾರಿಸುತ್ತಿದ್ದಂತೆಯೇ ಅದಕ್ಕಾಗಿ ದೌಡಾಯಿಸುವುದಲ್ಲ. ಎಲ್ಲಿದ್ದೇವೋ ಅಲ್ಲಿಯೇ ಇರೋಣ. ಇಂತಹ ಸಂದರ್ಭ ಯಾವಾಗ ಬರಬಲ್ಲದು ಎಂದರೆ ಈ ನಿರ್ದಿಷ್ಟ ದೇಹವೇ ನಾನು ಎಂಬ ಭಾವವನ್ನು ತಿರಸ್ಕರಿಸಿ, ನಾವು ಪರಿಪೂರ್ಣ ಆತ್ಮ ಅದು ದೇಹ–ಮನ ಸಂಘಾತದ ಗುಣಗಳಾದ ಹಸಿವು ಬಾಯಾರಿಕೆ ಇತ್ಯಾದಿಗಳಿಂದ, ಬಾಧಿತವಾಗು ವಂಥದಲ್ಲ ಎಂಬ ನಿಶ್ಚಯ ಬುದ್ಧಿಯಿಂದ ಮಾತ್ರ. ಹಾಗೆಯೇ ಪ್ರೀತಿ (ರಾಗ) ದ್ವೇಷ ಎಂಬ ಇತರರನ್ನು ಅಥವಾ ಇತರ ವಸ್ತುಗಳನ್ನು ಕುರಿತ ಭಾವಗಳೂ ನಮ್ಮನ್ನು ಬಾಧಿಸಿ ಬಿಡಬಲ್ಲವು. ನಾವು ಒಮ್ಮೆ ಆತ್ಮವೇ ಎಂಬ ನೆಲೆಯಲ್ಲಿ ನಿಂತೆವೆಂದರೆ. ನಿಜವಾದ ಇತರ ವಸ್ತುಗಳೇ ಇರುವುದಿಲ್ಲ. ಆತ್ಮನಿಂದ ಬೇರೆಯಾದ ಯಾವುದೂ ಇಲ್ಲದಿರುವುದರಿಂದ ಇಷ್ಟ–ಅನಿಷ್ಟ, ರಾಗ ದ್ವೇಷ, ಆಕರ್ಷಣೆ–ವಿಕರ್ಷಣೆ ಇತ್ಯಾದಿಗಳು ಉಂಟಾಗುವುದೇ ಇಲ್ಲ.



ದೇಹಾಭಿಮಾನ ಪಾಶೇನ ಚಿರಂ ಬದ್ಧೋಽಸಿ ಪುತ್ರಕ।
ಬೋಧೋಽಹಂ ಜ್ಞಾನ ಖಡ್ಗೇನ ತಂ ನಿಕೃತ್ಯ ಸುಖೀ ಭವ॥ **(1–14)**

ಓಹ್ ನನ್ನ ಪುತ್ರನೇ ದೇಹಾಭಿಮಾನದ ಕಾರಣದಿಂದಲೇ ಬಹುಕಾಲ ದಿಂದ ನೀನು ಬದ್ಧನಾಗಿದ್ದೀಯೇ. "ನಾನು ಪರಿಶುದ್ಧ ಜ್ಞಾನವೇ" ಎಂಬ ಖಡ್ಗದಿಂದ ಈ ವ್ಯಾಮೋಹವನ್ನು ಕತ್ತರಿಸಿ ಹಾಕು ಸದಾ ಆನಂದಮಯನಾಗಿರು.

ಪ್ರತಿಯೊಂದು ಜನ್ಮದಲ್ಲೂ 'ದೇಹವೇ ನಾನು' ಎಂಬ ಮಿಥ್ಯಾಕಲ್ಪನೆ ಯಿಂದ ಸಹಜವಾಗಿಯೇ ಪತ್ನಿ ಪುತ್ರ ಮತ್ತು ಬಂಧು ಬಾಂಧವರು ಎಂಬ ವ್ಯಾಮೋಹದಲ್ಲಿ ಉಳಿದೆಲ್ಲವರಲ್ಲಿ ಪಕ್ಷಪಾತದ ಧೋರಣೆಯನ್ನು ತೋರುತ್ತೇವೆ. ಇದರಿಂದ ನಮ್ಮ ವ್ಯಾವಹಾರಿಕ ಬದುಕಿನಲ್ಲಿ ಹಲವಾರು ಸಮಸ್ಯೆಗಳಲ್ಲಿ ತೊಡಕಿಕೊಳ್ಳುತ್ತೇವೆ. ಪ್ರತಿಯೊಂದು ಜನ್ಮದಲ್ಲೂ ಈ ಭಾವವೇ ಮರುಕೊಳಿಸುತ್ತಾ, ಈ ವ್ಯಾಮೋಹವು ಇನ್ನಷ್ಟು ಮತ್ತಷ್ಟು ಬಲವಾಗುತ್ತಾ ಹೋಗುತ್ತದೆ. ಒಂದೇ ವಿದ್ಯುಚ್ಛಕ್ತಿಯು ಎಲ್ಲಾ ಬಲ್ಬ್‌ಗಳಲ್ಲೂ ಪ್ರವಹಿಸುತ್ತಿರುವಂತೆ ಪ್ರತಿಯೊಂದು ದೇಹವೂ ನಿಮ್ಮದೇ ಆಗಿದೆ. ಅಂತಿಮ ಸತ್ಯವಾದ ನೀವೇ ಅವರೆಲ್ಲರಲ್ಲೂ ಇದ್ದೀರಿ. ದೇಹ–ಮನಸ್ಸುಗಳ ಸಂಯೋಜನೆ ಬೇರೆ ಬೇರೆ ಆದರೂ ಎಲ್ಲದರಲ್ಲೂ ತುಂಬಿಕೊಂಡಿರುವ ಶಕ್ತಿ ಒಂದೇ ಆಗಿದೆ. ಪ್ರತಿಯೊಂದು ಕ್ರಿಯೆಯೂ ಪೂರ್ಣತೆಯಲ್ಲಿಯೇ ನಡೆಯುತ್ತಿದ್ದರೂ ನೀವು ಕೇವಲ ಅವುಗಳನ್ನು ಅರಿಯುತ್ತಿದ್ದೀರಿ. ನೀವು ಸಾಕ್ಷಿ ಮಾತ್ರ. ಎಲ್ಲ ದೇಹಗಳಲ್ಲೂ ನಾನೇ ಇದ್ದೇನೆ, ನಾನು ಅರಿವಿನ ಸ್ವರೂಪ, ಎಂದು ಮತ್ತೆ ಮತ್ತೆ ಹೇಳಿ ಕೊಳ್ಳುವುದರಿಂದ ದ್ವೇಷ, ಶತ್ರುತ್ವ, ಅಸೂಯೆ ಮುಂತಾದ ಭಾವನೆಗಳು ಅಳಿದು ಹೋಗುತ್ತವೆ. ನೀವು ಪ್ರೀತಿ ಮಾತ್ರ. "ಬೇರೊಬ್ಬನು" ಎಂಬುದೇ ಇಲ್ಲ. ಹೀಗೆ ಕೇವಲ ಒಂದು ದೇಹದೊಡನೆ ಮಾತ್ರ ನಿಮ್ಮನ್ನು ನೀವು ಗುರುತಿಸಿಕೊಂಡುದರಿಂದ ಉಂಟಾದ ಬಂಧನವು ಕಳಚುತ್ತದೆ. ನೀವು ಸುಜ್ಞಾನಿಯಾಗಿ ಪರಮಶಾಂತಿಯನ್ನೂ ಸುಖವನ್ನೂ ಪಡೆಯುತ್ತೀರಿ.

ಬಂಧನ ಎಂಬುದು ಮಾನಸಿಕ. ಅಜ್ಞಾನದಿಂದ ಅದನ್ನು ಹರಿದು ಚೆಲ್ಲಿದುದರಿಂದ ಅದು ಮಿಥ್ಯೆ–ಕೇವಲ ಕಲ್ಪನೆ. ಇದಕ್ಕೆ ವಿರುದ್ಧವಾದ ದೃಢ ಚಿತ್ತದಿಂದ ಹಾಗೂ ಅದಕ್ಕೆ ಅನುಗುಣವಾದ ನಡವಳಿಕೆಯಿಂದ ಆ ಬಂಧನ ಕಳಚುತ್ತದೆ.

4 ಯದಿ ದೇಹಂ ಪೃಥಕ್ ಕೃತ್ಯ ಚಿತಿ ವಿಶ್ರಾಮ್ಯ ತಿಷ್ಠಸಿ
ಅಧುನೈವ ಸುಖೀ ಶಾಂತೋ ಬಂಧಮುಕ್ತೋ ಭವಿಷ್ಯಸಿ॥

ದೇಹದಿಂದ ನಿಮ್ಮನ್ನು ಪ್ರತ್ಯೇಕಿಸಿ ಕೊಂಡು ಬಿಟ್ಟರೆ ಹಾಗೂ 'ನಾನು' ಎಂಬ ಪ್ರಜ್ಞೆಯಲ್ಲಿ ಸಹಜವಾಗಿ ನೆಲೆಗೊಂಡರೆ ಎಲ್ಲ ಬಂಧನಗಳಿಂದಲೂ ನೀವು ಮುಕ್ತರಾಗುತ್ತೀರಿ ಮತ್ತು ಆ ಕ್ಷಣದಲ್ಲಿಯೇ ಆನಂದಮಯರೂ ಶಾಂತರೂ ಆಗಿಬಿಡುತ್ತೀರಿ.

ಈ ಎಲ್ಲ ಮೋಕ್ಷ ರತ್ನಗಳ ಕ್ಯಾಪ್‌ಸೂಲ್‌ಗಳೂ ಬೇರೆ ಬೇರೆ ಹಾದಿಗಳಾಗಿ ತೋರಿದರೂ ಅಂತಿಮವಾಗಿ ಅವೆಲ್ಲ ಬೇರೆ ಬೇರೆ ರೂಪದಲ್ಲಿ ವಿವರಿಸಲ್ಪಟ್ಟ, ಹಲವು ಬಗೆಯ ಅಭಿರುಚಿ ಹಾಗೂ ಸ್ವಭಾವದ ಜನರನ್ನು ಆಕರ್ಷಿಸಲು ಬಳಸಿದ, ಒಂದೇ ಸತ್ಯವಾಗಿದೆ (ಪಥವಾಗಿದೆ).

ನಮ್ಮನ್ನು ಈ ಜಗತ್ತಿನ ಸಂಕೀರ್ಣತೆ ಹಾಗೂ ಸಂಕಟಗಳಲ್ಲಿ ತೊಡಗಿಸಿದ ಮುಖ್ಯ ಅಪರಾಧಿ ಎಂದರೆ "ದೇಹವೇ ನಾನು" ಎಂಬ ತಪ್ಪು ಕಲ್ಪನೆ. "ನಾನು ದೇಹವಲ್ಲ" ಎಂಬ ದೃಢ ನಿಶ್ಚಯದಿಂದ ನಮ್ಮನ್ನು ಬೇರ್ಪಡಿಸಿಕೊಂಡಿದ್ದೇ ಆದರೆ, 'ನಾನು' ಎಂಬ ಭಾವದಲ್ಲಿ ನೆಲೆಗೊಂಡರೆ ಆ ಕ್ಷಣದಲ್ಲೇ ಮೋಕ್ಷವನ್ನು ಹೊಂದುತ್ತೀರಿ. ದೇಹವೇ ನಾನು ಎಂಬ ಚಿಂತನೆಯೇ "ಅಹಂ" ಎಂಬ ಅಭಿಮಾನ. ನಿಮ್ಮ ಪರಮ ಜ್ಞಾನಕ್ಕೆ ಇರುವ ಪ್ರಮುಖ ತಡೆ. 'ನಾನು' ಎಂಬ ಪ್ರಜ್ಞೆಯಲ್ಲಿ ನೆಲೆಗೊಳ್ಳುವುದು ತುಂಬ ಸುಲಭವೂ ಅಪ್ರಯತ್ನವೂ ಆದದ್ದು. ನಿಸರ್ಗದತ್ತ ಮಹರಾಜ್‌ಗೆ ಅವರ ಗುರು, 'ನಾನು' (9 ಗಂಟೆ) ಎಂಬ ಪ್ರಜ್ಞೆಯಲ್ಲಿ ಸ್ಥಿರವಾಗುವಂತೆ ಉಪದೇಶಿಸಿದರು. ಈ ಮಾರ್ಗದಲ್ಲಿ ಸಾಧನೆ ಮಾಡಿ ಮೂರು ವರ್ಷದಲ್ಲಿ ಅವರು ಆತ್ಮಾನುಭವವನ್ನು ಪಡೆದರು. ನಮ್ಮ ಅಸ್ತಿತ್ವದ ಮೂಲಭಾವವೇ 'ಐ ಆ್ಯಮ್' ಎಂಬುದು. ಮತ್ತೇನನ್ನೂ ಸೇರಿಸಬಾರದು. ಉದಾಹರಣೆಗೆ ನಾನು ಒಂದು ಮಗು, ನಾನು ಎಂ.ಎ., ಪದವೀಧರ, ನಾನು ಒಬ್ಬ ಡಾಕ್ಟರ್ ಇತ್ಯಾದಿ. ನಾನು - 'ಐ ಆ್ಯಮ್' ಎಂದು ಕೇವಲ ಚಿಂತಿಸಿದರೆ ಸಾಲದು. ಅಸ್ತಿತ್ವದ ಈ ಭಾವದಲ್ಲೇ ಬದುಕಬೇಕು.

ನನ್ನ ಹಿಂದಿನ ಪುಸ್ತಕಗಳಲ್ಲಿ ಸ್ಪಷ್ಟಪಡಿಸಿರುವಂತೆ ನಾವು ಅದೇ ತಾನೇ ಜನ್ಮ ತಾಳಿದ ಮಗುವಿನಂತೆ ಇರಬೇಕು. (ಅರ್ಧ ಗಂಟೆ ಮೊದಲು ಎನ್ನಿ) ಆ ಮಗುವಿನ ಮೊದಲ ಭಾವ ಏನು? ಏನೂ



ಇಲ್ಲ ! ಬೆಕ್ಕು, ಇಲಿ, ಚಾಪೆ, ಆಸ್ಪತ್ರೆ ಇತ್ಯಾದಿ ಭಾವಗಳಿಗೆ ಯಾವುದಾದರೂ ಭಾಷೆಯ ಶಬ್ದಗಳು ಬೇಕು. ಮಗುವಿಗೆ ಯಾವ ಶಬ್ದಕೋಶವೂ ತಿಳಿಯದು. ಅದಕ್ಕೆ ಯಾವ ಚಿಂತನೆಯೂ ಇಲ್ಲ. ಆದರೆ ಹಸಿವು, ಬಾಯಾರಿಕೆ ಮೂತ್ರ ಶಂಕೆ ಮುಂತಾದ ಭಾವಗಳಿವೆ. ಈ ಮೂಲಭೂತ ಅವಶ್ಯಕತೆಯು ತೃಪ್ತವಾದರೆ ಮಗುವು, 'ನಾನು' ಎಂಬ ಮೂಲಭೂತ ಭಾವದಲ್ಲಿ ಆನಂದವಾಗಿ ದೇವದೂತನಂತೆ ಮಲಗಿರುತ್ತದೆ. ನಾವು ಇದನ್ನು ಅನುಕರಿಸಲು ಸಾಧ್ಯವಾದರೆ ಇಲ್ಲಿಯೇ ಈಗಲೇ ಮೋಕ್ಷವನ್ನು ಪಡೆಯಬಲ್ಲೆವು.

**5. ಧ್ಯಾನ ಮತ್ತು ಸಮಾಧಿಯೂ ನಿಮ್ಮನ್ನು ಕಟ್ಟಿಹಾಕುತ್ತದೆ.**

ನಿಸ್ಸಂಗೋ ನಿಷ್ಕ್ರಿಯೋಸಿ ತ್ವಂ ಪ್ರಕಾಶೋ ನಿರಂಜನಃ ।
ಅಯಮೇವ ಹಿ ತೇ ಬಂಧಃ ಸಮಾಧಿಮನುತಿಷ್ಠಸಿ ॥ (1-15)

ಪರಿಶುದ್ಧ ಆತ್ಮವೇ ಆದವರು ನೀವು. ನಿಮ್ಮಿಂದ ಬೇರೆಯಾದುದು ಏನೂ ಇಲ್ಲ. ಎಲ್ಲಾ ಪ್ರಾಪಂಚಿಕ ವಸ್ತುಗಳೂಕೇವಲ ತೋರಿಕೆ. ನಿಜವಾದ ತತ್ತ್ವ ನೀವೇ. ಅದರ ಮೇಲೆ ಪ್ರಪಂಚದ ತೋರಿಕೆ ಆರೋಪಿತವಾಗಿದೆ. ನಿಮ್ಮಿಂದಬೇರೆಯಾದ ಯಾವ ವಸ್ತುವೂ ಇಲ್ಲವೆಂದ ಮೇಲೆ ವ್ಯಾಮೋಹ, ದ್ವೇಷ ಎಂಬ ಪ್ರಶ್ನೆ ಉದ್ಭವಿಸುವುದೇ ಇಲ್ಲ.

ಪ್ರತಿಯೊಂದು ಕ್ರಿಯೆಯೂ ಮತ್ತೊಂದು ಜನ್ಮಕ್ಕೆ ಕಾರಣವಾಗುತ್ತದೆ. ಒಳ್ಳೆಯ ಕ್ರಿಯೆಯಿಂದ ಸುಖ, ಕೆಟ್ಟ ಕೆಲಸದಿಂದ ಸಂಕಟದ ಶಿಕ್ಷೆ. ಆದರೆ ಆತ್ಮವೇ ಆದ ನೀವು ಈ ಎಲ್ಲಕ್ಕೂ ಕೇವಲ ಸಾಕ್ಷಿ ಮಾತ್ರ. ಎಲ್ಲ ಕರ್ಮಗಳೂ, ಸ್ವಪ್ನ ಶರೀರದಂತೆ ಭ್ರಮೆಯೇ ಆದ ದೇಹದಿಂದ ಮಾಡಲ್ಪಡುತ್ತದೆ. ಅಲ್ಲದೆ ಜ್ಞಾನಿಯಾದಮೇಲೆ ಹಿಂದಿನ ಕರ್ಮಗಳೆಲ್ಲಾ ಸುಟ್ಟು ಬೂದಿಯಾಗುತ್ತವೆ.

**"ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇರ್ಜುನ"**

(ಭ.ಗೀ 4–37)

ಆಗ ಎಲ್ಲ ಕ್ರಿಯೆಗಳೂ ಇಲ್ಲವಾಗುತ್ತವೆ. ಸಂತನು ನಿಷ್ಕ್ರಿಯನಾಗುತ್ತಾನೆ.

ಆತ್ಮದ ಪ್ರಕಾಶದಿಂದಲೇ ಸಮಸ್ತ ಜಗತ್ತು ಬೆಳಗುತ್ತದೆ. ಆತ್ಮವೇ ಪರಮಸತ್ಯ. "ತಸ್ಯ ಭಾಸಾ ಸರ್ವಮಿದಂ ವಿಭಾತಿ." (ಭ.ಗೀ). ಪ್ರಪಂಚವೆಲ್ಲವೂ ನಮಗೆ ತೋರುವುದೇ ಆತ್ಮನ ಬೆಳಕಿನಿಂದ. ಹೇಗೆ

ಒಂದು ಟಾರ್ಚ್‌ಲೈಟು ತನ್ನ ಬೆಳಕಿನಿಂದಲೇ ಎಲ್ಲ ವಸ್ತುಗಳನ್ನೂ ತೋರಿಸುತ್ತದೋ, ಆದರೆ ತನ್ನನ್ನು ತೋರಿಸಲು ಮತ್ತೊಂದು ಟಾರ್ಚ್‌ನ ಅವಶ್ಯಕತೆಯಿಲ್ಲವೋ ಹಾಗೆಯೇ ಆತ್ಮವು ತನ್ನ ಬೆಳಕಿನಿಂದಲೇ ಬೆಳಗುತ್ತದೆ. ಅದು "ಸ್ವ ಪ್ರಕಾಶಃ"

ಆತ್ಮವು ಪರಿಶುದ್ಧ – ನಿರಂಜನ. ಬೇರೊಂದು ವಸ್ತುವಿನ ಗುಣ ಲಕ್ಷಣಗಳಿಂದ ಅದು ಅಬಾಧಿತ. ಅದನ್ನು ಬಿಟ್ಟು ಬೇರೆ ಎಂಬ ವಸ್ತುವೇ ಇಲ್ಲ. ಒಂದು ಡಬ್ಬಿಯಲ್ಲಿ ಇಂಗನ್ನು ಇರಿಸಿದ್ದರೆ, ಅದನ್ನು ತೆಗೆದುಕೊಂಡಮೇಲೂ ಬಹಳ ಕಾಲ ಅದರ ವಾಸನೆ ಡಬ್ಬಿಯಲ್ಲಿ ಇರುತ್ತದೆ. ಆದರೆ ಆತ್ಮದ ವಿಷಯ ಹೀಗಲ್ಲ. ಆತ್ಮವು ಅಕರ್ಮಿಯಾದುದರಿಂದ ಯಾವ ಪಾಪ-ಪುಣ್ಯದ ಲೇಪವೂ ಇಲ್ಲದುದರಿಂದ ಅದು ಯಾವಾಗಲೂ ಪರಿಶುದ್ಧವೇ ಆಗಿದೆ.

ಆತ್ಮವು ನಿಮ್ಮದೇ ನಿಜ ಸ್ವರೂಪ. ಆದುದರಿಂದ ಯಾವುದೇ ಆಧ್ಯಾತ್ಮ ಸಾಧನೆಯಿಂದ ಅದನ್ನು ಹೊಸದಾಗಿ ಪಡೆಯ ಬೇಕಿಲ್ಲ. ಅದು ನಿಮ್ಮ ಸಹಜ ಸ್ವರೂಪ. ನೀವು ಒಂದು ದೇಹದೊಡನೆ ತಪ್ಪಾಗಿ ನಿಮ್ಮನ್ನು ಗುರುತಿಸಿಕೊಂಡಾಗಲೂ, ನೀವೊಬ್ಬ ವ್ಯಕ್ತಿ ಎಂದು ತಿಳಿದುಕೊಂಡಾಗಲೂ ನೀವು ಆತ್ಮವೇ ಆಗಿರುತ್ತೀರಿ. ಸಮಾಧಿಯಲ್ಲಿ ಪರ್ಯವಸಾನ ಆಗುವ ಜನರು ಧ್ಯಾನ ಮಾಡುತ್ತಾರೆ (Super concious State). ಆಗ ದೇಹಭಾವ ನಶಿಸಿಹೋಗುತ್ತದೆ. ನಿಮ್ಮ ಪರಿಶುದ್ಧ ಆತ್ಮವಾಗಿ ಇರುತ್ತೀರಿ. ತನ್ನ ಸಹಜ ಸ್ವರೂಪದಲ್ಲಿ ಇರುವುದೇ ಸಮಾಧಿ ಎಂದು ಯೋಗ ಸೂತ್ರದಲ್ಲಿ ಹೇಳಲಾಗಿದೆ. (ತದಾ ದ್ರಷ್ಟುಃ ಸ್ವರೂಪೇ ಅವಸ್ಥಾನಮ್) ಆತ್ಮವಾಗಿ ನೀವು ಯಾವಾಗಲೂ ಸಹಜ ಸಮಾಧಿಯಲ್ಲೇ ಇರುತ್ತೀರಿ. ಧ್ಯಾನವನ್ನು ಮಾಡಿ ಸಮಾಧಿ ಸ್ಥಿತಿಯನ್ನು ತಲುಪಬೇಕಾಗಿಲ್ಲ.

ಒಬ್ಬ ವ್ಯಕ್ತಿ ಜಪ, ಧ್ಯಾನ, ಸಮಾಧಿ ಮುಂತಾದ ಅಧ್ಯಾತ್ಮ ಸಾಧನೆಗಳನ್ನು ಕೈಕೊಂಡಾಗ ಅಹಂ ಎನ್ನುವುದು ಕರ್ತೃತ್ವ ಭಾವವಾಗಿ ಮೇಲೆದ್ದು ಬರುತ್ತದೆ. ಅದೇ ಬಂಧನವಾಗುತ್ತದೆ. ಇದು ಅನಗತ್ಯ ಬದ್ಧತೆ. ಅಷ್ಟಾವಕ್ರರು, ಬಹುಮಂದಿ ಸಂತರು ವಿವರಿಸುವ ಅಭಿಪ್ರಾಯಕ್ಕೆ ವಿರುದ್ಧವಾದ ಕ್ರಾಂತಿಕಾರಕವಾದ ಹೊಸ ಮಾರ್ಗವನ್ನು ಪ್ರಚುರ ಪಡಿಸುತ್ತಿದ್ದಾರೆ ಎಂಬಂತೆ ತೋರುತ್ತದೆ. ಅದು ಹಾಗಲ್ಲ. ಉಪನಿಷತ್ತುಗಳಲ್ಲಿ ಹೇಳಲಾದ ಚಿಂತನವನ್ನೇ ಪುನರುಚ್ಚರಿಸುತ್ತಿದ್ದಾರೆ. ಆದರೆ ಈ



ಮಾರ್ಗವು ಆತ್ಮಬೋಧ ಸ್ಥಿತಿಯನ್ನು ನೇರವಾಗಿ ತಲುಪುವ ಆಕಾಂಕ್ಷೆಯುಳ್ಳ ಪ್ರಬುದ್ಧ ಅಧ್ಯಾತ್ಮ ಸಾಧಕರಿಗೆ ಉಪದೇಶಿಸಿದ್ದು, ಇಂದಿಗೂ ಇರುವ ಸ್ವಾಮಿ ತದ್ರೂಪಾನಂದಜೀ ಮಹಾರಾಜ್ ಎಂಬ ಪ್ರಸಿದ್ಧ ಸಂತರು ತಮ್ಮ "ಅಷ್ಟಾವಕ್ರ ಗೀತ" ಎಂಬ ಗುಜರಾತಿ ಕೃತಿಯಲ್ಲಿ ತುಂಬ ಸುಂದರವಾಗಿ ಉಪನಿಷತ್ ವಾಕ್ಯಗಳನ್ನೇ ಉದ್ಧೃತ ಮಾಡಿದ್ದಾರೆ:

**"ಕರ್ತುತ್ವಾದಪಿ ಅಹಂಕಾರ ಸಂಕಲ್ಪೋ ಬಂಧಃ ।**
**(ನಿರಾಲಂಬೋಪನಿಷತ್ – 21)**

ಕರ್ತುತ್ವಭಾವದ ಕಾರಣವಾಗಿಯೇ (ಸಮಾಧಿ ಸ್ಥಿತಿಗೆ ತಲುಪುವ ಧ್ಯಾನ), ಕರ್ಮ ಮಾಡುತ್ತಿದ್ದೇವೆ ಎಂಬ ಭಾವ ಹುಟ್ಟುವುದು ಅಹಂನಿಂದಲೇ, ಅದೇ ಬಂಧನವಾಗಿ ಬಿಡುತ್ತದೆ.

**"ನಿರಾಲಂಬೋಪನಿಷತ್ ಪುನಃ ಹೇಳುವುದೆಂದರೆ ಯಮಾದ್ಯಷ್ಟಾಂಗ ಯೋಗ ಸಂಕಲ್ಪೋ ಬಂಧಃ"** (ನಿ.ಉ.22). ಯೋಗ ಸೂತ್ರದಲ್ಲಿ ವಿಧಿಸಿದ ಯಮದಿಂದ ತೊಡಗಿ ಧ್ಯಾನ ಸಮಾಧಿಯಲ್ಲಿ ಮುಕ್ತಾಯವಾಗುವ ಅಷ್ಟಾಂಗ ವಿಧಿ-ನಿಷೇಧಗಳು ತಮಗೆ ತಾವೇ ಬಂಧನ ಎಂದು ಉಪನಿಷತ್ತಿನಲ್ಲಿಯೇ ಹೇಳಲಾಗಿದೆ. ಹೀಗಾಗಿ ಅಷ್ಟಾವಕ್ರರು ತುಂಬ ಸುಂದರವಾಗಿ ಉಪನಿಷತ್ತು ಹಾಗೂ ತಮ್ಮದೇ ಸ್ವಾನುಭವವನ್ನು ಬೆಸೆದು ಬಿಟ್ಟಿದ್ದಾರೆ. ಎಲ್ಲಿಯೂ ಸಹ ಉಪನಿಷತ್ತಿನಲ್ಲಿ ನಿರೂಪಿತವಾದ ಸಿದ್ಧಾಂತವನ್ನು ದಾಟಿ ಹೋಗಿಲ್ಲ. ನಾವು ಹೇಗೆ ಇದ್ದೇವೆಯೋ ಹಾಗೆಯೇ ನಿಷ್ಕ್ರಿಯರಾಗಿ ಇದ್ದು ಬಿಡಿ ಎಂದು ಎಚ್ಚರಿಸುತ್ತಾರೆ – ನಮ್ಮ ಅರಿವಿನ ಆನಂದದಲ್ಲಿ ಸ್ಥಿರವಾಗಿ ನೆಲೆ ನಿಂತುಬಿಡಿ ಎನ್ನುತ್ತಾರೆ. ಈಗಾಗಲೇ ಪಡೆದುಕೊಂಡ ಸ್ಥಿತಿಗೆ ಮತ್ತೇನನ್ನೂ ಪಡೆಯುವ ಯತ್ನ ಮಾಡಬೇಡಿ ಎಂದು ಬೋಧಿಸುತ್ತಾರೆ. (a fait accompli)

## 6. ನಿರಾಕಾರವೇ ಸತ್ಯ. ಎಲ್ಲ ನಾಮರೂಪಗಳೂ ಮಿಥ್ಯೆ

ಸಾಕಾರಮನೃತಂ ವಿದ್ಧಿ ನಿರಾಕಾರಂ ತು ನಿಶ್ಚಲಮ್ ।
ಏತತ್ ತತ್ತ್ವೋಪದೇಶೇನ ನ ಪುನರ್ಭವ ಸಂಭವಃ ॥ (1–18)

ನಿಮ್ಮ ದೇಹವೂ ಸೇರಿದಂತೆ ಆಕಾರವುಳ್ಳ ಎಲ್ಲ ವಸ್ತುಗಳೂ ಅಸತ್ಯ. ಏಕೆಂದರೆ ಅವೆಲ್ಲವೂ ನಿರಂತರವಾಗಿ ಬದಲಾವಣೆಯನ್ನು ಹೊಂದುತ್ತಿರುತ್ತವೆ. ಯಾವವು ನಿರಾಕಾರವೋ (ಆತ್ಮದಂತೆ) ಅವು

ಯಾವ ಪರಿವರ್ತನೆಯನ್ನೂ ಹೊಂದುವುದಿಲ್ಲ. ಆದುದರಿಂದ ಅವು ಮಾತ್ರ ಸತ್ಯ. ಈ ಆದೇಶವನ್ನು ಅರ್ಥ ಮಾಡಿಕೊಳ್ಳುವುದರಿಂದ ಪುನರ್ಜನ್ಮದಿಂದ ಪಾರಾಗುತ್ತಾನೆ. ಎಂದೆಂದಿಗೂ...

ಇದೂ ಸಹ ತಕ್ಷಣ ಫಲ ನೀಡುವ ಒಂದು ಮೋಕ್ಷ ಕ್ಯಾಪ್‌ಸೂಲ್ (ಗುಳಿಗೆ). ದೇಹದಂತೆ ಆಕಾರವುಳ್ಳ ಎಲ್ಲ ವಸ್ತುಗಳೂ ಅಶಾಶ್ವತ ಮತ್ತು ಸಾವು ಅಥವಾ ನಾಶಕ್ಕೆ ತುತ್ತಾಗುವಂತಹವು. ಆದುದರಿಂದ ಅವು ಅನೃತ.

ಮೊದಲನೆಯದಾಗಿ ಅಂತಹ ಎಲ್ಲ ವಸ್ತುಗಳೂ ಸೃಷ್ಟಿಸಲ್ಪಟ್ಟವುಗಳು. ಆದುದರಿಂದ ಅವಕ್ಕೆ ಆದಿ ಎಂಬುದುಂಟು. ಸಾವಿನಲ್ಲಿ ಕೊನೆಗೊಳ್ಳುವ ಷಡ್ವಿಕಾರಗಳು ಅವಕ್ಕಿವೆ. ನಿರಾಕಾರವಾದದ್ದಕ್ಕೆ ಯಾವ ಆಕಾರವೂ ಇಲ್ಲ. ಅದಕ್ಕೆ ಹುಟ್ಟು ಎಂಬುದಿಲ್ಲ. ಅದು ಸಾವಿಗೆ ತುತ್ತಾಗುವುದೂ ಇಲ್ಲ. ಆದುದರಿಂದ ಅದಕ್ಕೆ ಪುನರ್ಜನ್ಮದ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ದೇಹದಂತೆ ಆಕಾರವುಳ್ಳದ್ದು ಕಾಲದೇಶಗಳ ಪರಿಮಿತಿಗೆ ಒಳಪಡುತ್ತದೆ. ಆದ ಕಾರಣ, ಅದು ನಿರ್ದಿಷ್ಟ ದೇಶ-ಕಾಲಗಳಲ್ಲಿ ದೊರೆಯುತ್ತದೆ. ಆಕಾರವಿಲ್ಲದ ಯಾವುದೂ ಒಂದು ನಿರ್ದಿಷ್ಟ ಸ್ಥಳ(ದೇಶ)ಕ್ಕೆ ಸೀಮಿತವಾಗಲಾರದು. ಅದು ಅಪರಿಮಿತ. ಪರಮ ಆತ್ಮವು ಅಪರಿಮಿತ ಹಾಗೂ ಎಲ್ಲೆಲ್ಲೂ ವ್ಯಾಪಿಸಿರುವಂತಹುದು. ದೇಹವು ತಾನು ಹುಟ್ಟುವ ಮೊದಲು ಇರಲೇ ಇಲ್ಲ ಮತ್ತು ಸಾವಿನ ನಂತರ ಇರುವುದೂ ಇಲ್ಲ. ಪರಮ ಆತ್ಮವು ಹಿಂದೆಯೂ ಇತ್ತು. ಭವಿಷ್ಯದಲ್ಲೂ ಇದ್ದೇ ಇರುತ್ತದೆ. ಭೂತ-ವರ್ತಮಾನ-ಭವಿಷ್ಯ ಈ ತ್ರಿಕಾಲಗಳಲ್ಲೂ ಅದು ಅಬಾಧಿತವಾಗಿದೆ. ಆದುದರಿಂದ ಅದೊಂದೇ ಸತ್ಯಸ್ಯಸತ್ಯ- ಇಲ್ಲದಿರುವುದು ಎಂಬುದೇ ಅದಕ್ಕಿಲ್ಲ! ಅದು ಕಾಲದ ಕಟ್ಟಿಗೆ ಒಳಗಾಗುವುದಿಲ್ಲ. ಕಾಲದೇಶಗಳನ್ನು ಅದು ಮೀರುತ್ತದೆ. ಒಮ್ಮೆ ಸಾಯುವುದು ಮತ್ತೆ ಹುಟ್ಟುವುದು ಎಂಬ ಪ್ರಶ್ನೆಯೇ ಅದಕ್ಕಿಲ್ಲ. ಆದರೆ ದೇಹ ಮುಂತಾದವು ಕಾಲ ದೇಶಗಳಿಗೆ ಒಳಪಡುವ ತೋರಿಕೆಗಳು ಮಾತ್ರವೇ. ಅದು ಅನೃತ. ಅಷ್ಟಾವಕ್ರ ಗೀತದ ಈ ಶ್ಲೋಕವು ಎರಡನೆ ಅಧ್ಯಾಯದ 16ನೆಯ ಶ್ಲೋಕಕ್ಕೆ (ಶ್ರೀಮದ್ಭಗವದ್ಗೀತ) ಬಹುಮಟ್ಟಿಗೆ ಸಮಾನವಾಗಿಯೇ ಇದೆ-ನನ್ನ "ಗೀತಾ ಸಾರ" ಎಂಬ ಈ ಮೊದಲಿನ ಕೃತಿಯಲ್ಲಿ ವಿವರಿಸಲಾಗಿದೆ.

ಈ ಬೋಧನೆಯ ತಿರುಳನ್ನು ಯಾರೊಬ್ಬನು ಹಿಡಿಯಬಲ್ಲವನಾದರೆ, ಆತನು ಕಷ್ಟ ಸಂಕಟಗಳ ಚಕ್ರದ ಪುನರಾವರ್ತನೆಯಾದ



ಸಾವು-ಪುನರ್ಜನ್ಮಗಳ ಭಯದಿಂದ ಮುಕ್ತನಾಗುತ್ತಾನೆ. ಕಾಲ-ದೇಶ-ವಸ್ತುಗಳಿಗೆ ಅತೀತನಾದ ಆತ್ಮನೇ "ನಾನು-ಎಂಬುದನ್ನು ಚಿಂತಿಸಬೇಕು. ನಾನು ಎಲ್ಲದರಲ್ಲೂ ವ್ಯಾಪ್ತ, ಶಾಶ್ವತ, ನಾಶರಹಿತ. ಇಷ್ಟೇ ಅಲ್ಲ. ಹಗ್ಗವನ್ನು ಹಾವೆಂದು ಭ್ರಮಿಸಿದಂತೆ ಈ ಮಿಥ್ಯಾಜಗತ್ತು ನನ್ನ ಮೇಲೆ ಆರೋಪಿತವಾಗಿದೆ. ಸಮಸ್ತ ವಿಶ್ವದ ಮೂಲ ಅಧಿಷ್ಠಾನವೇ ನಾನು." ಈ ಮುಂದಿನ ಸಂದರ್ಭದಲ್ಲಿ ಹಾವು ಎಂಬುದು ಅಸತ್ಯ. ತನ್ನ ಕಲ್ಪನೆಯಲ್ಲಿ, ಅದನ್ನು ನೋಡುತ್ತಿರುವವನು ಹಗ್ಗವನ್ನೇ ಹಾವೆಂದು ಆರೋಪಿಸುತ್ತಿದ್ದಾನೆ. ಈ ನಿಜದ ಸಾಕ್ಷಾತ್ಕಾರವಾದ ಕ್ಷಣದಲ್ಲೇ ಅವನು ಹುಟ್ಟು ಸಾವುಗಳಿಂದ ಮುಕ್ತನಾಗಿ ಬಿಡುತ್ತಾನೆ.

ಪ್ರಾಸಂಗಿಕವಾಗಿ, ಈ ಶ್ಲೋಕವು ಸಾಕಾರದೇವತೆಯ ಪೂಜೆ, ಅಂಥ ದೇವತೆಯ ದರ್ಶನ, ಇವು ಪರಮ ಸತ್ಯವಲ್ಲ ಎಂಬುದನ್ನೂ ತಿಳಿಸುತ್ತದೆ. ಸಾಕಾರದೇವತೆಯನ್ನೂ ಮೀರಿದ, ನಿರಾಕಾರ ಪರಮ ಆತ್ಮವೆಂಬುದೇ ಪರಮ ಸತ್ಯ ಎಂಬ ನೆಲೆಗೇ ತಲುಪಬೇಕಿದೆ.

ಪರಮ ಜ್ಞಾನವನ್ನೂ, ಮೋಕ್ಷವನ್ನೂ ಪಡೆಯುವುದು ಹೇಗೆ? ಎಂಬ ಜನಕ ಮಹಾರಾಜನ ಪ್ರಶ್ನೆಯಿಂದ ಈ ಅಷ್ಟಾವಕ್ರ ಗೀತೆಯು ಪ್ರಾರಂಭವಾಯಿತು. ತಕ್ಷಣದ ಮೋಕ್ಷ ಸಾಧನೆಗೆ ಅಗತ್ಯವಾದ ಎಲ್ಲ ನೇರ ಮಾರ್ಗಗಳನ್ನೂ ಒಂದು ಕ್ಯಾಪ್ಸೂಲಿನಲ್ಲಿ – ಮೊದಲ ಅಧ್ಯಾಯದ ಇಪ್ಪತ್ತು ಶ್ಲೋಕಗಳಲ್ಲಿ, ಹುದುಗಿಸಿಬಿಟ್ಟಿದ್ದಾರೆ.

**7. ಅಜ್ಞಾನದ ಕಾರಣವಾಗಿ ಜಗತ್ತು ತೋರಿ ಬರುತ್ತದೆ – ಜ್ಞಾನದಿಂದ ಅದು ಮಾಯವಾಗುತ್ತದೆ.**

ಆತ್ಮಾಜ್ಞಾನಾತ್ ಜಗತ್‌ಭಾತಿ ಆತ್ಮಜ್ಞಾನಾನ್ನ ಭಾಸತೇ ।
ರಜ್ಜ್ವಜ್ಞಾನಾದಹಿರ್ಭಾತಿ ತತ್‌ಜ್ಞಾನಾತ್ ಭಾಸತೇ ನಹಿ॥(11–7)

ಆತ್ಮವನ್ನು ಅರಿಯದಿರುವುದರಿಂದಲೇ ಜಗತ್ತು ತೋರಿಬರುತ್ತದೆ. ಆತ್ಮವನ್ನು ಅರಿಯುತ್ತಿದ್ದಂತೆ ಜಗತ್ತು ಇಲ್ಲವಾಗುತ್ತದೆ. ಹಗ್ಗವನ್ನು ಅರಿಯದಿದ್ದುದರಿಂದಲೇ ಅದರಲ್ಲಿ ಹಾವು ತೋರಿಕೊಂಡಿತು. ಹಗ್ಗವನ್ನು ಅರಿತಾಗ ಹಾವು ಮಾಯವಾಯಿತು!

ಸಂಜೆಗತ್ತಲಲ್ಲಿ ದೀಪ ಇಲ್ಲದುದರಿಂದ ರಸ್ತೆಯಲ್ಲಿ ಬಿದ್ದಿರುವ ಹಗ್ಗವನ್ನು ಹಾವು ಎಂದು ತಪ್ಪಾಗಿ ತಿಳಿಯುತ್ತೀರಿ. ಹೀಗಾಗಿ ಸತ್ಯವು

ತಿಳಿಯಲ್ಪಡದೆ, ಇಲ್ಲದೇ ಇರುವ ಹಾವು ತೋರಿ ಬರುತ್ತದೆ. ಟಾರ್ಚ್‌ನ ಸಹಾಯದಿಂದ ಅದು ಹಗ್ಗ ಮಾತ್ರ ಎಂಬ ಜ್ಞಾನ ಮೂಡುತ್ತಿದ್ದಂತೆಯೇ ಹಾವಿನ ಭ್ರಮೆ ಮಾಯವಾಗುತ್ತದೆ. ಆತ್ಮನಿಂದ ಬೇರೆಯಾದ ಯಾವ ಪ್ರಪಂಚವೂ ಇಲ್ಲ. 'ನಾನು ಯಾರು?' ಎಂಬ ಶೋಧನೆಯಿಂದ ಆತ್ಮದ ಜ್ಞಾನ ಉಂಟಾಗುವವರೆಗೂ (ಅಧಿಷ್ಠಾನ) ಜಗತ್ತನ್ನು ನೋಡುತ್ತಲೇ ಇರುತ್ತೀರಿ. ನಿಮ್ಮ ನಿಜಸ್ವರೂಪವು ಅರಿವಾಗುತ್ತಿದ್ದಂತೆಯೇ ಜಗತ್ತು ನಿಮ್ಮಿಂದ ಬೇರೆಯಾಗಿ ಇಲ್ಲ ಎಂಬ ನಿಜಜ್ಞಾನ ಉಂಟಾಗುತ್ತದೆ. ಜಗತ್ತು ಆತ್ಮನ ಮೇಲೆ ಅಧ್ಯಾರೋಪವಾಗಿತ್ತು ಅಷ್ಟೆ. ಈ ಎಲ್ಲವೂ ಅಪ್ರಯತ್ನವಾಗಿ ನಡೆದ ಚಿಂತನಾ ಕ್ರಮವೇ. ನೀವು ಹಾವನ್ನು ಕೋಲಿನಿಂದ ಹೊಡೆಯಲೂ ಇಲ್ಲ, ಹಾವು ಸಾಯಲೂ ಇಲ್ಲ ! ಒಂದು ಸರಳವಾದ ಅರಿವಿನಿಂದ-ಅಯ್ಯೊ! ಇದು ಬರಿಯ ಹಗ್ಗ-ಎಂಬ ಜ್ಞಾನ ಮಾತ್ರವೇ ಹಾವನ್ನು ಓಡಿಸಿತು. ಆದುದರಿಂದ ಆತ್ಮಜ್ಞಾನ ಒಂದು, ಒಂದೇ ಸಾಕು. ಇದೇ ಸಮಸ್ತ ವೇದಾಂತದ ಸಾರ.

ಇದು ಕೇವಲ ಗ್ರಂಥಾಭ್ಯಾಸದಿಂದಾಗಲಿ ಸಂತರ ಪ್ರವಚನಗಳನ್ನು ಕೇಳುವುದರಿಂದಾಗಲಿ ಸಾಧ್ಯವಾಗುವಂತಹುದಲ್ಲ "ನಾನು ಯಾರು?" ಎಂಬ ಅಂತರಂಗದ ಸತತ ಶೋಧನೆಯಿಂದ ಮಾತ್ರ ಸಾಧ್ಯ. ದೇಹಾತ್ಮ ಭಾವವು ತಾನಾಗಿಯೇ ಬಿಟ್ಟು ಹೋಗುತ್ತದೆ. ಆತ್ಮಜ್ಞಾನವು ಲಭ್ಯವಾಗುತ್ತದೆ. 1950 ಏಪ್ರಿಲ್ ವರೆಗೂ ಜೀವಿಸಿದ್ದ ಭಗವಾನ್ ರಮಣ ಮಹರ್ಷಿಗಳು ಉಪದೇಶಿಸಿದ ಪ್ರಧಾನ ಮಾರ್ಗವೇ ಇದು.

8. **ನಾನು ಮಾತ್ರ ಇದ್ದೇನೆ. ನಾನು ಏನನ್ನೂ ಹೊಂದಿಲ್ಲ. ಅಥವಾ ಎಲ್ಲವನ್ನೂ ಹೊಂದಿಯೇ ಇದ್ದೇನೆ.**

ಅಹೋ ಅಹಂ ನಮೋಮಹ್ಯಂ ಯಸ್ಯ ಮೇ ನಾಸ್ತಿ ಕಿಂಚನ
ಅಥವಾ ಯಸ್ಯ ಮೇ ಸರ್ವಂ ಯದ್ವಾಙ್ಮನಸಗೋಚರಂ ॥(11-14)

ಒಂದು ಬಾರಿ ಅಷ್ಟಾವಕ್ರ ಋಷಿಯ ಉಪದೇಶವನ್ನು ಕೇಳುತ್ತಿದ್ದಂತೆಯೇ ಅಂಥ ಬೋಧನೆಗೆ ಪರಿಪೂರ್ಣ ಅರ್ಹತೆ ಹೊಂದಿ ಪಕ್ವವಾಗಿದ್ದ ಜನಕ ಮಹಾರಾಜನು ಆತ್ಮಜ್ಞಾನವನ್ನು ಪಡೆದುಬಿಟ್ಟನು ಮತ್ತು ತಾನು ಆತ್ಮವೇ ಆಗಿದ್ದೇನೆ– ಜಗತ್ತೆಲ್ಲವೂ ಈ ಆತ್ಮದ ಅಧಿಷ್ಠಾನದಲ್ಲಿಯೇ ಇದೆ ಎಂಬ ಸ್ವಾನುಭವವನ್ನು ಹೀಗೆ ವರ್ಣಿಸುತ್ತಾನೆ.



ಓಹ್ ! ಎಂಥ ಆಶ್ಚರ್ಯ ? ಈ ನಾನು ಏನು ಅದ್ಭುತ ? ನಾನು ಮಾತ್ರ ಇರುವುದರಿಂದ, ಬೇರೆ ಯಾರೂ ಇಲ್ಲವೇ ಇಲ್ಲದಿರುವುದರಿಂದ ನನಗೆ ನಾನೇ ನಮಸ್ಕರಿಸಲು ಸಾಧ್ಯ. ನನ್ನದು ಎಂಬುದೇನೂ ಇಲ್ಲದುದರಿಂದ, ನನ್ನಲ್ಲಿ ಏನೂ ಇಲ್ಲ. ಅಥವಾ ಬೇರೆ ಮಾತುಗಳಲ್ಲಿ ಹೇಳುವುದಾದರೆ ನಾನು ಎಲ್ಲವನ್ನೂ ಹೊಂದಿದ್ದೇನೆ – ಮಾತಿನಲ್ಲಿ ವರ್ಣಿಸಲಾಗದು. ಮನಸ್ಸಿನಲ್ಲಿ ಚಿಂತಿಸಲಾಗದು ಅದನ್ನು.

ಆತ್ಮವೊಂದೇ ಆಗಿ ನಿಲ್ಲುವ ಅಂತಿಮ ಸ್ಥಿತಿ ಎಂದರೆ ಅನುಭವಾತೀತ ಸ್ಥಿತಿ. ಅದನ್ನು ಮಾತಿನಲ್ಲಿ ವಿವರಿಸಲಾಗದು. ಯಾವುದೇ ಅನುಭವದ ಮೂಲವೆಂದರೆ ಬೇರೊಂದು ವಸ್ತುವಿನಿಂದ ಉಂಟಾಗುವ ಕಂಪನ. ಯಾವ ವಸ್ತು ಅಥವಾ ಜಗತ್ತು ಅಥವಾ ದೇಹ ಅಥವಾ ಮನಸ್ಸು ಎಂಬುದೇ ಇಲ್ಲವಾಗುವ ಸ್ಥಿತಿಯಲ್ಲಿ (ಯಾವುದರ ಮೂಲಕವೇ ಎಲ್ಲ ಅನುಭವಗಳೂ ಉಂಟಾಗುತ್ತವೋ), ಯಾವ ಅನುಭವವೂ ಇರಲು ಸಾಧ್ಯವೇ ಇಲ್ಲ. ಅಂತಹ ಸ್ಥಿತಿಯಲ್ಲಿ ಒಬ್ಬನು ಕನಸಿನಲ್ಲಿ ಒಳ್ಳೆಯ ಭೂರಿ ಭೋಜನವನ್ನು ಉಂಡು ಆ ತೃಪ್ತಿಯನ್ನು ಮಾತಿನಲ್ಲಿ ವ್ಯಕ್ತಪಡಿಸಲಾಗದ ಮೂಕನಂತೆ ಇರುತ್ತಾನೆ. ಜನಕ ಮಹಾರಾಜನು ಒಬ್ಬ ಅಜ್ಞಾನಿಯಂತೆ ಅಜ್ಞಾನಿಯ ಭಾಷೆಯನ್ನೇ ಬಳಸಿ ವಿವರಿಸುತ್ತಿದ್ದಾನೆ. ಅದರಿಂದ ಈ ಅಂತಿಮ ಸ್ಥಿತಿಯ ಎಲ್ಲೋ ದೂರದ ಅಲ್ಪಸ್ವಲ್ಪ ನೋಟವನ್ನಾದರೂ ಪಡೆಯಬಹುದು. (ನಿಜವಾಗಿ ಅದು ಸ್ಥಿತಿಯೂ ಅಲ್ಲ – ಅದು ನಮ್ಮದೇ ಸ್ವರೂಪ.)

ಅಷ್ಟಾವಕ್ರ ಗೀತೆಯು ಸಂಪೂರ್ಣವಾಗಿ ಜನಕಮಹಾರಾಜ ಹಾಗೂ ಅಷ್ಟಾವಕ್ರರ ನಡುವಣ ಸಂಭಾಷಣೆ ಎಂದು ತಿಳಿಯುವಂತಿಲ್ಲ. ಹಲವು ಪ್ರಾಚೀನ ಗ್ರಂಥಗಳಲ್ಲಿ ಜನಕನನ್ನು ವಿದೇಹ (ದೇಹಭಾವ ಇಲ್ಲದವನು) ಎಂದು ವರ್ಣಿಸಲಾಗಿದೆ. ಅಂತಹ ಆತ್ಮೀಯ ಸಂಭಾಷಣೆ ನಡೆದದ್ದು ನಿಜವೇ ಆಗಿದ್ದರೆ ಅದನ್ನು ದಾಖಲಿಸಿ-ಬರೆದು ಮುಂದಿನ ಪೀಳಿಗೆಗಾಗಿ ಬರೆದ ಪುಣ್ಯಾತ್ಮನು ಯಾರಿರಬಹುದು? ಬಹುಕಾಲದ ನಂತರ ಪ್ರಚುರವಾದ ಭಗವದ್ಗೀತೆಯ ವಿಷಯದಲ್ಲಾದರೋ ಕೃಷ್ಣಾರ್ಜುನರ ಸಂವಾದವನ್ನು ವ್ಯಾಸಮಹರ್ಷಿಗಳು ತಮ್ಮ ಸಮಾಧಿ ಸ್ಥಿತಿಯಲ್ಲಿ, ಬಹು ಹಿಂದೆ ನಡೆದುದೆಲ್ಲವನ್ನೂ ಪುನಃ ಕಂಡುಕೊಂಡು, ಭಗವದ್ಗೀತೆಯಾಗಿ ರಚಿಸಿದರು. ಆದರೆ ಅಷ್ಟಾವಕ್ರಗೀತೆಯನ್ನು ಒಬ್ಬ ಅಜ್ಞಾತ ಜೀವನ್ಮುಕ್ತ ಅಥವಾ ಮಹಾಜ್ಞಾನಿ, ತನ್ನ ಹೆಸರು ಹೇಳುವ ಬಗೆಗೂ ಅನಾಸಕ್ತ

ನಾದವನು, ಆದರೆ ಮುಂದಿನ ಪೀಳಿಗೆಯ ಬಗೆಗೆ ಅಪಾರ ಅನುಕಂಪ ಹೊಂದಿದವನು ಬರೆದಿರಬಹುದು ಎಂದು ಊಹಿಸಬಹುದಾಗಿದೆ. ಹಾಗಲ್ಲದಿದ್ದರೆ, ಧನದಾಹಿಯೂ, ಅತ್ಯಂತ ಕಾಮುಕನೂ ಆಗಿದ್ದ ಒಬ್ಬ ಜನಕ(!) **(ಅಧ್ಯಾಯ 111–ಶ್ಲೋಕ 1, 3, 7 ಇತ್ಯಾದಿ)** ಅಷ್ಟಾವಕ್ರನಿಂದ ಖಂಡಿಸಲ್ಪಟ್ಟು ಕ್ಷಣಮಾತ್ರದಲ್ಲಿ ಆತ್ಮಜ್ಞಾನಿಯಾಗಿ ಬಿಡುವುದು ಅಸಾಧ್ಯದ ಸಂಗತಿ. ಈ ಗ್ರಂಥದ ಎಲ್ಲ ಬೋಧನೆಯೂ ಅಧ್ಯಾತ್ಮ ಜ್ಞಾನ ಪಿಪಾಸಿಗಳಾದ ನಮ್ಮ – ನಿಮ್ಮೆಲ್ಲರಿಗಾಗಿಯೇ ಇದೆ. ಪುರಾತನಕಾಲದ ಯಾರೋ ಒಬ್ಬ ಪೌರಾಣಿಕ ವ್ಯಕ್ತಿ–ಜನಕನಿಗಾಗಿ ಅಲ್ಲ.

ಆತ್ಮವಾಗಿ ಇರುವುದು ತಾನು ಒಬ್ಬನೇ, ತನ್ನದು ಎಂಬುದು ಮತ್ತೇನೂ ಇಲ್ಲ ಎಂದು ಜನಕನು ಕಂಡುಕೊಳ್ಳುತ್ತಾನೆ. ಬೇರೊಂದು ದೃಷ್ಟಿಯಿಂದ ನೋಡುವುದಾದರೆ ಸಮಸ್ತ ವಿಶ್ವ–ಅದರಲ್ಲಿನ ಎಲ್ಲ ವಸ್ತು ವಿಷಯಗಳೂ ಅವು ವಿವರಿಸುವಂತಹವು ಅಥವಾ ಮಾನಸಿಕ ಕಲ್ಪನೆಯಾಗಿರುವಂತಹವು. ಅವುಗಳ ಅಧಿಷ್ಠಾನವಾದ ಆತ್ಮನ ಮೇಲೆ ಅಧ್ಯಾರೋಪಿಸಲ್ಪಟ್ಟವು ಮಾತ್ರ. ಹೀಗಾಗಿ ಆ ಎಲ್ಲವೂ ಅವೆಲ್ಲವೂ ಆತ್ಮನಿಗೇ ಸೇರಿದವು ಮಾತ್ರ. ಇದೇ ಆತ್ಮನ ಅಪೂರ್ವ ವೈಭವ. ತನ್ನ ಪ್ರತ್ಯೇಕ ವ್ಯಕ್ತಿತ್ವವೇ ಕರಗಿಹೋದ ಪೂರ್ಣತೆಯೇ ತಾನು ಎಂಬುದು ಇದ್ದಕ್ಕಿದ್ದಂತೆ ಜನಕನ ಅನುಭವಕ್ಕೆ ಬಂದಿತು. ಪರಿಮಿತ ಜೀವ ಎನಿಸಿದ್ದುದು, ಅನಂತ ಅಪಾರ ಆತ್ಮವಾಗಿ ಪರಿವರ್ತಿತವಾಯಿತು. ನಾನೇ ಎಲ್ಲವೂ ಆಗಿರುವಾಗ, ಬೇರೆ ಯಾರು ಇದ್ದಾರೆ? ನನಗಲ್ಲದೆ ಬೇರೆ ಯಾರಿಗೆ ನನ್ನ ಪ್ರಣಾಮ? ಸತ್ಯಸಂಗತಿ ಎಂದರೆ ಅಖಂಡ ಆತ್ಮವಲ್ಲದೆ, ಪ್ರತ್ಯೇಕ ವ್ಯಕ್ತಿಗಳೂ ಇಲ್ಲ, ಜಗತ್ತೂ ಇಲ್ಲ. ಆತ್ಮ ಎಂಬ ಶಬ್ದವೇ ಎಲ್ಲವನ್ನೂ ಒಳಗೊಂಡದ್ದು. ಅದು ಕೇವಲ ಒಬ್ಬ ವ್ಯಕ್ತಿಯನ್ನು ಸೂಚಿಸುವುದಿಲ್ಲ. ಈ ಎಚ್ಚರಿಕೆ ಏಕೆ ಅಗತ್ಯವೆಂದರೆ ಒಬ್ಬ ಪ್ರತ್ಯೇಕ ವ್ಯಕ್ತಿಯನ್ನು ಇದು ಕುರಿತದ್ದಲ್ಲ – ಇಂಥ ಒಬ್ಬ ವ್ಯಕ್ತಿ ತಾನೊಬ್ಬನೇ ಅಂತಿಮ ದಿವ್ಯತೆ ಎಂದು ತಿಳಿದುಕೊಂಡಾನು ಎಂಬ ಸಾಧ್ಯತೆಯಿದೆ. ನಾನು–ನನ್ನದು ಎಂಬ ಭಾವವನ್ನು ತೊರೆದಟ್ಟಿದಾಗಲೇ (ದೇಹವೇ ನಾನು ಅಹಂ) ಅಪಾರವೂ ಪರಿಪೂರ್ಣವೂ ಆದ ಆತ್ಮವೆಂಬ ನಾನು ಸಿದ್ಧಿಸುತ್ತದೆ. ನಾನು ಒಂದು ದೇಹ– ಉಳಿದೆಲ್ಲ ದೇಹಗಳೂ ಬೇರೆ ಬೇರೆ ಎಂಬ ಭಿನ್ನ ಭಾವನೆಗೆ ಕಾರಣವಾದ ವ್ಯಾಮೋಹ ಕೆಲವರ ಬಗ್ಗೆ ದ್ವೇಷ, ಶತ್ರುತ್ವ, ಮತ್ಸರ ಮತ್ತೆ ಕೆಲವರ ಬಗ್ಗೆ ಪ್ರೀತಿ–ಆದರ



ಇತ್ಯಾದಿಗಳಿಗೆ ಹಾಗೂ ತತ್ಸದೃಶವಾದ ಕಾರ್ಯಗಳಿಗೆ ನಮ್ಮನ್ನು ತೊಡಗಿಸಿ ಜನ್ಮ ಜನ್ಮಗಳಲ್ಲಿ ಈ ಪ್ರಾರಬ್ಧ ಕರ್ಮಫಲದ ಅನುಭವಕ್ಕೆ ಬೀಜವಾಗುತ್ತದೆ. ಕೆಟ್ಟ ಕರ್ಮಗಳಿಗೆ ಶಿಕ್ಷೆ, ಅದರ ಪರಿಣಾಮವಾದ ದುಃಖ–ಸಂಕಟ. ಬದಲಾಗಿ, ನಾನು–ನನ್ನದು ಎಂಬ ಭಾವವನ್ನು ತೊರೆದು, ಎಲ್ಲದಕ್ಕೂ ಸಾಕ್ಷಿ ಪ್ರಜ್ಞೆ ಮಾತ್ರವಾಗಿ ಇರುವುದೊಂದೇ ಮುಕ್ತಿಗೆ ರಾಜಮಾರ್ಗ.

## 9. ಎಲ್ಲ ಸಂಕಟಗಳಿಗೂ ದ್ವೈತ ಭಾವವೇ ಕಾರಣ

ದ್ವೈತಮೂಲಮಹೋ ದುಃಖಂ ನಾನ್ಯತ್‌ತಸ್ಯಾಸ್ತಿ ಭೇಷಜಮ್
ದೃಶ್ಯಮೇತನ್ಮೃಷಾ ಸರ್ವಮೇಕೋಽಹಂ ಚಿದ್ರಸೋಽಮಲಃ ॥

(11–16)

ಎಲ್ಲ ದುಃಖಗಳ ಮೂಲದಲ್ಲಿರುವುದೂ ದ್ವೈತವೇ. ಅದಕ್ಕೆ ಎಲ್ಲ ದೃಶ್ಯ ಪ್ರಪಂಚವೂ ಮಿಥ್ಯೆ ಎಂದು ಅರ್ಥಮಾಡಿಕೊಳ್ಳುವುದೊಂದೇ ಔಷಧ. (ಉಪಾಯ) ನಾನು ಮಾತ್ರ ಇರುವುದು–ಎರಡನೆಯವನಿಲ್ಲ. ಮತ್ತು ನಾನು ನಿರ್ಮಲ, ಪ್ರಜ್ಞೆ ಹಾಗೂ ಆನಂದ ಸ್ವರೂಪಿ.

ನಿಮ್ಮಿಂದ ಬೇರೆಯಾದ ಮತ್ತೊಬ್ಬನಿದ್ದಾನೆ ಎಂದು ಯಾವಾಗ ನೀವು ಯೋಚಿಸುವಿರೋ, ಸ್ಪರ್ಧೆ, ಮತ್ಸರ, ಭಯ, ಶತ್ರುತ್ವ ಅಥವಾ ದ್ವೇಷ, ಕೆಲವರಲ್ಲಿ ಅತಿಯಾದ ವ್ಯಾಮೋಹ ಇವುಗಳಿಗೆ ಎಡೆಗೊಡುತ್ತದೆ. ಅದರ ಪರಿಣಾಮವಾದ ದುಃಖ, ವ್ಯಕ್ತಿ ವ್ಯಕ್ತಿಗಳ ನಡುವಣ ಕಲಹ, ಉದ್ವೇಗ, ಆತಂಕ ಮುಂತಾದವು ಉದ್ಭವಿಸುತ್ತವೆ. ಶಾಸ್ತ್ರ ಗ್ರಂಥಗಳು ದ್ವೈತೇ ಯದ್ವೈ ಭಯಂ ಭವತಿ' ಎನ್ನುತ್ತವೆ. ಯಾವಾಗ ಇನ್ನೊಬ್ಬ ಅಥವಾ ಇನ್ನೊಂದು ಇದೆ ಎಂದು ನೀವು ಯೋಚಿಸುತ್ತೀರೋ ಆಗ ಭಯ ಉಂಟಾಗುತ್ತದೆ. ನಿಮ್ಮ ತಲೆಯ ಮೇಲಿರುವ ಫ್ಯಾನು (Fan) ನಿಮ್ಮಿಂದ ಬೇರೆ ಎಂದು ತಿಳಿದಾಗಲೂ, ಅದು ಯಾವತ್ತೋ ಒಂದು ದಿನ ನಿಮ್ಮ ತಲೆಯ ಮೇಲೆ ಬಿದ್ದುಬಿಡಬಹುದು ಎಂಬ ಭಯ ಉಂಟಾಗಿಬಿಡುತ್ತದೆ. ಏಕೆಂದರೆ ನಿಮ್ಮಿಂದ ಬೇರೆಯಾದ ಒಂದು ವಸ್ತು ಇದೆ ಎಂದು ನೀವು ಭಾವಿಸಿದ್ದೀರಿ. (ಈ ಚಿಂತನೆಯನ್ನೇ ದ್ವೈತ ಎಂದು ಕರೆಯಲಾಗಿದೆ). ಅದನ್ನು ಪಡೆಯಲೆಂದು ನೀವು ಕರ್ಮಗಳಿಗೆ ತೊಡಗುತ್ತೀರಿ, ಅವು ಪುಣ್ಯ ಅಥವಾ ಪಾಪಕಾರ್ಯಗಳಾಗಿರಬಹುದು. ಪುನಃ ಅವುಗಳ ಫಲಗಳ (ಧನ ಸಂಪಾದನೆ ಇತ್ಯಾದಿ) ಅನುಭವಕ್ಕಾಗಿ ಮತ್ತೆ ಜನ್ಮ. ಈ ಪುನರ್ಜನ್ಮಗಳು ಮತ್ತೆ ಹಲವು ಬಗೆಯ ದುಃಖಗಳಿಗೆ

ಕಾರಣವಾಗುತ್ತದೆ. ರಮಣ ಮಹರ್ಷಿಗಳು ತಮ್ಮ "ಉಪದೇಶ ಸಾರಂ" ನಲ್ಲಿ ಹೇಳುತ್ತಾರೆ. "ಕೃತಿ ಮಹೋದಧೌ ಪತನ ಕಾರಣಂ।" ಕರ್ಮ ಅಥವಾ ಕ್ರಿಯೆಗಳು ದೊಡ್ಡ ಸಾಗರ, ಅದರಲ್ಲಿ ನಾವು ಬೀಳುವುದೇ ನಿಶ್ಚಯ.

ನೀವು ಒಬ್ಬರೇ ಏಕಾಂತದಲ್ಲಿ ನಿದ್ರಿಸುತ್ತಿರುವಾಗ ನಿಮಗೆ ಪರಿಚಿತ ಅಥವಾ ಅಪರಿಚಿತರಾದ ಹಲವಾರು ಮಂದಿಯನ್ನು ನೋಡುತ್ತೀರಿ, ಕನಸಿನಲ್ಲಿ. ಕೆಲವು ದರೋಡೆಕೋರರು ನಿಮ್ಮನ್ನು ಕೊಲ್ಲಲು ಅಥವಾ ನಿಮ್ಮ ಹಣ ಹಾಗೂ ಇತರ ವಸ್ತುಗಳನ್ನು ಕದಿಯಲು ಬಂದಿದ್ದಾರೆ. ಕನಸು ಮುಂದುವರಿಯುತ್ತಿರುವವರೆಗೂ ಈ ಎಲ್ಲ ವಸ್ತುಗಳೂ ವ್ಯಕ್ತಿಗಳೂ ನಿಜವೆಂದೇ ನೀವು ತಿಳಿದು ಭಯಗೊಳ್ಳುತ್ತೀರಿ. ಇಂತಹ ಘಟನೆಯಿಂದ ಪಾರಾಗಲು ಇರುವ ಒಂದೇ ಉಪಾಯವೆಂದರೆ, ಎಚ್ಚತ್ತು ಬಿಡುವುದು. ಆ ಕೋಣೆಯಲ್ಲಿದ್ದುದು ನೀವೊಬ್ಬರೇ ಎಂಬ ಅರಿವು ಆದಾಗ (ಕನಸು ಕಾಣುತ್ತಿರುವ ನೀವು), ನಿಮ್ಮಿಂದ ಬೇರೆಯಾದ ಎಲ್ಲ ವಸ್ತುಗಳೂ ಕಲ್ಪನೆ, ನಿಜವಲ್ಲ ಎಂದು ದೃಢವಾದಾಗ ನಿಮ್ಮ ಭೀತಿ ಮಾಯವಾಗುತ್ತದೆ. ನಿಮ್ಮ ಎಚ್ಚರದ ಸ್ಥಿತಿಯಲ್ಲೂ ಈ ನಿಯಮವೇ ಅನ್ವಯಿಸುತ್ತದೆ. ಎಚ್ಚರವೂ ಒಂದು ಬೃಹತ್ ಸ್ವಪ್ನ-ಸತ್ಯವಲ್ಲ. ಎಚ್ಚರಗೊಳ್ಳಲು ಇರುವ ಏಕಮಾತ್ರ ಉಪಾಯವೆಂದರೆ ಎಚ್ಚರಗೊಳ್ಳುವುದೇ. ಆಗ ಮಾತ್ರ ಈ ಎಲ್ಲ ಮಿಥ್ಯಾ ವಸ್ತುಗಳು ಹಾಗೂ ಸ್ವಪ್ನ ಪ್ರಪಂಚ ಮಾಯವಾಗುತ್ತದೆ. ನೀವು ಒಬ್ಬರೇ ಇರುತ್ತೀರಿ. ಬೇರೊಂದು ವಸ್ತುವೇ ಇಲ್ಲವಾದುದರಿಂದ ದುಃಖವೂ ಇರುವುದಿಲ್ಲ.

ಸ್ವಪ್ನ ಸದೃಶವಾದ ಎಚ್ಚರದ ಅವಸ್ಥೆಯಲ್ಲಿ ನಾವು ಯಾರು ಎಂಬುದನ್ನು ಮರೆತು ಬಿಟ್ಟಿರುತ್ತೇವೆ. ಅದೇ ರೀತಿ ಕನಸು ಕಾಣುತ್ತಿರುವ ವ್ಯಕ್ತಿಯೂ ತಾನು ಯಾರೆಂಬುದನ್ನು ಮರೆತು, ಸ್ವಪ್ನ ನಾಟಕದಲ್ಲಿ ಬಗೆ ಬಗೆಯ ಪಾತ್ರ-ಹೆಸರುಗಳನ್ನು ಹೊಂದುತ್ತಾನೆ. ಈ ವಿಚಿತ್ರ ರೋಗಕ್ಕೆ ಔಷಧವಾದರೂ ಯಾವುದು? "ನೀವು ಯಾರು?" ಎಂಬುದನ್ನು ನಿಮ್ಮ ದ್ವೈತ ಹಾಗೂ ನೈಜ ಸ್ಥಿತಿಯಲ್ಲೂ ನೆನಪಿಟ್ಟುಕೊಳ್ಳುವುದು-ಆ ಸ್ಥಿತಿಯಲ್ಲಿ ನೀವು ಸದಾ ಮುಕ್ತರೇ ಹಾಗೂ ಹುಟ್ಟು ಸಾವುಗಳಿಗೆ ಒಳಗಾಗು ವಂಥವರಲ್ಲ. (ಈ ಹುಟ್ಟು ಸಾವು ಎರಡೂ ಸಂಭವಿಸಿದ್ದು ಕನಸಿನಲ್ಲಿ ಮಾತ್ರ!)

* * *



## 10. ಮುಕ್ತನಾದ ಜೀವಾತ್ಮ ಧನ ಸಂಪಾದನೆಯಲ್ಲಿ ತೊಡಗುವುದಿಲ್ಲ

ಅವಿನಾಶಿನಮಾತ್ಮಾನಮ್ ಏಕಂ ವಿಜ್ಞಾಯ ತತ್ತ್ವತಃ ।
ತವ ಆತ್ಮಜ್ಞಸ್ಯ ಧೀರಸ್ಯ ಕಥಮರ್ಥಾರ್ಜನೇ ರತಿಃ ॥

(III-I)

ಮೂರನೆಯ ಅಧ್ಯಾಯದಲ್ಲಿ ಆತ್ಮಜ್ಞಾನಕ್ಕೆ ಬಾಧಕವಾದ ಎರಡು ಮುಖ್ಯ ಅಪಾಯಕರ ಹೊಂಡಗಳ ಬಗೆಗೆ ಜನಕನನ್ನು ಎಚ್ಚರಿಸುತ್ತಾರೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ವ್ಯಾಪಾರ ಅಥವಾ ಯಾವುದೇ ವೃತ್ತಿಯಿಂದ ಹಣ ಸಂಪಾದನೆಯಲ್ಲಿ ತೊಡಗಿದವನು ತನ್ನನ್ನು ಆತ್ಮಜ್ಞಾನಿ ಎಂದು ಪರಿಗಣಿಸಿಕೊಳ್ಳಲಾಗುವುದಿಲ್ಲ.

ಯಾವುದೇ ಮಾಧ್ಯಮವಿಲ್ಲದೆ ತತ್‌ಕ್ಷಣದ ಅನುಭವದಿಂದ ಅದನ್ನು ತಿಳಿದದ್ದೇ ಆದಮೇಲೆ – ಅದು ನಾಶ ಅಥವಾ ಸಾವಿನಿಂದ ಕೊನೆಗೊಳ್ಳಲಾರದು ಎಂದಾದರೆ-ನೀವಲ್ಲದೆ ಬೇರೊಬ್ಬನು ಇಲ್ಲವೇ ಇಲ್ಲವಾದುದರಿಂದ, ಒಂದು ಕಡೆ ಆತ್ಮ ಸಾಕ್ಷಾತ್ಕಾರ ನನಗಾಗಿದೆ ಎಂದು ಧೈರ್ಯದಿಂದ ಹೇಳುತ್ತಾ ಅದೇ ಕಾಲದಲ್ಲಿ ಧನಧಾನ್ಯದ ಆಸೆಯನ್ನು ಹೊಂದಿರುವುದಾದರೂ ಹೇಗೆ ಸಾಧ್ಯ?

ಧನ-ಸಂಪತ್ತಿನ ಆರ್ಜನೆ ಹಾಗೂ ಆತ್ಮ ಸಾಕ್ಷಾತ್ಕಾರ ಎರಡೂ ಸ್ವಭಾವತಃ ಒಂದಕ್ಕೊಂದು ವಿರೋಧವಾದುದರಿಂದ ಏಕಕಾಲದಲ್ಲಿರಲು ಸಾಧ್ಯವೇ ಇಲ್ಲ. ಈ ಜಗತ್ತು ಹಾಗೂ ನಿಮ್ಮ ದೇಹವೂ ಸೇರಿದಂತೆ ಪ್ರಾಪಂಚಿಕ ವಸ್ತುಗಳು ಅಸತ್ಯ-ನಶ್ವರ, ಮನಸ್ಸಿನ ತೋರಿಕೆಗಳು ಮಾತ್ರ ಎಂಬ ದೃಢತೆ ನಿಮಗೆ ಉಂಟಾದಾಗ ಮಾತ್ರ ಹಣ ಸಂಪಾದನೆ, ಬಡ್ತಿ ಇತ್ಯಾದಿಗಳ ಬಗೆಗೆ ನಿರ್ಲಕ್ಷ್ಯ ಹಾಗೂ ಅವುಗಳಿಗಾಗಿ ಶ್ರಮ ಪಡದಿರುವುದು ನಿಮಗೆ ಸಾಧ್ಯ.

ಆತ್ಮವೇ ನೀವಾಗಿರುವುದರಿಂದ ನೀವು ದೈವಿಕ ಹಾಗೂ ಅಮರ್ತ್ಯರು. ಧನ, ಪತ್ನೀ, ಪುತ್ರ ಎಲ್ಲವೂ ಅನಿತ್ಯ. ಅವರೆಲ್ಲರೂ ಸ್ವಪ್ನದಲ್ಲಿನ ವಸ್ತು ವಿಷಯಗಳಂತೆ. ಸ್ವತಂತ್ರ ಅಸ್ತಿತ್ವವೇ ಅವುಗಳಿಗಿಲ್ಲ. ಆತ್ಮವೇ ಆದ ನೀವು ಮಾತ್ರ ಸತ್ಯ. ಹೀಗಿದ್ದ ಮೇಲೆ ಸಂಸಾರ ನಿರ್ವಹಣೆಗಾಗಿ ಧನ ಸಂಪಾದನೆ ಮಾಡುವ ಮೂರ್ಖನಾದವನು ಯಾರು?

ಪ್ರತಿಯೊಬ್ಬನೂ ಬಯಸುವುದು ಶಾಶ್ವತ ಸುಖವನ್ನು-ಸಂತೋಷವನ್ನು ನಶ್ವರವಾದ ವಸ್ತುಗಳನ್ನು ಪಡೆಯುವುದರ ಮೂಲಕ ಗಳಿಸಲು ಹೇಗಾದರೂ ಸಾಧ್ಯ ?

ಈ ಯಾವುದೂ ಶಾಶ್ವತವಾಗಿ ಇರುವಂತಹುದಲ್ಲ ಎಂಬ ವಾಸ್ತವ ಸತ್ಯವನ್ನು ಅರ್ಥಮಾಡಿಕೊಳ್ಳುವುದರಿಂದ, ನಿಮ್ಮಿಂದ ಬೇರೆಯಾದ ವಸ್ತು ಯಾವುದೂ ಇಲ್ಲ - ಇರುವುದು ಒಂದೇ ಎಂಬ ಅರಿವು, ಸರಿಯಾದ ಆತ್ಮ ವಿಚಾರ ಹಾಗೂ ಸ್ವಾನುಭವದ ನಂತರವೇ ಅನುಭವಕ್ಕೆ ಬರುವಂತಹುದು. ಇಂತಹ ವಾಸ್ತವಿಕ ಜ್ಞಾನವೇ ವಿಜ್ಞಾನ ಎಂದು ಕರೆಯಲ್ಪಡುತ್ತದೆ.

## 11. ಆತ್ಮಜ್ಞಾನಿಯು ವಿಷಯ ಸುಖದಲ್ಲಿ ಆಸಕ್ತನಲ್ಲ

ಆಸ್ಥಿತಃ ಪರಮಾದ್ವೈತಂ ಮೋಕ್ಷಾರ್ಥೇಪಿ ವ್ಯವಸ್ಥಿತಃ ।
ಆಶ್ಚರ್ಯಂ ಕಾಮವಶಗೋ ವಿಕಲಃ ಕೇಳಿ ಶಿಕ್ಷಯಾ ॥ (111-6)

ಪರಮಾದ್ವೈತದಲ್ಲಿ ದೃಢವಾಗಿ ನೆಲೆನಿಂತ ಮೇಲೂ ಕ್ರಮಬದ್ಧವಾಗಿ ಮೋಕ್ಷ ಮಾರ್ಗದಲ್ಲಿ ಕ್ರಮಿಸುತ್ತಿರುವಾಗಲೂ ಅಂತಹ ಜ್ಞಾನಿಯೂ ಸಹ ಕಾಮವ್ಯಾಮೋಹದ ಬಿರುಗಾಳಿಯಲ್ಲಿ ಸಿಲುಕಿ ಪತಿತನಾಗುವುದು ಆಶ್ಚರ್ಯವೇ ಸರಿ ! ಹಿಂದಿನ ಜನ್ಮಗಳಿಂದ ಪಡೆದುಕೊಂಡ ಕಾಮಸುಖ ವಾಸನೆಯೇ ಈ ಪ್ರವೃತ್ತಿಗೆ ಕಾರಣ.

ಪರಮಾಶ್ಚರ್ಯವೆಂದರೆ ವೃದ್ಧಾಪ್ಯದಲ್ಲಿರುವ ಜ್ಞಾನಿಯು ಆತ್ಮದ ಅದ್ವೈತ ಸ್ವರೂಪವನ್ನು ದೃಢವಾಗಿ ಅರಿತು, ಮೋಕ್ಷ ಸಾಧನೆಯ ತೀವ್ರ ಆಕಾಂಕ್ಷೆಯನ್ನು ಹೊಂದಿ, ಧ್ಯಾನವೇ ಮೊದಲಾದವುಗಳಲ್ಲಿ ತತ್ಪರನಾಗಿದ್ದರೂ, ಕಾಮಸುಖದ ಲೋಲುಪತೆಗೆ ಬಲಿಯಾಗಿ ಬಿಡುವುದು! ಪೂರ್ವಜನ್ಮಗಳ ವಾಸನೆಯೇ ಇದಕ್ಕೆ ಕಾರಣ. ಇಂತಹ ಕಾಮವ್ಯಾಮೋಹದಿಂದ ಪಾರಾಗದಿದ್ದರೆ, ಎಷ್ಟೇ ಪ್ರಮಾಣದ ಆಧ್ಯಾತ್ಮ ಸಾಧನೆಯಿಂದಲೂ ಏನೂ ಪ್ರಯೋಜನವಾಗುವುದಿಲ್ಲ - ಮುಕ್ತಿ ದೊರಕುವುದೂ ಇಲ್ಲ. ಭಿನ್ನಲಿಂಗಿಯೊಡನೆ ಎಂಟು ಬಗೆಯ ವರ್ತನೆಗಳು ಮೈಥುನಕ್ಕೆ ಸಮ ಎಂದು ಶಾಸ್ತ್ರಗಳು ಪರಿಗಣಿಸಿವೆ. ಅವುಗಳೆಂದರೆ, ಅನವಶ್ಯಕವಾಗಿ ಸ್ಪರ್ಶಿಸುವುದು, ಏಕಾಂತಕ್ಕೆ ಕರೆದೊಯ್ದು ವಿನಾಕಾರಣ ಗುಪ್ತವಾಗಿ ಮಾತನಾಡುವುದು, ಹಾಸ್ಯದ ಚಟಾಕಿಗಳಿಂದ ನಗುವಂತೆ



ಮಾಡುವುದು, ಇತ್ಯಾದಿ. ಸಾಧಕನು ಅಧ್ಯಾತ್ಮ ಸಾಧನೆಯಲ್ಲಿ ಯಶಸ್ವಿಯಾಗಬೇಕಾದರೆ ಈ ಬಗೆಯ ಯಾವುದೇ ರಹಸ್ಯ ವ್ಯವಹಾರದಲ್ಲಿ ತೊಡಗದಂತೆ ಮುನ್ನೆಚ್ಚರಿಕೆ ವಹಿಸಲೇಬೇಕು. ಆಗ ಮಾತ್ರ ಅಧ್ಯಾತ್ಮದ ಗುರಿಯನ್ನು ಹೊಂದಲು ಸಾಧ್ಯವಾಗುತ್ತದೆ.

## 12. ಮೋಕ್ಷ ಸಾಧಕನು ಮುಕ್ತಿಯ ಬಗೆಗೇ ಭಯಪಡುತ್ತಾನೆ !

ಇಹಾಮುತ್ರ ವಿರಕ್ತಸ್ಯ ನಿತ್ಯಾನಿತ್ಯ ವಿವೇಕಿನಃ ।
ಆಶ್ಚರ್ಯಂ ಮೋಕ್ಷ ಕಾಮಸ್ಯ ಮೋಕ್ಷಾದೇವ ವಿಭೀಷಿಕಾ ॥(111-8)

ಆಶ್ಚರ್ಯವೆಂದರೆ, ಮುಕ್ತಿಯ ಬಗೆಗೆ ತೀವ್ರ ಆಸಕ್ತಿಯುಳ್ಳ ವ್ಯಕ್ತಿಯೂ ಸಹ, ಆತ್ಮಾನಾತ್ಮ ವಿವೇಕದಿಂದ ಶಾಶ್ವತ ಹಾಗೂ ನಶ್ವರ ವಸ್ತುಗಳನ್ನು ತಿಳಿದವನಾದರೂ, ಸಕಲ ಪ್ರಾಪಂಚಿಕ ಹಾಗೂ ಸ್ವರ್ಗ ಭೋಗಗಳ ಬಗೆಗೆ ತೀವ್ರ ಜಿಜ್ಞಾಸೆಯುಳ್ಳವನಾಗಿಯೂ ತನ್ನ ಅಂತಿಮ ಕ್ಷಣದಲ್ಲಿ ಮುಕ್ತಿಯ ಬಗೆಗೇ ಭಯಗೊಳ್ಳುತ್ತಾನಲ್ಲ ! ಗುರಿಯನ್ನು ಮುಟ್ಟುವಲ್ಲಿ ಪ್ರಾಯಶಃ ಈ ಕಟ್ಟಕಡೆಯ ಪ್ರಬಲ ಪ್ರತಿಬಂಧಕ (ತಡೆ)ವನ್ನೂ ದಾಟಬೇಕಾಗುತ್ತದೆ. ಅದಕ್ಕೆ ಪ್ರಬಲ ಇಚ್ಛೆ, ಮನೋದಾರ್ಢ್ಯ ಹಾಗೂ ಪರಮಾತ್ಮ ಕೃಪೆ ಅತ್ಯಗತ್ಯ.

ಮುಕ್ತಿಯ ಬಗೆಗೆ ಕಡೆಯ ಕ್ಷಣದ ಈ ಭಯಕ್ಕೆ ಈ ಎರಡರಲ್ಲಿ ಒಂದು ಅಥವಾ ಈ ಎರಡೂ ಕಾರಣಗಳಿರಬಹುದು :

(ಅ) ತನಗೆ ಚೆನ್ನಾಗಿ ಅಭ್ಯಾಸವಾಗಿಬಿಟ್ಟಿರುವ ಈ ಪ್ರಾಪಂಚಿಕ ಸುಖಭೋಗಗಳು (ಒಳ್ಳೆಯ ಆಹಾರ, ಪಾನೀಯ, ನೃತ್ಯ, ಸಂಗೀತ ಇತ್ಯಾದಿ) ಮೋಕ್ಷವನ್ನು ಪಡೆದಾಗ ತನಗೆ ದೊರೆಯದೆ ಹೋಗಬಹುದು. ಆದರೆ ಇಂತಹ ಕಾರಣ ಬಹುಶಃ ಕಡಿಮೆ, ಏಕೆಂದರೆ ಈಗಾಗಲೇ ವಿವರಿಸಿದಂತೆ ಅವನು ಎಲ್ಲ ಪ್ರಾಪಂಚಿಕ ಸುಖಗಳನ್ನೂ ತೊರೆದು ಬಿಟ್ಟೇ ಇರುತ್ತಾನೆ.

(ಆ) ಪ್ರತಿಯೊಬ್ಬನೂ ತನ್ನನ್ನು ದೇಹದೊಂದಿಗೇ ಗುರುತಿಸಿಕೊಂಡು ತಾನೊಬ್ಬ ವ್ಯಕ್ತಿ ಎಂದು ಭಾವಿಸುತ್ತಾನೆ. ಉಳಿದೆಲ್ಲ ಮನುಷ್ಯರೂ ತನ್ನಿಂದ ಬೇರೆ ಎಂದೇ ತಿಳಿಯುತ್ತಾನೆ. ಒಬ್ಬನು ತನ್ನ ಶತ್ರು, ಮತ್ತೊಬ್ಬನು ಪ್ರಿಯ, ಒಬ್ಬನು ಸ್ನೇಹಿತ ಮತ್ತೊಬ್ಬನು ಪುತ್ರ ಇತ್ಯಾದಿ. ತನ್ನ ಏಕ ವ್ಯಕ್ತಿ ಎಂಬ ಸ್ವಯಂ ಆರೋಪಿತ ಭಾವದ

ಕಾರಣವಾಗಿಯೇ ಇಂತಹ ಸ್ಪರ್ಧೆ, ಶತ್ರುತ್ವ, ದ್ವೇಷ ಇತ್ಯಾದಿ ಹಾಗೂ ಅದರ ಪರಿಣಾಮವಾದ ದುಃಖ ಸಂಕಟ ಇರುವುದು. ಏಕ ಆತ್ಮವೇ ಅದೇ ಎಲ್ಲ ದೇಹಗಳಲ್ಲೂ ಇರುವುದು ಎಂಬ ಅರಿವಾದ ಕ್ಷಣದಲ್ಲಿಯೇ ಅವನು (ಜನರೇಟರ್‌ನಿಂದ ಹೊಮ್ಮಿದ ಒಂದೇ ವಿದ್ಯುತ್ ಶಕ್ತಿ ಹಲವಾರು ಬಲ್ಬುಗಳಲ್ಲಿ ಹರಿಯುವಂತೆ), ಪ್ರಪಂಚದ ಯಾವೊಂದು ವಸ್ತುವೂ ತನ್ನಿಂದ ಬೇರೆಯಲ್ಲ, ಎಲ್ಲ ಸಂಗತಿಗಳೂ, ಸ್ವಪ್ನ ನಾಟಕದಲ್ಲಿ, ತಾನೊಬ್ಬನೇ ತನ್ನ ಶತ್ರು, ಪುತ್ರ ಇತ್ಯಾದಿ ನಾನಾ ಪಾತ್ರಗಳನ್ನು ಅಭಿನಯಿಸಿದವನು ಎಂಬ ತಿಳಿವು ಮೂಡುತ್ತದೆ. ಹೀಗಾಗಿ ಪೂರ್ಣತೆಯೊಂದೇ ಇರುವುದು, ಅದು ಏಕಮಾತ್ರ ಸತ್ಯ, ವ್ಯಕ್ತಿತ್ವ ಭಾವ ನಾಶವಾಗುತ್ತದೆ. ಮೋಕ್ಷ ಎಂದರೆ ಪರಿಮಿತ ವ್ಯಕ್ತಿತ್ವದ ನಾಶ, ಅದು ಗೋಡೆಗಳೇ ಇಲ್ಲದ, ಅನಂತತೆಯಲ್ಲಿ ಮುಳುಗಿಬಿಡುತ್ತದೆ. ಆದುದರಿಂದ ಕಡೆಯ ಕ್ಷಣದಲ್ಲಿ ಸಾಧಕನನ್ನು ಹಿಡಿದುಕೊಳ್ಳುವ ವ್ಯಕ್ತಿತ್ವ ಎಂಬುದು, ಮಾನ್ಯ ಸಕ್ಸೇನ, ಮಾನ್ಯ ಶ್ರೀವತ್ಸ ಅಥವಾ ಜೇಮ್ಸ್, ಮಾಯವಾಗಲೇಬೇಕು. ಎಂದರೆ 'ನಾನು' ಎಂಬುದು ಮಾಯವಾದರೆ, ಯಾವುದು ಉಳಿಯುತ್ತದೆ? ಈ 'ನಾನು' ಅನುಭವಿಸಲಸಾಧ್ಯವಾದ ಯಾವುದು ತಾನೇ ಮೋಕ್ಷಕ್ಕೆ ಅಗತ್ಯವಾಗುತ್ತದೆ? ಹೀಗಾಗಿ ವ್ಯಕ್ತಿಯು "ಪರಮ ಪುರುಷ" ಎಂದು ಕರೆಯಲಾದ ಅನಂತ ಪೂರ್ಣತೆಯಲ್ಲಿ ಮುಳುಗಿ ಹೋಗುತ್ತಾನೆ. ಮೋಕ್ಷವನ್ನು ಪಡೆಯಲೆಂದು ಪ್ರಾರಂಭಿಸಿದ ಅವನ ಪ್ರಯಾಣ, ಮೋಕ್ಷದ ಬಗೆಗೇ ಭಯಗೊಂಡು, ಅದು ತನ್ನ ವ್ಯಕ್ತಿತ್ವದ ನಷ್ಟದಲ್ಲಿ ಪರ್ಯವಸಾನವಾಗುತ್ತದೆ ಎಂಬ ಕಾರಣದಿಂದ ಹಿಮ್ಮೆಟ್ಟಿ ಬಿಡುತ್ತದೆ. ಮುಂದೆ, ಅಷ್ಟಾವಕ್ರರು,

**ಯದಾ ನಾಹಂ ತದಾ ಮೋಕ್ಷೋ, ಯದಾಹಂ ಬಂಧನಂ ತದಾ॥** (VIII-4) ಎಂಬಲ್ಲಿ ಸ್ಪಷ್ಟಪಡಿಸುತ್ತಾರೆ.

'ನಾನು' ಎಂಬುದು ಅಲ್ಲಿ ಇರದೇ ಇರುವುದರಿಂದ ಮೋಕ್ಷ ಮಾತ್ರ ಆ ಸ್ಥಾನವನ್ನು ಹೊಂದುತ್ತದೆ. ಎಲ್ಲಿಯವರೆಗೆ 'ನಾನು' ಎಂಬುದು ಇರುತ್ತದೋ, ಅಲ್ಲಿಯವರೆಗೂ ವ್ಯಕ್ತಿಯು ಬಂಧನದಲ್ಲಿಯೇ ಮುಂದುವರೆಯುತ್ತಿರುತ್ತಾನೆ.



## 13. ಜ್ಞಾನಿಯು ತುಷ್ಟನೂ ಅಲ್ಲ, ಅಸಂತುಷ್ಟನೂ ಅಲ್ಲ

ಧೀರಸ್ತು ಭೋಜ್ಯಮಾನೋಪಿ ಪೀಡ್ಯ ಮಾನೋಪಿ ಸರ್ವದಾ ।
ಆತ್ಮಾನಂ ಕೇವಲಂ ಪಶ್ಯನ್ ನ ತುಷ್ಯತಿ ನ ಕುಪ್ಯತಿ ॥
(III–9)

ಧೀರನಾದ ಜ್ಞಾನಿ ಯಾರಾದರೂ ತನ್ನನ್ನು ಹೊಗಳಲಿ, ಹಿಂಸಿಸಲಿ, ಅಚಂಚಲನಾಗಿಯೇ ಇರುತ್ತಾನೆ. ಹಬ್ಬದ ಊಟವನ್ನೇ ಮಾಡಿಸಲಿ, ಸಂತುಷ್ಟ ನಾಗುವುದೂ ಇಲ್ಲ, ಚಿತ್ರಹಿಂಸೆ ಮಾಡಿದಾಗ ಜುಗುಪ್ಸೆ ಗೊಳ್ಳುವುದೂ ಇಲ್ಲ, ಕುಪಿತನಾಗುವುದೂ ಇಲ್ಲ. ಎಲ್ಲೆಲ್ಲಿಯೂ ತನ್ನ ಆತ್ಮವನ್ನೇ ಕಾಣುತ್ತಾನೆ, ತಾನು ಪ್ರತ್ಯೇಕ ವ್ಯಕ್ತಿತ್ವ ಉಳ್ಳವನಾಗಿ ಇರುವುದೂ ಇಲ್ಲ. ಬೇರೆಯವರ ಯಾವುದೇ ಕಾರ್ಯಗಳು ಅವನನ್ನು ಭಾದಿಸುವುದಿಲ್ಲ, ಏಕೆಂದರೆ ಜೀವನ ನಾಟಕದಲ್ಲಿ ಇದೆಲ್ಲ ಸಹಜವೇ ಎಂದು ಅವನು ತಿಳಿದಿರುತ್ತಾನೆ. ಅವನಿಗೆ ಹಬ್ಬದೂಟವನ್ನು ನೀಡಿದವನೂ, ತನ್ನನ್ನು ಹಿಂಸಿಸಿದವನೂ, ಆ ಬಗೆಬಗೆಯ ಪಾತ್ರಗಳಲ್ಲಿ ಅಭಿನಯಿಸುತ್ತಿರುವವನು ತಾನೇ. ಉದಾಹರಣೆಗೆ ಹಿಂದೀ ಚಿತ್ರರಂಗದ ಪ್ರಸಿದ್ಧ ನಟ ಅಮಿತಾಬ್ ಬಚನ್, ಒಂದೇ ಸಿನಿಮಾದಲ್ಲಿ ತಂದೆಯಾಗಿ, ಅವನ ಮಗ ಮನೆಯಿಂದ ಓಡಿಹೋಗಿ ಡಕಾಯಿತನಾಗಿ, ಮತ್ತು ಎರಡನೆಯ ಮಗ ಪೊಲೀಸ್ ಸೂಪರಿಂಟೆಂಡೆಂಟ್ ಆದವನು ಆತನನ್ನು ಸೆರೆಹಿಡಿದೇ ತೀರುತ್ತೇನೆ ಎಂದು ಪ್ರತಿಜ್ಞೆ ಮಾಡಿರುತ್ತಾನೆ. ರಾಮಾಯಣವನ್ನು ಕುರಿತ ಸಿನೆಮಾದಲ್ಲಿ ಒಂದು ವೇಳೆ ನೀವು ರಾಮನಾಗಿ ಅಭಿನಯಿಸುತ್ತಾ ಹಾಗೆಯೇ ರಾಮನ ಮೇಲೆ ನಿಂದನೆಯ ಸುರಿಮಳೆಗೈಯುತ್ತಿರುವ ರಾಕ್ಷಸರಾಜ ರಾವಣನೂ ಆಗಿ ಅಭಿನಯಿಸುತ್ತಿದ್ದರೆ, ಅವನ ಮೇಲಿನ ಬಯ್ಗಳು ರಾಮನ ಪಾತ್ರ ವಹಿಸಿದವನನ್ನು ನೋಯಿಸುತ್ತದೆಯೆ? ಏಕೆಂದರೆ ತಾನೇ ಎರಡೂ ಪಾತ್ರಗಳಲ್ಲಿ ಅಭಿನಯಿಸುತ್ತಿರುವವನು ಎಂದು ಪಾತ್ರಧಾರಿಗೆ ಚೆನ್ನಾಗಿ ತಿಳಿದಿದೆ. ಜೀವನ್ಮುಕ್ತನ ಸ್ವರೂಪವೂ ಇಂಥದೇ ಆಗಿರುತ್ತದೆ. ಒಬ್ಬನು ತಾನು ಮುಕ್ತನಾಗಿದ್ದೇನೆಯೇ ಇಲ್ಲವೇ ಎಂಬುದನ್ನು ಸ್ವತಃ ತಿಳಿಯಲು ಇಂತಹ ಆತ್ಮಪರೀಕ್ಷೆ ಒಂದು ಸಹಾಯಕ ಮಾನದಂಡವಾಗುತ್ತದೆ. ಬೇರೊಬ್ಬ ಮನುಷ್ಯ ಮುಕ್ತನಾಗಿದ್ದಾನೆಯೇ ಇಲ್ಲವೇ ಎಂದು ಪರೀಕ್ಷಿಸುವ ಸಾಧನ ಇದಲ್ಲ. ಜೀವನ್ಮುಕ್ತನು ತನ್ನನ್ನು ಸಾಮಾನ್ಯ ಮನುಷ್ಯನು ಗುರುತಿಸುವಂತಹ ಯಾವ ಕೊಂಬುಗಳನ್ನೂ ಬೆಳೆಸಿಕೊಂಡಿರುವುದಿಲ್ಲ! ಅವನು ಬೇರೆ ಯಾವ ಸಾಮಾನ್ಯ ಮನುಷ್ಯನಿಗಿಂತ ಸಾಮಾನ್ಯ

ನಾಗಿರುತ್ತಾನೆ. ಒಂದು ವೇಳೆ ನಾವು ಅವನನ್ನು ಬೀದಿಯಲ್ಲಿ ಸಂಧಿಸಿದರೆ ಅವನನ್ನು ಮತ್ತೊಮ್ಮೆ ನೋಡಲು ಬಯಸುವುದಿಲ್ಲ. ಮುಂದೆ ಅಷ್ಟಾವಕ್ರರು ಹೇಳುತ್ತಾರೆ :

**"ಭ್ರಾಂತಸ್ಯೇವ ದಶಾಸ್ತಾಸ್ತಾಸ್ತಾದೃಶಾ ಏವ ಜಾನತೇ ।"**(14–4)

ಆತ್ಮಜ್ಞಾನಿಯಾದವನ ಸ್ಥಿತಿಯು ಹುಚ್ಚನಂತೆಯೇ ಇರುತ್ತದೆ. ಅಂತಹುದೇ ಸ್ಥಿತಿಯಲ್ಲಿರುವ ಮತ್ತೊಬ್ಬನು ಮಾತ್ರ ಅವನನ್ನು ಗುರುತಿಸಬಲ್ಲ.

**14. ಜ್ಞಾನಿಯು, ಯಾವುದೇ ಪ್ರಾಪಂಚಿಕ ಸುಖ ಅವನನ್ನು ಆಕಸ್ಮಾತ್ ಹುಡುಕಿ ಬಂದಾಗ, ಸಂತೋಷ ಪಡುವುದೂ ಇಲ್ಲ, ಅಸಂತುಷ್ಟ ನಾಗುವುದೂ ಇಲ್ಲ.**

ಅಂತಸ್ತ್ಯಕ್ತ ಕಷಾಯಸ್ಯ ನಿರ್ದ್ವಂದಸ್ಯ ನಿರಾಶಿಷಃ ।
ಯದೃಚ್ಛಯಾಽಽಗತೋ ಭೋಗೋ ನ ದುಃಖಾಯ ನ
ತುಷ್ಟಯೇ॥ (111–14)

ತನ್ನ ಪೂರ್ವ ವಾಸನೆಯಿಂದ ಮುಕ್ತನಾದವನು (ಹೃದಯಾಂತರಾಳದಿಂದ) ಸುಖ ದುಃಖಗಳೆಂಬ ದ್ವಂದ್ವಗಳಿಂದ ಬಾಧಿತನಾಗದವನು, ಚಳಿ, ಸೆಕೆಗಳಿಂದ ಪೀಡಿತನೇ ಆಗದವನು, ಅಕಸ್ಮಾತ್ ಎಂಬಂತೆ ಪ್ರಾಪಂಚಿಕ ಸುಖಗಳು ಒದಗಿ ಬಂದರೂ ಅವು ದುಃಖವನ್ನಾಗಲಿ, ಸುಖವನ್ನಾಗಲಿ ಉಂಟುಮಾಡುವುದಿಲ್ಲ.

ಮುಕ್ತನಾದವನು, ತನ್ನ ಹೃದಯದಿಂದ ವ್ಯಾಮೋಹ, ದ್ವೇಷ, ಅಪೇಕ್ಷೆ–ಕಾಮ ಅಥವಾ ಮೋಹ, ಕ್ರೋಧ, ಲೋಭ ಇತ್ಯಾದಿಗಳೂ ಸೇರಿದಂತೆ–ತೊಲಗಿಸಿ ಬಿಟ್ಟಿರುವವನೇ ಆಗಿದ್ದಾನೆ. ಸೆಕೆ–ಚಳಿ, ಸುಖ–ದುಃಖ ಈ ದ್ವಂದ್ವಗಳೆಲ್ಲವೂ ಮಾನಸಿಕ ತೋರಿಕೆಗಳು ಮಾತ್ರ, ಅವೆಲ್ಲವೂ ಅಸತ್ಯ ಎಂಬುದು ಅವನಿಗೆ ತಿಳಿದಿದೆ. ಆದುದರಿಂದಲೇ ಅವೆಲ್ಲದರಿಂದ ಮುಕ್ತನಾಗಿದ್ದಾನೆ. ಒಳ್ಳೆಯ ಆಹಾರ, ಒಳ್ಳೆಯ ಸಂಗೀತ, ಒಳ್ಳೆಯ ಉಡುಪು, ಸುಂದರ ಯುವತಿ, ಈ ಯಾವುದರ ಆಸೆಯೂ ಅವನಿಗಿರದು. ಅಂತಹ ಜೀವನ್ಮುಕ್ತನು ಅನಿರೀಕ್ಷಿತ ಸಂದರ್ಭಗಳಲ್ಲಿ, ಕೆಲವು



ಭೋಗಗಳನ್ನು ಅನುಭವಿಸುವ ಒತ್ತಡದ ಸಂದರ್ಭಗಳಲ್ಲಿಯೂ ಅದು ಅವನಲ್ಲಿ ಯಾವ ವ್ಯತ್ಯಾಸವನ್ನೂ ಉಂಟುಮಾಡುವುದಿಲ್ಲ. ಅವನಿಗೆ ಸಂತೋಷವೂ ಇಲ್ಲ–ಅಸಂತೋಷವೂ ಇಲ್ಲ. ಈ ಸಂದರ್ಭದಲ್ಲಿ ಭಗವಾನ್ ರಮಣ ಮಹರ್ಷಿಗಳಿಂದ ಹೇಳಲ್ಪಟ್ಟ ಒಂದು ಕಥೆ ("ರಮಣರ ಕಥೆಗಳು" ಎಂಬ ರಮಣಾಶ್ರಮದ ಪ್ರಕಟಣೆಯಲ್ಲಿರುವಂತೆ) ಉಲ್ಲೇಖಕ್ಕೆ ಅರ್ಹವಾಗಿದೆ.

ಒಮ್ಮೆ, ಅರಣ್ಯದಲ್ಲಿ ವಾಸಿಸುತ್ತಿದ್ದ ಮುಕ್ತ ಜ್ಞಾನಿಯನ್ನು ಮಹಾರಾಜನ ಒತ್ತಾಯದಿಂದ, ಒಬ್ಬ ವೇಶ್ಯೆಯು ಪ್ರಲೋಭಿಸಲು ಸಮೀಪಿಸುತ್ತಾಳೆ. ಆ ಸಂತನು ಕೇವಲ ಠಕ್ಕುಗಾರ ಎಂದು ಬಯಲು ಮಾಡುವುದೇ ಅವಳ ಈ ಪ್ರಲೋಭನೆಯ ಉದ್ದೇಶವಾಗಿತ್ತು. ಆ ಸಂತನಿಂದ ಆಕೆಗೆ ಒಂದು ಮಗವೂ ಜನಿಸಿ ಬಿಟ್ಟಿತು. ಸಾರ್ವಜನಿಕರ ಎದುರಿನಲ್ಲಿ ಆ ಸಂತನ ಮಾನವನ್ನು ಹರಾಜು ಹಾಕುವ ಉದ್ದೇಶದಿಂದ, ದೇವಾಲಯದ ಸಭಾಂಗಣದಲ್ಲಿ ಒಂದು ನೃತ್ಯ ಪ್ರದರ್ಶನವನ್ನು ಆ ವೇಶ್ಯೆಯಿಂದ ಮಹಾರಾಜನು ಏರ್ಪಡಿಸಿದನು. ಆ ರಾತ್ರಿ ವೇಶ್ಯೆಯು ತನ್ನ ಮಗುವಿಗೆ ಯಾವುದೋ ಸಸ್ಯದ ಪುಡಿಯನ್ನು ತಿನ್ನಿಸಿ, ಆ ಸಂತನ ಸುಪರ್ದಿಯಲ್ಲಿ ಮಗುವನ್ನು ಇರಿಸಿದ್ದಳು. ಕೆಲವು ನಿಮಿಷಗಳ ನಂತರ, ಮಗುವು ಗಟ್ಟಿಯಾಗಿ, ಒಂದೇ ಸಮನೆ ಅಳತೊಡಗಿತು. ಆ ಸಂತನು ಮಗುವನ್ನು ನರ್ತಿಸುತ್ತಿದ್ದ ವೇಶ್ಯೆಯ ಸಮೀಪಕ್ಕೆ ಕರೆದೊಯ್ದು, ನೃತ್ಯಾಂಗಣದ ಒಂದು ಪಾರ್ಶ್ವದಲ್ಲಿಯೇ ಕುಳಿತುಕೊಂಡನು. ನೃತ್ಯ ಮಾಡುತ್ತಿದ್ದ ಆಕೆ ತನ್ನ ನರ್ತನದ ಒಂದು ಭಂಗಿಯಲ್ಲಿ ಕಾಲಿನ ಒಂದು ಗೆಜ್ಜೆಯನ್ನು ಸಡಿಲಗೊಳಿಸಿದಳು. ಸಂತನು ಕೂಡಲೆ ಅದನ್ನು ತೆಗೆದುಕೊಂಡನು. ನರ್ತಕಿ ಮುಂದಿನ ಸಲ, ಆ ಸಂತನನ್ನು ಸಮೀಪಿಸಿದಾಗ, ಸಂತನು ತನ್ನ ಒಂದು ಕೈಯಲ್ಲಿ ಮಗುವನ್ನು ಅಪ್ಪಿಕೊಂಡು, ಮತ್ತೊಂದು ಕೈಯಿಂದ ಆ ನರ್ತಕಿಯ ಕಾಲಿಗೆ ಗೆಜ್ಜೆಯನ್ನು ಕಟ್ಟಿದನು. ಸಭಿಕರೆಲ್ಲರೂ ಗಟ್ಟಿಯಾಗಿ ನಗತೊಡಗಿದರು. ಆ ಸಂತನು ನರ್ತಕಿಯ ಪ್ರಿಯಕರ ಎಂದು ಅವರು ಅರ್ಥಮಾಡಿಕೊಂಡರು ! ಸಂತನು ವ್ಯಗ್ರನಾಗಿ ಮೇಲೆದ್ದು "ನಾನು ಜೀವನ್ಮುಕ್ತ ಜ್ಞಾನಿ ಎಂಬುದೇ ನಿಜವಾಗಿದ್ದಲ್ಲಿ ಈ ನೃತ್ಯ ಮಂಟಪದಲ್ಲಿ ಅಗೋ ಅಲ್ಲಿ ಇರಿಸಿದ ಭಗವಂತನ ವಿಗ್ರಹ ಮೂರು ಚೂರಾಗಿ ಒಡೆದುಬಿಡಲಿ" ಎಂದನು. ತಕ್ಷಣ ವಿಗ್ರಹ ಮೂರು ಚೂರಾಗಿ ಒಡೆದೇಬಿಟ್ಟಿತು.

ಈ ಕಥೆಯು ಸ್ಪಷ್ಟಪಡಿಸುವುದೇನೆಂದರೆ, ಆತ್ಮಜ್ಞಾನಿಯನ್ನು ಪರೀಕ್ಷಿಸುವುದು ಕಠಿಣ, ಆತನ ಬಗ್ಗೆ ತೀರ್ಮಾನ ಹೇಳಿಬಿಡುವ ಅಧಿಕಾರ ನಮಗಿಲ್ಲ. ಮೇಲೆ ವಿವರಿಸಿದ ಸಂದರ್ಭ, ಹಾಗೂ ಈ ಶ್ಲೋಕ, ಒಂದು ಅತ್ಯಂತ ಅಪರೂಪದ ಉದಾಹರಣೆಯಷ್ಟೆ. ಅಧ್ಯಾತ್ಮ ಸಾಧಕನು, ಈ ಸಂತನ ಮಾತು ಹಾಗಿರಲಿ, ಯಾರನ್ನೂ ಟೀಕಿಸಬಾರದು.

ಅಲ್ಲದೆ, ಅರ್ಹತೆ ಅಥವಾ ಅನರ್ಹತೆ, ಪುಣ್ಯ ಅಥವಾ ಪಾಪ, ಕರ್ತೃತ್ವ ಭಾವ ಉಳ್ಳವನಿಗೆ ಮಾತ್ರ ಉಂಟಾಗುತ್ತದೆ. ಜ್ಞಾನಿಗೆ ಇಂತಹ ಕರ್ತೃತ್ವ ಭಾವವೇ ಇರುವುದಿಲ್ಲ. ಅವನ ದೃಷ್ಟಿಯಲ್ಲಿ, ಎಲ್ಲ ಕಾರ್ಯಗಳೂ ಒಟ್ಟಂದದಲ್ಲಿಯೇ ನಡೆಯುವಂತಹವು. ಅವನು ಸಾಕ್ಷಿ ಮಾತ್ರ. ತಾನು ಗಳಿಸಬೇಕಾದ ಯಾವ ಅಪೇಕ್ಷೆಯೂ ಅವನಿಗಿಲ್ಲ.

ದಕ್ಷಳಾದ ಯಾವೊಬ್ಬ ನರ್ತಕಿಯೂ, ನರ್ತಿಸುವಾಗ ಒಂದು ತಪ್ಪು ಹೆಜ್ಜೆಯನ್ನೂ ಇಡುವುದಿಲ್ಲ. ಯಾವುದೋ ದೈವಿಕ ಸಂಯೋಜನೆಯ ಉದ್ದೇಶಕ್ಕಾಗಿಯಲ್ಲದೆ ಆ ದಿಸೆಯಲ್ಲಿ ಆತ್ಮಜ್ಞಾನಿಯು ವರ್ತಿಸಲು ಧಾವಿಸುವುದಿಲ್ಲ. ಸಾಮಾನ್ಯ ಸ್ತರದಲ್ಲಿ ವಿವರಿಸಲು ಅಸಾಧ್ಯವಾದ ಹಲವಾರು ಇಂತಹ ಅಪವಾದಗಳು ಇದ್ದೇ ಇವೆ. ಆದರೆ ಪ್ರಕೃತ ಸಂದರ್ಭದಲ್ಲಿ ಯಾವ ಪುಣ್ಯ-ಪಾಪಗಳೂ ಸಂತನಿಗೆ ಅಂಟಿಕೊಳ್ಳಲಾರವು. ಅವನು ಅವುಗಳಿಂದ ಅಬಾಧಿತನಾಗಿಯೇ ಇರುತ್ತಾನೆ. ಈ ಸಂಪೂರ್ಣ ಕಥೆಯ ಸಂದರ್ಭಗಳೂ ಒಂದು ದೈವಿಕ ರಹಸ್ಯವಷ್ಟೆ!

## 15. ಯಾವಾಗ ಮನಸ್ಸು ಏನನ್ನೂ ಹಿಡಿಯುವುದಿಲ್ಲವೋ-ತಿರಸ್ಕರಿಸುವುದೂ ಇಲ್ಲವೋ, ಅದೇ ಮುಕ್ತಿ (ಮೋಕ್ಷ)

ತದಾ ಮುಕ್ತಿರ್ಯದಾ ಚಿತ್ತಂ ನ ವಾಂಛತಿ ನ ಶೋಚತಿ ।
ನ ಮುಂಚತಿ ನ ಗೃಹ್ಣಾತಿ ನ ಹೃಷ್ಯತಿ ನ ಕುಪ್ಯತಿ॥ (VIII-2)

ಯಾವಾತನ ಮನಸ್ಸು ಆಸೆಗಳು, ಪಶ್ಚಾತ್ತಾಪ, ದುಃಖ, ಸ್ವೀಕರಿಸುವುದು ಅಥವಾ ತ್ಯಜಿಸುವುದು, ಸಂತೋಷ ಅಥವಾ ಕ್ರೋಧ, ಇಂತಹ ದ್ವಂದ್ವಗಳಿಂದ ಮುಕ್ತವಾಗುತ್ತದೋ, ಆಗಲೇ ಆವನು ಮುಕ್ತಿ (ಮೋಕ್ಷ) ಯನ್ನು ಹೊಂದುತ್ತಾನೆ.

ಎಂಟನೆಯ ಅಧ್ಯಾಯದಲ್ಲಿ ಅಷ್ಟಾವಕ್ರರು ಮೋಕ್ಷವನ್ನು ಹೊಂದುವ ಅಗತ್ಯಗಳನ್ನು ಮೂರು ಶ್ಲೋಕಗಳಲ್ಲಿ ಸಂಗ್ರಹಿಸಿದ್ದಾರೆ. ಮುಖ್ಯವಾಗಿ



ಮನೋ ನಿಗ್ರಹ-ಯಾವುದೇ ಪ್ರಾಪಂಚಿಕ ವಸ್ತುಗಳ ಸಂಗ್ರಹ ಅಥವಾ ಅವುಗಳ ತ್ಯಾಗ ಅಷ್ಟರಿಂದಲೇ ಮುಕ್ತಿಯು ದೊರೆಯುವುದಿಲ್ಲ. ಮುಕ್ತಸ್ಥಿತಿ ನಮ್ಮ ಸಹಜಸ್ಥಿತಿ. ನಾವೆಲ್ಲರೂ ನಿತ್ಯಮುಕ್ತರೇ ! ಆದರೆ ನಮ್ಮ ಹಲವಾರು ಮಾನಸಿಕ ಭ್ರಮೆಗಳಿಂದ ಅದು ನಮ್ಮ ಅನುಭವಕ್ಕೆ ಬರುತ್ತಿಲ್ಲ. ಆತ್ಮವೊಂದೇ ಸತ್ಯ. ಪ್ರಪಂಚದ ಎಲ್ಲ ವಸ್ತು ವಿಷಯಗಳೂ, ಆತ್ಮದ ಅಧಿಷ್ಠಾನದಲ್ಲಿನ ತೋರಿಕೆಗಳು ಮಾತ್ರ. ಅವುಗಳು ಆತ್ಮನಿಂದ ಬೇರೆಯಾದವುಗಳಲ್ಲ. ಆತ್ಮನ ಮೇಲೆ ಅಧ್ಯಾರೋಪವಾದ ಅಸತ್ಯ ವಸ್ತುಗಳಷ್ಟೆ. ಆತ್ಮವೇ ಇಲ್ಲದಿದ್ದರೆ ಈ ಯಾವ ವಸ್ತುಗಳೂ ಇರಲಾರವು. ಆತ್ಮವು ಪೂರ್ಣ-ಅಖಂಡ.

ಆತ್ಮನಿಗೆ ಯಾವುದರ ಕೊರತೆಯೂ ಇಲ್ಲ. ಹಾಗಿರುವಾಗ, ಯಾವುದನ್ನಾದರೂ ಗಳಿಸಬೇಕೆಂಬ ಆಸೆಯು, ಆ ವ್ಯಕ್ತಿ ತನ್ನಲ್ಲಿ ಅದು ಇಲ್ಲವೆಂದು ಭಾವಿಸಿದ್ದಾನೆ ಎಂದು ಸ್ಪಷ್ಟವಾಗುತ್ತದೆ ಎಂದರೆ ತನ್ನ ನಿಜವಾದ ಸ್ವರೂಪವನ್ನು ತಿಳಿದಿಲ್ಲ. ತನ್ನ ಆಸೆಗಳಿಂದ ಬಂಧಿತನಾಗಿದ್ದಾನೆ, ಮುಕ್ತನಲ್ಲ. ಆತ್ಮವು ಕಾಲ-ದೇಶ-ವಸ್ತುಗಳಿಂದ ಬದ್ಧವಾಗಿಲ್ಲ. ಹಾಗೆಯೇ, ಅಸಂತೋಷ ಉಂಟಾಗುವುದು, ಆ ವಸ್ತುವು ದೊರಕಿಲ್ಲ ಎಂಬುದರಿಂದ ಅಥವಾ ಏನನ್ನೋ ಕಳೆದುಕೊಂಡಿದ್ದೇವೆ, ಅದು ಈ ಮೊದಲು ನನ್ನಲ್ಲಿ ಇತ್ತು, ಯಾವಾಗಲೂ ಅದನ್ನು ಹೊಂದಿರಬೇಕೆಂದು ನನ್ನ ಆಸೆಯಾಗಿತ್ತು ಎಂಬ ಪಶ್ಚಾತ್ತಾಪದಿಂದ ಉಂಟಾಗುತ್ತದೆ. ಮತ್ತೊಮ್ಮೆ ಇದು ನಮ್ಮ ಅಪರಿಪೂರ್ಣತೆಯನ್ನೇ ತೋರಿಸುತ್ತದೆ. ಆತ್ಮವು ಸದಾ ಪರಿಪೂರ್ಣ ಹಾಗೂ ಸಂಪೂರ್ಣ. ಪೂರೈಸಿಕೊಳ್ಳಲಾರದ ಆಸೆಗಳು ಈ ಅಸಂತೋಷಕ್ಕೆ ಕಾರಣವಾಗಿದೆ ಎಂಬ ಭಾವವನ್ನು ತೊಡೆದು ಹಾಕಿದರೆ ಮಾತ್ರ ನಾವು ಮುಕ್ತರಾಗುತ್ತೇವೆ. ಆತ್ಮವು ಪೂರ್ಣವೇ ಆದುದರಿಂದ ಪಡೆದುಕೊಳ್ಳಬೇಕಾದದ್ದು ಏನೂ ಇಲ್ಲ. ಸ್ವೀಕರಿಸಬೇಕಾದದ್ದೂ ಏನೂ ಇಲ್ಲ. ಲಾಭ-ನಷ್ಟ ಎಂಬುದೂ ಇಲ್ಲ. ಏನನ್ನೋ ಪಡೆದುಕೊಂಡಿದ್ದೇನೆ ಅಥವಾ ಕಳೆದುಕೊಂಡಿದ್ದೇನೆ ಎಂದು ಯಾರಾದರೂ ಕಲ್ಪಿಸಿಕೊಂಡರೆ, ಅದು ಕೇವಲ ಅಜ್ಞಾನ. ಅಂಥವನು ಮುಕ್ತಿಯಿಂದ ಬಹುದೂರವೇ ಇದ್ದಾನೆ. ಹಾಗೆಯೇ ತನ್ನ ಆಸೆ ಪೂರೈಸದಿದ್ದಾಗ ಒಬ್ಬನು ಕ್ರೋಧಗೊಳ್ಳುತ್ತಾನೆ. ಹಾಗೆಯೇ ಇಂತಹ ಆಶಾಪೂರ್ಣತೆಗೆ ಯಾರಾದರೂ ಅಡ್ಡಿಯಾಗಿದ್ದಾನೆ ಎಂದರೆ, ಅವನ ಮೇಲೆ ಕುಪಿತನಾಗುತ್ತಾನೆ. ಹಾಗೆಯೇ ಯಾವುದೇ ಸಮಸ್ಯೆ ಇಲ್ಲದೆ ತನ್ನ ಅಪೇಕ್ಷೆ ಪೂರೈಸಿದರೆ ಅವನು

ಸಂತುಷ್ಟನಾಗುತ್ತಾನೆ. ಆದರೆ ಆತ್ಮ ಸಾಕ್ಷಾತ್ಕಾರ ಹೊಂದಿದವನು, ತನ್ನಿಂದ ಬೇರೆಯಾದ ಯಾವ ವಸ್ತುವೇ ಇಲ್ಲದುದರಿಂದ, ಅದನ್ನು ಪಡೆಯುವ ಅಥವಾ ತಿರಸ್ಕರಿಸುವ ಪ್ರಶ್ನೆಯೇ ಏಳುವುದಿಲ್ಲ. ಸಂತೋಷಪಡುವುದು, ಅಸಂತುಷ್ಟನಾಗುವುದು ಎಂಬುದೂ ಇಲ್ಲ.

## 16. ಆಯ್ಕೆ ಇಲ್ಲದ ಅರಿವೇ ಮುಕ್ತಿ

ತದಾ ಬಂಧೋ ಯದಾ ಚಿತ್ತಂ ಸಕ್ತಂ ಕಾಸ್ವಪಿ ದೃಷ್ಟಿಷು ।
ತದಾ ಮೋಕ್ಷೋ ಯದಾ ಚಿತ್ತಮಸಕ್ತಂ ಸರ್ವ ದೃಷ್ಟಿಷು ॥
(VIII-3)

ನಮ್ಮ ಗ್ರಹಿಕೆಯು ಯಾವುದಾದರೂ ವಸ್ತುವಿನೊಡನೆ ವ್ಯಾಮೋಹವೇ ಬಂಧ. ಇದಕ್ಕೆ ಪ್ರತಿಯಾಗಿ ಎಲ್ಲಾ ವಸ್ತುಗಳೊಡನೆ ಒಂದೇ ರೀತಿಯಾದ ವ್ಯಾಮೋಹ (ಎಂದರೆ ಯಾವುದಾದರೂ ನನ್ನ ಗ್ರಹಿಕೆಯ ಒಂದೇ ವಸ್ತುವಿನೊಡನೆ ಅಲ್ಲದೆ) ಮುಕ್ತಿ ಎನಿಸುತ್ತದೆ.

ಇದನ್ನೂ ಶೀಘ್ರ ಪರಿಣಾಮಕಾರಿಯಾದ ಒಂದು ಕ್ಯಾಪ್ಸೂಲ್ ಎಂದು ತಿಳಿಯಬಹುದು. ಆಯ್ಕೆ ಇಲ್ಲದ ಗ್ರಹಿಕೆ ಎಂಬ ಶೀರ್ಷಿಕೆಯಲ್ಲಿ ಈ ವಿಧಾನವೂ ಒಂದು ಎಂದು ಭಾವಿಸಬಹುದು. ಅಂತಾರಾಷ್ಟ್ರೀಯ ಪ್ರಸಿದ್ಧ ತತ್ತ್ವಜ್ಞಾನಿ ಜೆ. ಕೃಷ್ಣಮೂರ್ತಿ ಅವರು ಸೂಚಿಸಿರುವುದು ಇದೇ ಮಾರ್ಗವನ್ನು. ಇದನ್ನು ಮಾನವ ಸೇವಾ ಸಂಘದ ಸ್ವಾಮಿ (ದಿ) ಶ್ರೀ ಶರಣಾನಂದಜೀ ಮಹಾರಾಜರೂ ಹಾಗೂ ಅವರ ಶಿಷ್ಯೆ ದೇವಕೀ ಮಾ, ಜನಪ್ರಿಯಗೊಳಿಸಿದ್ದಾರೆ. ಅದನ್ನು ಅವರು 'ಮೂಕ ಸತ್ಸಂಗ' ಎಂದಿದ್ದಾರೆ.

ಒಂದು ವ್ಯಾವಹಾರಿಕ ಉದಾಹರಣೆಯಾಗಿ ಹೇಳುವುದಾದರೆ, ಒಬ್ಬ ಸಾಧಕನು, ಪ್ರತಿನಿತ್ಯ ತನ್ನ ಮನೆಯಲ್ಲಿನ ಒಂದು ಏಕಾಂತ ಸ್ಥಳದಲ್ಲಿ ಉದಾಹರಣೆಗೆ ಉಪ್ಪರಿಗೆ ಮೇಲಿನ ಸ್ಥಳ ಅಥವಾ ಪುಟ್ಟ ಉದ್ಯಾನ ಆಗಬಹುದು- ಶಾಂತವಾಗಿ ಕುಳಿತುಕೊಳ್ಳಲಿ. ಪ್ರಾರಂಭದಲ್ಲಿ ಆತ ಯಾವುದೇ ಕಾರಣಕ್ಕೆ ತನ್ನನ್ನು ಕನಿಷ್ಠ ಒಂದೆರಡು ಗಂಟೆ ಡಿಸ್ಟರ್ಬ್ ಮಾಡದಿರುವಂತೆ ಮನೆಯವರಿಗೆ ಸೂಚಿಸಬೇಕು. ಒಂದು ಆರಾಮ ಕುರ್ಚಿಯಲ್ಲಿ ಕುಳಿತು ವಿಶ್ರಾಂತನಾಗಲಿ. ಆ ಸಂದರ್ಭದಲ್ಲಿ ಉದ್ಯಾನದಲ್ಲಿ ... ಗಿಡಗಳು, ಮರಗಳು, ಹೂವಿನ ಕುಂಡಗಳು ಇರಬಹುದು.



ಅವುಗಳಲ್ಲಿ ಅವನು ಯಾವುದಾದರೂ ಒಂದನ್ನು ಮಾತ್ರ ಆರಿಸಿ ಕೊಳ್ಳಬಾರದು – "ಈ ಗಿಡವನ್ನು ನಾನು ಅಸ್ಸಾಮ್‌ನಿಂದ ತಂದಿದ್ದೇನೆ. ಅದು ಪೂರಾ ಬಾಡಿ ಹೋಗಿದೆ" ಇತ್ಯಾದಿ ಚಿಂತಿಸ ಬಾರದು. ನಿಮ್ಮ ಕಣ್ಣುಗಳು ಎಲ್ಲ ವಸ್ತುಗಳ ಮೇಲೂಸ್ವಾಭಾವಿಕ ವಾಗಿ ಹರಿಯಲಿ. ಆದರೆ ಅವುಗಳಲ್ಲಿ ಯಾವ ಒಂದನ್ನೂ ಅವನು ತೆಗೆದುಕೊಳ್ಳಬಾರದು. ಪ್ರತ್ಯೇಕವಾಗಿ ಗಮನಿಸಬಾರದು. ಅದರಲ್ಲೇ ಮುಳುಗಿಬಿಡಬಾರದು. ಕಣ್ಣಿನಿಂದ ಯಾವುದಾದರೂ ಒಂದನ್ನು ನೋಡತೊಡಗಿದಕ್ಷಣ, ಅದನ್ನು ಮನಸ್ಸಿಗೆ ವರ್ಗಾಯಿಸಿದಿರೆಂದರೆ ಒಂದು ಬಗೆಯ ಪ್ರೀತಿ-ಕಾಳಜಿ ಅಥವಾ ಪ್ರತಿಕ್ರಿಯೆಯ ಸಂಬಂಧ ಏರ್ಪಟ್ಟುಬಿಡುತ್ತದೆ. ಎಲ್ಲ ಬಗೆಯ ಆಲೋಚನೆಗಳನ್ನೂ ಸ್ಥಗಿತಗೊಳಿಸುವುದೇ ಮುಕ್ತಿಗೆ ಬೀಗದಕ್ಕೆಎಂದು ಈಗಾಗಲೇ ಹೇಳಿಯಾಗಿದೆ.

* * *

ಇದೇ ರೀತಿಯಲ್ಲಿ, ಆಲೋಚನೆಗಳು ಕಿವಿ, ಕಣ್ಣು ಮುಂತಾದವು ಗಳಂತೆ ಮನಸ್ಸಿನಿಂದಲೇ ಉದ್ಭೋದವಾಗುತ್ತದೆ. ಯಾವುದಾದರೂ ಒಂದು ವಸ್ತುವನ್ನು ಆಯ್ಕೆ ಮಾಡಿಕೊಳ್ಳಿ. ಆ ವಿಷಯವನ್ನು ಮನಸ್ಸಿಗೆ ವರ್ಗಾಯಿಸಿ. ಇದು ಮನಸ್ಸಿನಲ್ಲಿ ಆಲೋಚನೆಯ ಅಲೆಗಳನ್ನು ಎಬ್ಬಿಸುತ್ತದೆ. ಅದು ವ್ಯಾಮೋಹದ ಸಂಬಂಧವನ್ನು ಉಂಟುಮಾಡುತ್ತದೆ, ದ್ವೇಷ, ಅಸೂಯೆ, ಭಯ ಇತ್ಯಾದಿ (ಆಯ್ಕೆ ಮಾಡಿದ ವಸ್ತುಗಳೊಡನೆ). ಮತ್ತೊಂದು ಉದಾಹರಣೆಯನ್ನು ನೀಡುವುದಾದರೆ, ನೀವು ಏಕಾಂತದಲ್ಲಿ ಕುಳಿತಿರುವಾಗ, ದುಂಬಿಯ ಝೇಂಕಾರ, ರಸ್ತೆಯಲ್ಲಿ ಅಳುತ್ತಿರುವ ಮಗುವಿನ ಆಕ್ರಂದನ, ಇಬ್ಬರು ವ್ಯಕ್ತಿಗಳು ಪರಸ್ಪರ ಬಯ್ದಾಡುತ್ತಿರುವುದು ಅಥವಾ ರಸ್ತೆಯಲ್ಲಿ ಜಗಳವಾಡುತ್ತಿರುವುದು, ಪಕ್ಕದ ಮನೆಯ ಹುಡುಗಿ ಪಿಯಾನೋ ಅಭ್ಯಾಸ ಮಾಡುತ್ತಿರುವುದರ ಕರ್ಕಶ ಸದ್ದು, ಇತ್ಯಾದಿ. ಆ ಹುಡುಗಿಯ ಪಿಯಾನೋ ಅಭ್ಯಾಸವನ್ನು ಮಾತ್ರ ಆಯ್ಕೆ ಮಾಡಿಕೊಂಡು, ಪಕ್ಕದ ಮನೆಯವರು ಮನೆ ಖಾಲಿ ಮಾಡಬಹುದೇ, ಹಾಗೆ ಮಾಡಿ ನಿಮ್ಮನ್ನು ಶಾಂತವಾಗಿ ಇರಗೊಡುವರೇ ಅಥವಾ ನೀವಾಗಿಯೇ ನಿಮ್ಮ ಮನೆ ಖಾಲಿ ಮಾಡಿ ಮತ್ತೆಲ್ಲಿಗಾದರೂ ಹೋಗುವುದೇ ಸರಿಯಲ್ಲವೇ? ಇತ್ಯಾದಿ ಚಿಂತನೆಗಳಲ್ಲಿ ಸಿಲುಕಿಕೊಳ್ಳಬೇಡಿ. ಯಾವುದೇ ಒಂದು ವಿಷಯವನ್ನು ಹೀಗೆ ಆಯ್ಕೆ ಮಾಡದಿರುವುದನ್ನು ನೀವು ಅಭ್ಯಾಸ ಮಾಡಿಕೊಂಡು 'ಮನಸ್ಸು ಇಲ್ಲದ' (ಮನೋಲಯ)

ಸ್ಥಿತಿಯಲ್ಲಿ ಆಲೋಚನಾರಹಿತವಾಗಿದ್ದು, ಕಣ್ಣು, ಕಿವಿ, ಮೂಗು ಇತ್ಯಾದಿಗಳ ಮೂಲಕ ಯಾವುದಾದರೂ ಒಂದು ವಸ್ತು ವಿಷಯಕ್ಕೆ ಸಿಕ್ಕಿಹಾಕಿಕೊಳ್ಳದಿರುವಂತೆ ಎಚ್ಚರ ವಹಿಸಿದರೆ ಮಾತ್ರ ಮುಕ್ತಿಯು ಸಾಧ್ಯ. ಇದು ಸುಲಭಸಾಧ್ಯವಾದ ಒಂದು ಅಭ್ಯಾಸ, ಬಹುಬೇಗ ನೀವು ಎಲ್ಲ ಬಂಧನಗಳಿಂದ ಮುಕ್ತರಾಗುತ್ತೀರಿ. ಕೆಲವೊಮ್ಮೆ ಆಲೋಚನಾ ಶೂನ್ಯ ಸ್ಥಿತಿಯಲ್ಲಿ ನೀವು ತೂಕಡಿಸುವಂತಾದರೂ ಚಿಂತೆಯಿಲ್ಲ !

ಆಯ್ಕೆ ಇಲ್ಲದ ಗ್ರಹಿಕೆ ಎಂಬುದರ ಅಭ್ಯಾಸವನ್ನು ಸ್ವಲ್ಪಕಾಲ ಮಾಡುತ್ತಾ ಬಂದರೆ, ಕೇವಲ ಒಂದೆರಡು ಗಂಟೆ ಮಾತ್ರವಲ್ಲ, ಈ ಅಭ್ಯಾಸವು ಎಲ್ಲಾ ಕಾಲದಲ್ಲೂ ನಮ್ಮನ್ನು ಹಿಂಬಾಲಿಸುತ್ತದೆ. ರಸ್ತೆಯಲ್ಲಿ ನಡೆಯುತ್ತಿರುವಾಗ, ಟ್ಯಾಕ್ಸಿ ಅಥವಾ ಕಾರಿನಲ್ಲಿ ಪಯಣಿಸುತ್ತಿರುವಾಗ, ನಮ್ಮ ಹಾದಿಯಲ್ಲಿನ ಯಾವ ವಸ್ತುವೂ ನಮ್ಮ ಮನಸ್ಸನ್ನು ಆಕರ್ಷಿಸಬಾರದು. ಮನಸ್ಸು ಒಟ್ಟಂದದಲ್ಲಿಯೇ ನೆಟ್ಟಿರಬೇಕು, ಅದು "ಮನೋಲಯ"ದ ಸ್ಥಿತಿಯೇ ಆಗಿರುತ್ತದೆ. ಬಹುಕಾಲದ ಅಭ್ಯಾಸದ ನಂತರವೇ ಇದು ಸಾಧ್ಯವಾಗುತ್ತದೆ. ಇಂಥ ಅಭ್ಯಾಸದ ನಂತರವೂ, ಒಂದು ದಿನಪೂರ್ತಿಯೂ ಈ ಅಭ್ಯಾಸ ಅಸಾಧ್ಯವಾದರೆ, ಸಂತರ ಪವಿತ್ರ ಸಹವಾಸ ಹಾಗೂ ಭಗವಂತನಲ್ಲಿ ತೀವ್ರವಾದ ಪ್ರಾರ್ಥನೆ ಇವೇ ನಿಶ್ಚಿತ ಪರಿಹಾರ.

* * *

## 17. 'ನಾನು' ಎಂಬುದು ಇಲ್ಲವಾದರೆ ಮುಕ್ತಿಯು ನಿಶ್ಚಿತ

ಯದಾ ನಾಹಂ ತದಾ ಮೋಕ್ಷೋ ಯದಾಹಂ ಬಂಧನಂ ತದಾ ।
ಮತ್ವೇತಿ ಹೈಲಯಾ ಕಿಂಚಿನ್ಮಾ ಗೃಹಾಣ ವಿಮುಂಚ ಮಾ॥
(VIII-4 )

'ನಾನು' ಎಂಬ ಭಾವನೆ ಇರುವವರೆಗೂ ಮೋಕ್ಷವಿಲ್ಲ. ನಾನು ಎಂಬುದೇ ಎಲ್ಲ ಬಂಧನಕ್ಕೆ ಕಾರಣ. ಈ ವಿಷಯವನ್ನು ಅರಿತು, ಯಾವುದನ್ನೂ ಹಿಡಿದು ಕೊಳ್ಳಬೇಡ ಬಿಟ್ಟುಬಿಡಲೂಬೇಡ. (ಅದನ್ನು ಹೊಂದುವುದಕ್ಕಾಗಿ ಅಥವಾ ತ್ಯಜಿಸುವುದಕ್ಕಾಗಿ).

ಈ ಶೀಘ್ರ ಪರಿಣಾಮಕಾರಿಯಾದ ಮೋಕ್ಷ ಕ್ಯಾಪ್ಸೂಲನ್ನು ಬೇರೆ ಮಾತುಗಳಲ್ಲಿ ಈಗಾಗಲೇ ವಿವರಿಸಲಾಗಿದೆ. ಅಷ್ಟಾವಕ್ರರು ಶಾಶ್ವತ ಸುಖ-



ಶಾಂತಿಯ ಆಗರವಾದ ಮೋಕ್ಷದ ಬಗೆಗೆ ಆಕರ್ಷಿಸಲು ಬಗೆಬಗೆಯ ಶಬ್ದ ಅಥವಾ ಆಕರವನ್ನು ಬಳಸುತ್ತಾ, ಯಾವುದಾದರೂ ಒಂದು ನಮ್ಮ ತಲೆಯನ್ನು ಹೊಕ್ಕು ಯಾವುದಾದರೂ ಒಂದು ರೀತಿಯಿಂದ ಆಕರ್ಷಿತರಾಗುತ್ತೇವೆ, ಮೋಕ್ಷ ಮಾರ್ಗವನ್ನು ಹಿಡಿಯುತ್ತೇವೆ ಎಂಬ ಭರವಸೆ ತಾಳುತ್ತಾರೆ. ಇದು ಮುಂದಿನ ಪೀಳಿಗೆಯ ಬಗ್ಗೆ ಅವರ ಅಪರಿಮಿತ ಕರುಣೆ-ಅನುಕಂಪ.

ಪ್ರತಿದಿನ ನಾವು ಎಚ್ಚರಗೊಳ್ಳುತ್ತಿದ್ದಂತೆಯೇ ಮೊಟ್ಟಮೊದಲಿನ ಆಲೋಚನೆ ಎಂದರೆ 'ನಾನು' ಮಿ. ರಾಬರ್ಟ್, 'ನಾನು' ಶಕುಂತಲಾ, 'ನಾನು' ರಾಮಮೂರ್ತಿ ಇತ್ಯಾದಿ.

ನಿದ್ರೆಯಲ್ಲಿ ನಾಮರಹಿತವಾದ ಅಖಂಡ ಪ್ರಜ್ಞೆಯೇ ನೀವು ಆಗಿರುವಾಗ, ಎಚ್ಚರಗೊಳ್ಳುತ್ತಿದ್ದಂತೆಯೇ ನೀವು ಒಂದು ದೇಹ ಮನ ಸಂಘಾತದೊಡನೆ ಗುರುತಿಸಿಕೊಳ್ಳಲು ಬಯಸುತ್ತೀರಿ. ಈ ಗುರುತಿಸಿಕೊಳ್ಳುವುದೇ ಅಹಂ ಅಥವಾ 'ನಾನು'. ಇದು ತನ್ನನ್ನು ಎರಡು ರೀತಿಯಲ್ಲಿ ಪ್ರಕಟಿಸಿಕೊಳ್ಳುತ್ತದೆ. ಮೊದಲನೆಯದು ಹಲವಾರು ಕ್ರಿಯೆಗಳ ಕರ್ತೃ ಎಂಬಂತೆ-ನಾನು ದೇವಾಲಯವನ್ನು ನಿರ್ಮಿಸಿದೆ, 'ನಾನು ಹೋಗಿ ಆ ಸಂತನನ್ನು ನಾನಾ ರೀತಿಯಲ್ಲಿ ನಿಂದಿಸಿಬಿಟ್ಟೆ' ಇತ್ಯಾದಿ. ಸಹಜವಾಗಿಯೇ ನೀವು ಕರ್ತೃತ್ವದೊಡನೆ ಗುರುತಿಸಿಕೊಂಡಾಗ, ಒಳ್ಳೆಯದು, ಕೆಟ್ಟದು ಎಂಬ ವಿಭಾಗ, ಅದಕ್ಕೆ ಅನುಗುಣವಾದ ಪುಣ್ಯ-ಪಾಪ ಎಂಬ ಪ್ರತಿಫಲಗಳನ್ನು ಅನುಭವಿಸುವುದಕ್ಕಾಗಿ ಮತ್ತೊಂದು ಜನ್ಮವನ್ನು ಪಡೆಯಬೇಕಾಗುತ್ತದೆ. ಹೀಗಾಗಿ ನಿಮ್ಮ ಈ 'ನಾನು' ಎರಡು ಕಾಲುಗಳ ಮೇಲೆ ನಿಂತಿರುತ್ತದೆ-ಕರ್ತೃವಾಗಿ ಒಂದು, ಫಲಾನುಭವಿಯಾಗಿ ಮತ್ತೊಂದು ! ಹೀಗೆ ನೀವು ಜನ್ಮ ಜನ್ಮ ಸಂಕಟಗಳ ಸಾಗರದಲ್ಲಿ ಬಿದ್ದು ಬಿಡುತ್ತೀರಿ. ಇದು ಬಂಧ. 'ನಾನು' ಎಂಬುದು ಇರುವವರೆಗೂ, ಅದು ಬಂಧದಲ್ಲಿಯೇ ಪರಿಣಮಿಸುತ್ತದೆ. 'ನಾನು' ಎಂಬುದು ಇಲ್ಲವಾದಾಗ, ನೀವು ಯಾರೊಬ್ಬರೊಡನೆಯೂ ಗುರುತಿಸಿಕೊಳ್ಳದೆ, ಅಖಂಡ ಪೂರ್ಣಪ್ರಜ್ಞೆಯಾಗಿ ಇದ್ದು ಬಿಡುತ್ತೀರಿ – ಅದೊಂದೇ ಸತ್ಯ. ಅದೇ ಮುಕ್ತಿ ಅದೇ ಮೋಕ್ಷ. ಆದುದರಿಂದ 'ಅಹಂ' ಅನ್ನು ತೊರೆದುಬಿಡಲು, ಎಲ್ಲ ಘಟನೆಗಳಿಗೂ, ಕ್ರಿಯೆಗಳಿಗೂ ಸಾಕ್ಷಿಯಾಗಿ ಮಾತ್ರ ಇರಬೇಕು – ಕರ್ತೃವಾಗಿ ಅಲ್ಲ. ನಾಟಕದಲ್ಲಿ ಪ್ರೇಕ್ಷಕನಾಗಿ ಇರಿ-ನಟನಾಗಿ ಅಲ್ಲ. ಎಲ್ಲ ಕ್ರಿಯೆಗಳೂ ಪೂರ್ವ ನಿಶ್ಚಿತ – ನಿಮ್ಮ ದೇಹವನ್ನು

ಅದು ಬಳಸಿಕೊಳ್ಳುತ್ತದೆ ಅಷ್ಟೆ. ಅದು (ದೇಹ) ತನ್ನ ಮೂಲಕ–ವಿದ್ಯುತ್ತು ಜನರೇಟರಿಂದ ಹರಿಯುವುದಕ್ಕೆ ಸಿದ್ಧವಾದ ಬಲ್ಬು ಮಾತ್ರ. ಆದರೆ ತನ್ನನ್ನೇ ಬೆಳಕು ನೀಡುವವನು (ಕರ್ತೃ) ಎಂದು ಅದು ಭಾವಿಸಿದೆ ಅಷ್ಟೆ. ಹೀಗೆ ತಾನು ಕರ್ತೃ ಎಂಬುದನ್ನೇ ತಿರಸ್ಕರಿಸಿದರೆ, ನಿಮ್ಮ ಕಾರ್ಯಗಳ ಫಲ ನಿಮ್ಮನ್ನು ಬಾಧಿಸುವುದೇ ಇಲ್ಲ. ಆದುದರಿಂದ ಯಾವುದೇ ವಸ್ತುವನ್ನು ಹಿಡಿದುಕೊಳ್ಳುವುದು ಅಥವಾ ಬಿಟ್ಟುಬಿಡುವುದು ನಿಮ್ಮ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ ನಿಮ್ಮ ಕರ್ತೃತ್ವವನ್ನೇ ನೀವು ತೊರೆದುಬಿಟ್ಟಿದ್ದೀರಿ. 'ನಾನು' ಎಂಬುದು ಇಲ್ಲವಾದರೆ, ಮತ್ತೊಂದು ಜನ್ಮದಲ್ಲಿ ಬಹುಮಾನ ಅಥವಾ ಶಿಕ್ಷೆಯನ್ನು ತನ್ನ ಒಳ್ಳೆಯ ಅಥವಾ ಕೆಟ್ಟ ಕಾರ್ಯಗಳ ಫಲ ಇದು ಎಂದು ತರ್ಕಿಸುವ ಯಾವೊಬ್ಬ ವ್ಯಕ್ತಿಯೂ ಇರುವುದೇ ಇಲ್ಲ.

**18. ಮಾಡಿ ಮುಗಿಸಿದ ಯಾವುದೇ ಕರ್ತವ್ಯವಾಗಲೀ ಮಾಡಬೇಕಾದ ಯಾವ ಕರ್ತವ್ಯವಾಗಲೀ ಇಲ್ಲವೇ ಇಲ್ಲ.**

ಕೃತಾ ಕೃತೇಚ ದ್ವಂದ್ವಾನಿ ಕಥಾ ಶಾಂತಾನಿ ಕಸ್ಯ ವಾ ।
ಏವಂ ಜ್ಞಾತ್ವೇಹ ನಿರ್ವೇದಾದ್ಭವ ತ್ಯಾಗಪರೋ ವ್ರತೀ ॥ (IX -1)

ಈಗಾಗಲೇ ಮಾಡಿ ಮುಗಿಸಿದ ಕರ್ತವ್ಯಗಳು, ಅಥವಾ ಇನ್ನೂ ಮಾಡಿ ಮುಗಿಸದೆ ಉಳಿಸಿರುವ ಕರ್ತವ್ಯ ಅಥವಾ ಕಾರ್ಯಗಳು, ಅಂಥ ಕರ್ತವ್ಯಕರ್ಮಗಳಿಂದ ಉಂಟಾಗುವ ಸುಖ ದುಃಖಗಳ ದ್ವಂದ್ವಗಳು ಎಲ್ಲವೂ ಮುಗಿದೇ ಹೋಗಿರುವುದರಿಂದ ಅವುಗಳ ಚಿಂತೆ ಯಾರಿಗಾಗಿ? ಇದನ್ನು ಅರಿತು ನಿರ್ಮೋಹವನ್ನೂ ನಿರ್ಲಿಪ್ತತೆಯನ್ನು ಪ್ರಾಪಂಚಿಕ ವಸ್ತುಗಳ ಬಗ್ಗೆ ಬೆಳಿಸಿಕೋ. ಸಹಜವಾದ ರೀತಿಯಲ್ಲಿ ಅವೆಲ್ಲವನ್ನೂ ತ್ಯಜಿಸಿ ಬಿಡುವುದರ ಬಗೆಗೆ ಕಾಳಜಿ ವಹಿಸು. ಹೀಗೆ ತ್ಯಾಗಮಾಡುವುದಾಗಿ ಆಣೆ ಪ್ರಮಾಣಗಳನ್ನು ಮಾಡಬೇಡ !

ಕೆಲವರು "ನಾನು ಮಾಡಬೇಕಾದ ಕರ್ತವ್ಯಗಳು ಇನ್ನೂ ಉಳಿದಿವೆ. ಮಗಳ ಮದುವೆ ಮಾಡಬೇಕು, ಮಗನ ವಿದ್ಯಾಭ್ಯಾಸ ಮುಗಿಯಬೇಕು" ಎಂದೆಲ್ಲ ಹೇಳುವುದನ್ನು ಕೇಳಿದ್ದೇವೆ. "ಅನಂತರವೇ ನನಗೆ ಬಿಡುವು ಆಗ ನನ್ನೆಲ್ಲ ಕಾಲವನ್ನೂ ಸಾಧನೆಗೇ ಮೀಸಲಾಗಿಡುತ್ತೇನೆ" ಎನ್ನುತ್ತಾರೆ. ನಿಜವಾಗಿ ನಮ್ಮ ಏಕಮಾತ್ರ ಕರ್ತವ್ಯವೆಂದರೆ 'ನಾವು ಯಾರು?" ಎಂಬುದನ್ನು ತಿಳಿಯುವುದು. ಆಗ ಮಾತ್ರ ನಮಗೆ ಉಳಿದವರು



ಯಾರು? ಅವರ ಬಗೆಗೆ ನನ್ನ ಕರ್ತವ್ಯವೇನು? ಎಂಬುದು ತಿಳಿಯುತ್ತದೆ. ನಾವೇ ಕಲ್ಪಿಸಿಕೊಂಡ ಕರ್ತವ್ಯಗಳಲ್ಲಿ ನಾವು ತೊಡಗಿಕೊಂಡುಬಿಟ್ಟಿದ್ದೇವೆ. ಅವುಗಳನ್ನೆಲ್ಲ ನಾವು ಮಾಡಿ ಮುಗಿಸಿದ ಮೇಲೆ, ನಮ್ಮ ಕಲ್ಪನೆ ಎಷ್ಟು ಸಮೃದ್ಧವಾಗಿದೆ ಎಂದರೆ, ನಮ್ಮ ಜೀವಿತದ ಅವಧಿಯಲ್ಲಿ ಮುಗಿಸಲಾಗದಷ್ಟು ಇನ್ನಷ್ಟು ಮತ್ತಷ್ಟು ಕರ್ತವ್ಯಗಳನ್ನು ಸೃಷ್ಟಿ ಮಾಡಿಕೊಳ್ಳುತ್ತೇವೆ. ಈ ಜಗತ್ತಿಗೆ ಸಂಬಂಧಪಟ್ಟ ಕರ್ತವ್ಯಗಳನ್ನು ನಾವು ನಿರ್ದಾಕ್ಷಿಣ್ಯವಾಗಿ ತ್ಯಜಿಸಿಬಿಡಬೇಕು ಹಾಗೂ ನಮ್ಮೆಲ್ಲ ಕಾಲವನ್ನೂ ಭಗವತ್ ಸಾಕ್ಷಾತ್ಕಾರಕ್ಕೆ ಮೀಸಲಿಡಬೇಕು. ಬಹುಮಂದಿ ತಾವು 70 ವರ್ಷ ವಯಸ್ಸಾದ ನಂತರವೇ ಅಧ್ಯಾತ್ಮ ಸಾಧನೆಯನ್ನು ಪ್ರಾರಂಭಿಸಬೇಕು, ಅದಕ್ಕಿಂತ ಮೊದಲು ಅಲ್ಲ ಎಂದು ಭಾವಿಸುತ್ತಾರೆ. ನಾವು 70 ವರ್ಷದವರೆಗೆ ಬದುಕಿರುತ್ತೇವೆ ಎಂಬ ಖಾತರಿಯೇನು? ತಮ್ಮ ತಾರುಣ್ಯದಲ್ಲೇ ಬದುಕನ್ನು ಕೊನೆ ಮಾಡುವ ಅದೆಷ್ಟು ತರುಣರನ್ನು ನಾವು ಕಂಡಿಲ್ಲ? ಎರಡನೆಯದಾಗಿ ಎಪ್ಪತ್ತನೆ ವರ್ಷದ ವೇಳೆಗೆ ನಮ್ಮಲ್ಲಿ ಬಹುಮಂದಿ ಆರ್ಥರೈಟಿಸ್, ಸ್ಪಾಂಡಿಲಿಟೀಸ್, ಹೃದಯದ, ಮೂತ್ರಕೋಶದ ಸಮಸ್ಯೆಗಳು, ಆಸ್ತಮಾ, ಡಯಾಬಿಟಿಸ್ ಮುಂತಾದ ದೈಹಿಕ–ಮಾನಸಿಕ ಕಾಯಿಲೆಗಳಿಗೆ ತುತ್ತಾಗುತ್ತೇವೆ–ಅವು ನಮ್ಮನ್ನು ಎಷ್ಟು ದುರ್ಬಲಗೊಳಿಸುತ್ತವೆ ಎಂದರೆ, ನಾವು ಎಷ್ಟೇ ಇಷ್ಟಪಟ್ಟರೂ ಧ್ಯಾನ ಅಥವಾ ಯಾವುದೇ ಸಾಧನೆ ಮಾಡಲು ನಮಗೆ ಸಾಧ್ಯವೇ ಆಗುವುದಿಲ್ಲ. ರಾಮಕೃಷ್ಣ ಪರಮಹಂಸರು – "ಸಿಂಹಗಳನ್ನು ಅವು ಮರಿಯಾಗಿದ್ದಾಗಲೇ ಹಿಡಿದು ಪಳಗಿಸಬೇಕು" ಎಂದು ಹೇಳುತ್ತಿದ್ದರು. ಪ್ರಹ್ಲಾದನು ರಾಕ್ಷಸ ಮಕ್ಕಳನ್ನು ಕುರಿತು ಬೋಧಿಸುತ್ತಿದ್ದಾಗ ಇದೇ ತತ್ತ್ವವನ್ನು ಅನುಸರಿಸುತ್ತಿದ್ದುದನ್ನು ಶ್ರೀಮದ್ಭಾಗವತವು ಸೂಚಿಸುತ್ತದೆ.

ಸ್ವಾಭಾವಿಕವಾಗಿ ನಾವು ಮೊಮ್ಮಗಳ ಮದುವೆ, ಮೊಮ್ಮಗನ ವಿದ್ಯಾಭ್ಯಾಸ ಇಂಥ ಕಾಲ್ಪನಿಕ ಕರ್ತವ್ಯಗಳಲ್ಲಿ ತೊಡಗಿಕೊಂಡಾಗ, ಹಲವಾರು ಸಮಸ್ಯೆಗಳು, ಎಲ್ಲೋ ಸ್ವಲ್ಪ ಸಂತೋಷ, ಪ್ರಾಪ್ತವಾಗುತ್ತವೆ (ಪರಸ್ಪರ ವಿರುದ್ಧ ಜೋಡಿಗಳು). ಅವುಗಳಿಗೆ ಕೊನೆಯುಂಟೆ? ನಾವು ಎಲ್ಲ ಕರ್ತವ್ಯಗಳನ್ನೂ ಮಾಡಿ ಮುಗಿಸಿದ್ದೇವೆ, ಏನೂ ಬಾಕಿ ಉಳಿದಿಲ್ಲ ಎಂದು ಹೇಳಿಕೊಳ್ಳಲು ಎಷ್ಟು ಮಂದಿಗೆ ಸಾಧ್ಯ? ಆದುದರಿಂದ ಈ ಕೊನೆ ಮೊದಲಿಲ್ಲದ ಮಾಡಿ ಮುಗಿಸಿದ ಕರ್ತವ್ಯಗಳು, ಇನ್ನೂ ಮಾಡಬೇಕಾದಂತಹವು, ಎಂಬ ಪ್ರಾಪಂಚಿಕ ಕಾರ್ಯಗಳ ಬಗ್ಗೆ ಜಿಜ್ಞಾಸೆಯನ್ನು ಬೆಳಿಸಿಕೊಳ್ಳಿ. ಅಂಥ ಎಲ್ಲ ಕರ್ತವ್ಯಗಳನ್ನೂ ತ್ಯಜಿಸಿ

ಆತ್ಮಸಾಕ್ಷಾತ್ಕಾರದ ಮಾರ್ಗದಲ್ಲಿ ಸಂಪೂರ್ಣ ಶ್ರದ್ಧೆಯಿಂದ ನಡೆಯಿರಿ. ಉಳಿದೆಲ್ಲ ಕರ್ತವ್ಯಗಳನ್ನು ಮಾಡಿದ ಮೇಲೂ ನಿಮ್ಮನ್ನು ಮೆಚ್ಚಿಕೊಳ್ಳುವ ಅಥವಾ ನಿಮ್ಮಿಂದ ಉಪಕೃತರಾದವರು ನಿಮಗೆ ಕೃತಜ್ಞರಾಗಿರುವಂತಹವರು ಎಲ್ಲೋ ಕೆಲವು ಮಂದಿ ಮಾತ್ರ. ಇದು ನಿಮ್ಮಲ್ಲಿ ಅಸಂತೋಷವನ್ನೂ, ಮಾನಸಿಕ ಖಿನ್ನತೆಯನ್ನೂ ಉಂಟು ಮಾಡಿಬಿಡುತ್ತದೆ. ಅವುಗಳಿಂದ ನೀವು ಪಾರಾಗುವುದು ಸಾಧ್ಯವೇ ಆಗದು.

**19. ಆಸೆಯೇ ಬಂಧ. ಪ್ರಾಪಂಚಿಕ ವಿಷಯಗಳಲ್ಲಿ ನಿರ್ಲಿಪ್ತತೆಯಿಂದಲೇ ಸಂತೋಷ.**

ತೃಷ್ಣಾ ಮಾತ್ರಾತ್ಮಕೋ ಬಂಧಃ ತನ್ನಾಶೋ ಮೋಕ್ಷ ಉಚ್ಯತೇ ।
ಭವಾಸಂಸಕ್ತಿ ಮಾತ್ರೇಣ ಪ್ರಾಪ್ತಿ ತುಷ್ಟಿರ್ಮುಹುರ್ಮುಹುಃ ॥ (X -4)

ನಮ್ಮೆಲ್ಲ ಬಂಧಗಳೂ ಆಸೆಗಳಿಂದಲೇ ಉಂಟಾದವು. ಅವುಗಳ ನಾಶವೇ ಮೋಕ್ಷ ಎಂದು ಕರೆಯಲ್ಪಡುತ್ತದೆ.ಪ್ರಾಪಂಚಿಕ ವಸ್ತುಗಳ ಬಗ್ಗೆ ಅನಾಸಕ್ತಿಯನ್ನು ಬೆಳೆಸಿಕೊಳ್ಳುವುದರಿಂದ ಮಾತ್ರ ನಮಗೆ ಸಂತೋಷ ದೊರಕುತ್ತದೆ – ಹಾಗೆಯೇ ಸಾಧನೆಯ ಭಾವವೂ ಉಂಟಾಗುತ್ತದೆ.

ಬೌದ್ಧ ಧರ್ಮದ ಒಂದು ಮೂಲಭೂತ ಸಿದ್ಧಾಂತವೇ ಆಸೆಯೇ ದುಃಖಕ್ಕೆ ಮೂಲ ಎಂಬುದು. ಎಲ್ಲಾ ಪ್ರಾಪಂಚಿಕ ವಸ್ತು ವಿಷಯಗಳ ಬಗೆಗಿನ ಆಸೆಯನ್ನು ತೊರೆದ ಕ್ಷಣದಲ್ಲೇ ಮುಕ್ತಿ ಅಥವಾ ಮೋಕ್ಷ ಸಿದ್ಧಿಸುತ್ತದೆ. ಇದು ಮತ್ತೊಂದು ಮೋಕ್ಷ ಕ್ಯಾಪ್ಸೂಲ್ ಆಗಿದೆ.

ಬಾಲ ಭಕ್ತನಾದ ಪ್ರಹ್ಲಾದನನ್ನು ಭಗವಂತನು ಏನಾದರೂ ವರವನ್ನು ಕೇಳುವಂತೆ ಒತ್ತಾಯಿಸಿದಾಗ, ಆ ಬಾಲಕನು ಯಾವುದೇ ವಸ್ತುವಿನ ಬಯಕೆ ತನ್ನ ಹೃದಯದಲ್ಲಿ ಎಂದೂ ಉದ್ಭವವಾಗದಂತೆ ವರವನ್ನು ನೀಡು ಎಂದು ಹೇಳಿದನೆಂದು ಶ್ರೀಮದ್ ಭಾಗವತದಲ್ಲಿ ಹೇಳಲಾಗಿದೆ. ಅದೇ ಗ್ರಂಥದಲ್ಲಿ ಮತ್ತೊಂದು ಕಥೆಯೂ ನಿರೂಪಿತವಾಗಿದೆ. ಒಂದು ಹದ್ದು ಮಾಂಸದ ತುಂಡನ್ನು ಕಚ್ಚಿಕೊಂಡು ಆಕಾಶದಲ್ಲಿ ಹಾರುತ್ತಿತ್ತು. ಹಲವಾರು ಗಿಡುಗಗಳು ಅದನ್ನು ಅಟ್ಟಿಸಿಕೊಂಡು ಹಿಂಬಾಲಿಸುತ್ತಿದ್ದವು. ಹದ್ದು ಆ ಮಾಂಸದ ತುಂಡನ್ನು ಕೆಳಗೆ ಬಿಸುಟುಬಿಟ್ಟ ಕೂಡಲೇ ಯಾವ ಗಿಡುಗವೂ ಅದನ್ನು ಹಿಂಬಾಲಿಸಲಿಲ್ಲ, ಹದ್ದು ಪ್ರಾಣ ಭಯದಿಂದ ಪಾರಾಯಿತು. ನೀವು



ನಿಮ್ಮೆಲ್ಲ ಬಯಕೆಗಳನ್ನೂ ದೂರಮಾಡಿದ ಕ್ಷಣದಲ್ಲಿಯೇ ಅಧಿಕಾರ, ಅಂತಸ್ತು, ಐಶ್ವರ್ಯ ಇತ್ಯಾದಿಗಳ ಬಗೆಗೆ ಅನಾಸಕ್ತಿಯನ್ನು ಬೆಳೆಸಿಕೊಳ್ಳುತ್ತಿದ್ದಂತೆಯೇ ನಿಮ್ಮ ಆತಂಕ, ಭಯ, ಉದ್ವೇಗಗಳೆಲ್ಲವೂ ದೂರವಾಗಿಬಿಡುತ್ತವೆ. ಯಾವುದೂ ನಿಮ್ಮನ್ನು ಬಂಧಿಸಲಾರದು. ನೀವು ಸ್ವತಂತ್ರರು. ಆ ವಸ್ತುಗಳಿಗೆ ನೀವು ಹೆಚ್ಚು ಹೆಚ್ಚು ಜೋತುಬಿದ್ದಷ್ಟೂ, ದುಃಖ ದುಮ್ಮಾನಗಳೂ ಹೆಚ್ಚುತ್ತವೆ. ಮನಃ ಶಾಂತಿಯೇ ಇಲ್ಲವಾಗುತ್ತದೆ.

ವಸ್ತು ವಿಷಯಗಳ ಬಗ್ಗೆ ನಮ್ಮ ವ್ಯಾಮೋಹದಿಂದ ಉಂಟಾಗುವ ಅನರ್ಥಗಳ ಸರಮಾಲೆಯನ್ನು ಶ್ರೀಮದ್ ಭಗವದ್ಗೀತೆಯಲ್ಲಿ ವಿಸ್ತಾರವಾಗಿ ವಿವರಿಸಲಾಗಿದೆ. "ವಿಷಯ ವಸ್ತುಗಳೊಡನೆ ಸತತ ಸಂಪರ್ಕದಿಂದ, ಇನ್ನಷ್ಟು ವಸ್ತುಗಳನ್ನು ಹೊಂದುವ ಅಥವಾ ಹೊಂದಿದ ವಸ್ತುವನ್ನು ಹಾಗೆಯೇ ಉಳಿಸಿಕೊಳ್ಳುವ ಆಸೆ ಉಂಟಾಗುತ್ತದೆ. ಅವುಗಳನ್ನು ಪಡೆಯುವ ಯತ್ನದಲ್ಲಿ ಕ್ರೋಧ ಉಂಟಾಗುತ್ತದೆ. ಕ್ರೋಧದಿಂದ ಸಮ್ಮೋಹ, ಸಮ್ಮೋಹದಿಂದ ಮತಿ ಭ್ರಮಣೆ. ಏನು ಮಾಡಬೇಕು, ಏನು ಮಾಡಬಾರದು ಎಂಬ ತೊಳಲಾಟ, ಇದು ಬುದ್ಧಿನಾಶದಲ್ಲಿ–ಪೂರ್ಣ ನಾಶದಲ್ಲಿ ಮುಕ್ತಾಯವಾಗುತ್ತದೆ."

**20. ಎಲ್ಲ ಚಟುವಟಿಕೆಯನ್ನೂ ನಿಲ್ಲಿಸಿಬಿಡು**

ಕೃತಂ ನ ಕತಿ ಜನ್ಮಾನಿ ಕಾಯೇನ ಮನಸಾ ಗಿರಾ ।
ದುಃಖಮಾಯಾಸದಂ ಕರ್ಮ ತದದ್ಯಾಪ್ಯುಪರಮ್ಯತಾಂ ॥ (X 8)

ಅದೆಷ್ಟು ಜನ್ಮಗಳಲ್ಲಿ ದೇಹ, ಮನಸ್ಸು, ಮಾತುಗಳಿಂದ ಅದೆಷ್ಟೋ ಶ್ರಮ, ಆಯಾಸದುಃಖಗಳಿಂದ ಕೂಡಿದ ಕರ್ಮಗಳನ್ನು ಮಾಡುತ್ತಲೇ ಬಂದಿದ್ದೀಯೆ! ಈಗಾಲಾದರೂ ಆ ಕಾರ್ಯಗಳೆಲ್ಲವನ್ನೂ ಬಿಟ್ಟುಬಿಡು.

ಜನ್ಮ ಜನ್ಮಗಳಲ್ಲಿ ದೈಹಿಕ ಶ್ರಮ, ಮಾನಸಿಕ ಯತ್ನ, ಮಾತಿನ ಆಯಾಸವೂ ಸೇರಿದಂತೆ ಹಲವಾರು ಕಾರ್ಯಗಳಲ್ಲಿ ತೊಡಗಿಕೊಂಡಿದ್ದೀರಿ. ಭಾಷಣಗಳು, ಹಲವಾರು ಮಂದಿಯೊಡನೆ ಮಾತುಕತೆ, ದೂರವಾಣಿ ಮೂಲಕ ಅಥವಾ ಮುಖತಃ ಅನೇಕ ಬಾರಿ ಈ ಕೆಲಸಗಳನ್ನು ಮಾಡುವಾಗ, ಅದೆಷ್ಟೋ ದುಃಖಗಳನ್ನು ಸಹಿಸಿದ್ದೀರಿ, ಸಂಕಟಗಳನ್ನು ಅನುಭವಿಸಿದ್ದೀರಿ, ಕೈಕೆಳಗಿನವರ ಅಸಹಕಾರ, ಅಧಿಕಾರಿಗಳ ಬಯ್ಗುಳ,

ಅನಿರೀಕ್ಷಿತ ತಾಂತ್ರಿಕ ತೊಡಕುಗಳು, ಇತ್ಯಾದಿ. ಇಷ್ಟಾದ ಮೇಲೂ ಯಾವ ತೃಪ್ತಿ ಅಥವಾ ಶಾಶ್ವತ ಸುಖ ನಿಮಗೆ ಸಿಗಲೇ ಇಲ್ಲ. ಆದರೂ ಅದೇ ಕೆಲಸಗಳನ್ನು ಮುಂದುವರೆಸುತ್ತೀರಿ. ಈ ಎಲ್ಲ ಕಾರ್ಯಗಳೂ ನಿಮಗೆ ಸುಖ – ಸಂತೋಷವನ್ನು ಕೊಡಲಿಲ್ಲ. ಎಂದಾದ ಮೇಲೆ, ಎಲ್ಲ ಕಾರ್ಯಗಳನ್ನೂ ಏಕಾದರೂ ನಿಲ್ಲಿಸಿ ಬಿಡಬಾರದು? ಎಲ್ಲ ಸಂದರ್ಭಗಳಿಗೂ ಕೇವಲ ಸಾಕ್ಷಿಯಾಗಿ ಏಕೆ ಇರಬಾರದು? ಏನನ್ನೋ ಪಡೆಯುವ ಆಸೆಯಿಂದ ಮಾಡುವ ಕಾರ್ಯಗಳೇ ನಿಮ್ಮನ್ನು ದುಃಖ–ಸಂಕಟಕ್ಕೆ ಈಡು ಮಾಡುತ್ತವೆ. ಇಷ್ಟೇ ಅಲ್ಲ, ಅದು ಒಳ್ಳೆಯ ಅಥವಾ ಕೆಟ್ಟ ಕಾರ್ಯಗಳ ಫಲವಾದ ಬಹುಮಾನ – ಶಿಕ್ಷೆಗಳ ಅನುಭವಕ್ಕಾಗಿ ಹಲವಾರು ಜನ್ಮಗಳಿಗೆ ಕಾರಣವಾಗುತ್ತದೆ. ಕಾರ್ಯಗಳನ್ನು ನಿಲ್ಲಿಸುವುದರಿಂದ ಜನ್ಮಗಳಿಗೆ ನಿಲುಗಡೆ. ಇದೇ ಮುಕ್ತಿ ಅಥವಾ ಮೋಕ್ಷ ಎಂದು ಕರೆಯಲ್ಪಡುತ್ತದೆ. ಇದನ್ನೂ ಶೀಘ್ರ ಪರಿಣಾಮಕಾರಿಯಾದ ಮೋಕ್ಷ ಕ್ಯಾಪ್ಸೂಲ್‌ಗಳಲ್ಲಿ ಒಂದು ಎನ್ನಬಹುದಾಗಿದೆ.

ನೀವು ಆಸೆಯನ್ನು ಅಂತ್ಯಗೊಳಿಸದಿದ್ದರೆ, ಕಾರ್ಯಗಳನ್ನು ನಿಲ್ಲಿಸಲಾಗುವುದಿಲ್ಲ. ವಸ್ತು ವಿಷಯಗಳ ವ್ಯಾಮೋಹದಿಂದ ಬಿಡುಗಡೆಯಾಗದಿದ್ದರೆ ಆಸೆಗಳನ್ನು ನಿಲ್ಲಿಸಲಾಗುವುದಿಲ್ಲ. ಪ್ರೀತಿ, ದ್ವೇಷ, ಅಸೂಯೆ, ಭಯ ಇತ್ಯಾದಿಗಳೊಡನೆ ಸಂಬಂಧವಿರಿಸಿಕೊಂಡ ವಸ್ತುಗಳನ್ನೇ ಮನಸ್ಸು ಮತ್ತೆ ಚಿಂತಿಸುತ್ತಿರುತ್ತದೆ. ಅನಾಸಕ್ತಿಯನ್ನು ಬೆಳೆಸಿಕೊಂಡಾಗ, ಆಲೋಚನೆಗಳು ಇಲ್ಲವಾಗುತ್ತದೆ. ಆಲೋಚನೆಯೆ ಕ್ರಿಯೆಯಲ್ಲಿ ಪರ್ಯವಸಾನ ಗೊಳ್ಳುವಂತಹುದು. ಎಲ್ಲ ಆಲೋಚನೆಯನ್ನೂ ನಿಲ್ಲಿಸಿ, ಕಾರ್ಯಗಳು ನಿಲ್ಲುತ್ತವೆ. "ಶಾಂತವಾಗಿದ್ದು ಬಿಡಿ, ನೀವೇ ದೇವರು" ಎಂದು ಅರಿಯಿರಿ.

ವಿಶ್ಲೇಶಿಸಿ ನೋಡಿದಾಗ, ಬಹುಮಟ್ಟಿನ ವಿಧಾನಗಳು ಅದೇ ವಿಷಯಕ್ಕೆ ಬಂದು ನಿಲ್ಲುತ್ತವೆ. "ಮನಸ್ಸನ್ನು ನಿಲ್ಲಿಸಿ – ದೇವರನ್ನು ಸಮೀಪಿಸಿ." (ಯೋಗ : ಚಿತ್ತ ವೃತ್ತಿ ನಿರೋಧ:) ಒಂದೇ ಅಂಶವೆಂದರೆ ಬಗೆಬಗೆಯ ಸಾಧನೆಗಳಲ್ಲಿ ಹಲವಾರು ಹಂತಗಳಲ್ಲಿ, ಆಲೋಚನೆಯ ಹಂತದಲ್ಲೇ ಬಂದು ನಿಲ್ಲುತ್ತೇವೆ. ಅಸಂತೃಪ್ತರಾಗುತ್ತೇವೆ – ಕ್ರಿಯೆ, ಆಸೆ, ಕರ್ತೃತ್ವ, ಮಾನಸಿಕ ವೃತ್ತಿ ಇತ್ಯಾದಿ.



## 21. ಜೀವನ್ಮುಕ್ತನು ಏನಾದರೂ ಕಾರ್ಯವನ್ನು ಮಾಡಿದಾಗಲೂ ಅದರಿಂದ ದೂಷಿತಗೊಳ್ಳುವುದಿಲ್ಲ.

ಸುಖದುಃಖೇ ಜನ್ಮ ಮೃತ್ಯು ದೈವಾದೇವೇತಿ ನಿಶ್ಚಯೀ ।
ಸಾಧ್ಯಾದರ್ಶೀ ನಿರಾಯಾಸಃ ಕುರ್ವನ್ನಪಿ ನ ಲಿಪ್ಯತೇ ॥
(XI-4)

ಸುಖ – ದುಃಖ, ಹುಟ್ಟು –ಸಾವು, ಇಂತಹ ದ್ವಂದ್ವಗಳೆಲ್ಲ ದೈವದ ಸಂಯೋಜನೆ ಎಂಬ ದೃಢ ನಿಶ್ಚಯವನ್ನು ಹೊಂದಿದವನು, ಮುಟ್ಟ ಬೇಕಾದ ಯಾವ ಗುರಿಯೂ ಇಲ್ಲ. ಒಂದು ವೇಳೆ ಅವನು ಯಾವುದೇ ಕಾರ್ಯವನ್ನು ಮಾಡಿದರೂ, ಅದು ಶ್ರಮವಿಲ್ಲದೆ ಆಗಿಬಿಡುತ್ತದೆ, ಅವನು ಅದರಿಂದ ದೂಷಿತನಾಗುವುದಿಲ್ಲ.

ಒಬ್ಬನ ಜೀವನದಲ್ಲಿ ಅತಿ ಮುಖ್ಯವಾದ ಘಟನೆಗಳೆಂದರೆ ಹುಟ್ಟು ಮತ್ತು ಸಾವು. ಹಾಗೆಯೇ ಸುಖ – ದುಃಖ. ನಾವು ಔಷಧಗಳು, ಮಹಾ ಮೃತ್ಯುಂಜಯ ಹವನ ಮುಂತಾದ ನಿರ್ದಿಷ್ಟ ಕಲ್ಪಗಳನ್ನು ಮಾಡುವುದು, ಇತ್ಯಾದಿಗಳಿಂದ ಅವುಗಳನ್ನು ನಿವಾರಿಸಿಕೊಳ್ಳಲು ಯತ್ನಿಸುತ್ತೇವೆ. ಹಾಗೆಯೇ ಬಡ ಅಥವಾ ಶ್ರೀಮಂತ ಕುಟುಂಬ, ಗ್ರಾಮ ಅಥವಾ ನಗರ ಹೀಗೆ ನಾವು ಎಲ್ಲಿ ಜನ್ಮತಾಳುತ್ತೇವೆ ಎಂಬುದೂ ನಮ್ಮ ಆಯ್ಕೆಯಲಿಲ್ಲ. ಅದು ದೈವದಿಂದ ಪೂರ್ವನಿರ್ಧಾರಿತ. ನಮ್ಮ ಬದುಕಿನಲ್ಲಿ ಎದುರಾಗುವ ಹಲವಾರು ಸಂಕಷ್ಟಗಳ ಪರಿಣಾಮವಾಗಿ ದುಃಖ – ವ್ಯಥೆ, ಉದಾಹರಣೆಗೆ ಪತ್ನಿ ಅಥವಾ ಮಕ್ಕಳ ಸಾವು ಹಾಗೆಯೇ ತಾತ್ಕಾಲಿಕ ಸಂತೋಷವನ್ನುಂಟುಮಾಡುವ ಹಲವಾರು ಸಂಗತಿಗಳು – ಉದಾಹರಣೆಗೆ ಮದುವೆ, ಬಡ್ತಿ, ಲಾಟರಿ, ಪುತ್ರ ಜನನ, ಇತ್ಯಾದಿಗಳೂ ನಮ್ಮ ಕೈಯಲ್ಲಿ ಇಲ್ಲವೇ ಇಲ್ಲ. ಅವೆಲ್ಲವೂ ದೇವರಿಂದಲೇ ಯೋಜಿಸಲ್ಪಟ್ಟಿವೆ. ಈ ವಿಷಯಗಳಲ್ಲಿ ನಮ್ಮೆಲ್ಲ ಪ್ರಯತ್ನಗಳೂ, ಸಲಹೆ – ಯೋಜನೆಗಳೂ ವಿಫಲವಾಗುತ್ತವೆ, ನಾವು ನಿರೀಕ್ಷೆಯೇ ಮಾಡಿರದ ಘಟನೆಗಳು ಇದ್ದಕ್ಕಿದ್ದಂತೆ ಸಂಭವಿಸಿಬಿಡುತ್ತವೆ. ಆದುಧರಿಂದ ನಮ್ಮೆಲ್ಲ ಚಟುವಟಿಕೆಗಳೂ, ಘಟನೆಗಳೂ ಪ್ರಭುವಿನಿಂದ ನಿಯಂತ್ರಿಸಲ್ಪಟ್ಟಿವೆ. ನಮ್ಮ ಕ್ರಿಯೆಗಳು ಏನನ್ನೋ ಪಡೆಯುವುದರ ಕಡೆಗೆ ಧಾವಿಸುತ್ತವೆ, ಉದಾಹರಣೆಗೆ ಉದ್ಯೋಗದಲ್ಲಿ ಬಡ್ತಿ, ವರ್ಗಾವಣೆ, ಪುತ್ರ ಸಂತಾನ, ಅಪಾರವಾದ ಧನ ಸಂಪಾದನೆ ಇತ್ಯಾದಿ. ಈ ಎಲ್ಲವೂ ಭಗವಂತನಿಂದ

ನಿಯಂತ್ರಿಸಲ್ಪಟ್ಟಿವೆ ಎಂಬುದು ನಮಗೆ ನಿಶ್ಚಯವಾದರೆ, ಯಾವುದೇ ಕಾರ್ಯದಿಂದ ಏನೂ ಪ್ರಯೋಜನವಿಲ್ಲ, ಏಕೆಂದರೆ ಪ್ರಾಪಂಚಿಕ ಜೀವನದ ಯಾವ ಒಂದು ಗುರಿಯೂ ನಮ್ಮ ನಿಯಂತ್ರಣದಲ್ಲಿಲ್ಲ.

ಯಾವುದಾದರೂ ಗುರಿಯನ್ನು ಹೊಂದುವ ಅಪೇಕ್ಷೆ ನಮಗಿದ್ದುದೇ ಆದರೆ, ಸಹಜವಾಗಿಯೇ ಕಾಳಜಿ, ಆತಂಕ, ಭಯ ಪೈಪೋಟಿ, ಎಲ್ಲವೂ ನಮ್ಮ ಚಟುವಟಿಕೆಗಳಲ್ಲಿ ಉಂಟಾಗುತ್ತವೆ. ಯಾವಾಗ ನಮಗೆ ವೈಯಕ್ತಿಕ ಆಸಕ್ತಿ ಇಲ್ಲವೋ ನಾವು ಹೊಂದಬೇಕಾದ, ನಮ್ಮ ಗುರಿಯು ನಮ್ಮ ಶಕ್ತಿ – ಸಾಮರ್ಥ್ಯದ ಪರಿಧಿಯಲ್ಲಿ ಇಲ್ಲವೋ ಆಗ ನಾವು ಕೈಗೊಳ್ಳುವ ಯಾವುದೇ ಕಾರ್ಯಗಳು ನಿರಾಯಾಸವಾಗಿ ನಡೆಯುತ್ತವೆ. ಯಾವುದಾದರೂ ಒತ್ತಡದಿಂದ ಅಥವಾ ಆಕಸ್ಮಿಕವಾಗಿ ಕೈಗೊಳ್ಳುವ ಕೆಲಸಗಳು ಮಾಡಲ್ಪಟ್ಟರೂ ಅಂಥ ಕೆಲಸಗಳನ್ನು ಮಾಡುವವನ್ನ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ.

ಯಾವುದೂ ನಮ್ಮ ಕೈಯಲ್ಲಿಲ್ಲ, ಎಲ್ಲ ಘಟನೆಗಳೂ, ಅಭಿನಯಿಸಲ್ಪಡುತ್ತಿರುವ ನಾಟಕದ ನಿರ್ದೇಶಕನಿಂದ ನಿಯಂತ್ರಿಸಲ್ಪಡುತ್ತಿವೆ ಎಂಬುದು ನಮಗೆ ಖಚಿತವಾದರೆ, ನಾವು ಕೇವಲ ಸಾಕ್ಷಿ ಮಾತ್ರವಾಗುತ್ತೇವೆ. ಜೀವನ ನಾಟಕದಲ್ಲಿ ನಾವು ಚಟುವಟಿಕೆಯಿಂದ ಭಾಗವಹಿಸುವುದೇ ಇಲ್ಲ. ನಮ್ಮ ಕ್ರಿಯೆಗಳಿಂದ ಉಂಟಾಗುವ (ಹೊರ ಹೊಮ್ಮುವ) ಸುಖ–ದುಃಖಗಳು ನಮ್ಮ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ ಯಾವ ಗುರತನ್ನೂ ಮೂಡಿಸುವುದಿಲ್ಲ. ಇದು ಸಂಪೂರ್ಣ ಶರಣಾಗತಿ. ಸುಖ – ದುಃಖ ಮತ್ತು ಘಟನೆಗಳೆಲ್ಲವನ್ನೂ ಅವು ಬಂದಹಾಗೇ ಪೂರ್ಣವಾಗಿ ಸ್ವೀಕರಿಸುತ್ತೇವೆ. ಕರ್ತೃತ್ವ ಎಂಬುದೇ ಅಲ್ಲಿ ಇಲ್ಲ. "ನಾನು ಇದನ್ನು ಮಾಡಿದೆ. ಅದರಿಂದ ದುಃಖ ಪಡುತ್ತಿದ್ದೇನೆ" ಮುಂತಾದ ಹಕ್ಕಿನ ಭಾವವನ್ನು ತಾಳುವ "ಅಹಂ" ಎಂಬುದೂ ಇಲ್ಲ.

ಇದೇ ಮುಕ್ತಿ ಅಥವಾ ಮೋಕ್ಷ. ಭಗವಂತನಲ್ಲಿ ಪರಿಪೂರ್ಣ ನಂಬಿಕೆ – ಅವನೇ ನಿಯಂತ್ರಕ ಎಂಬ ವಿಶ್ವಾಸ ಅಗತ್ಯವಾದ ಮತ್ತೊಂದು ಮೋಕ್ಷ ಕ್ಯಾಪ್ಸೂಲ್ ಇದು.



## 22 ನಾನು ದೇಹವಲ್ಲ – ಪ್ರಜ್ಞೆಯೇ ನಾನು (ಅರಿವು)

ನಾಹಂ ದೇಹೋ ನ ಮೇ ದೇಹೋ ಬೋಧೋಽಹಮಿತಿ ನಿಶ್ಚಯೀ ।
ಕೈವಲ್ಯಮಿವ ಸಂಪ್ರಾಪ್ತೋ ನ ಸ್ಮರತ್ಯಕೃತಂ ಕೃತಂ ॥ (XI-6)

"ನಾನು ದೇಹವಲ್ಲ. ನನಗೆ ದೇಹವಿಲ್ಲ. ನಾನು ಪರಿಶುದ್ಧ ಪ್ರಜ್ಞೆ" ಇದು ಯಾರಿಗೆ ನಿಶ್ಚಯವಾಗಿದೆಯೋ ಅವನನ್ನು ಮುಕ್ತನೆಂದೇ ತಿಳಿಯಬಹುದಾಗಿದೆ. ಅವನು "ಯಾವುದನ್ನು ಮಾಡಿಯಾಗಿದೆಯೋ" "ಯಾವುದು ಈ ವರೆಗೂ ಮಾಡಲ್ಪಟ್ಟಿಲ್ಲವೋ" ಅದರ ಬಗ್ಗೆ ಯೋಚಿಸುವುದಿಲ್ಲ.

ಒಂದು ಪುಸ್ತಕವನ್ನು ನೋಡಲು ನಿಮಗೆ ಸಾಧ್ಯವಾದರೆ, ನೀವು ಪುಸ್ತಕವಂತೂ ಅಲ್ಲ. ಪುಸ್ತಕವು ನಿಮ್ಮಿಂದ ನೋಟಲ್ಪಟ್ಟ ಒಂದು ವಸ್ತು. ಹಾಗೆಯೇ ನಿಮ್ಮದೇ ದೇಹವನ್ನು ನೀವು ನೋಡಲು ಸಾಧ್ಯವೆಂದರೆ (ಹಾಗೆಯೇ ಇತರರ ದೇಹಗಳನ್ನು) ನೀವು ದೇಹವಾಗಿರಲು ಸಾಧ್ಯವಿಲ್ಲ. ಆದುದರಿಂದ ದೇಹದೊಡನೆಯೇ ನಿಮ್ಮನ್ನು ಗುರುತಿಸಿಕೊಳ್ಳುವುದು ಅತಾರ್ಕಿಕ ಹಾಗೂ ಶುದ್ಧ ತಪ್ಪು. ದೇಹವು ನಿಮ್ಮಿಂದ ನಿರ್ಮಾಣ ವಾದುದಲ್ಲ ಅಥವಾ ಅದನ್ನು ಮಾರುಕಟ್ಟೆಯಿಂದ ಕೊಂಡು ತಂದದ್ದಲ್ಲ. ಆದುದರಿಂದ ಅದನ್ನು ನೀವು ಹೊಂದಿಯೇ ಇಲ್ಲ. ನೀವು ಎಲ್ಲ ದೇಹಗಳನ್ನೂ ನೋಡುತ್ತಿದ್ದೀರಿ, ಹಾಗೆಯೇ ಇತರ ವಸ್ತುಗಳನ್ನು. ನೀವು ಪರಿಶುದ್ಧ ಪ್ರಜ್ಞೆಯೇ ಆಗಿದ್ದೀರಿ. ಅದು ಯಾವ ವಸ್ತುವಿನಿಂದಲೂ ಅಂಟಿಕೊಳ್ಳುವಂತಹುದಲ್ಲ. ಉನ್ನತ ಸ್ತರದಲ್ಲಿ ನೀವು ಮಾತ್ರ ಪ್ರಜ್ಞೆಯಾಗಿ ಇದ್ದೀರಿ. ಪ್ರಪಂಚವಾಗಲೀ ದೇಹಗಳಾಗಲೀ ವಸ್ತುಗಳಾಗಲೀ ಇಲ್ಲವೇ ಇಲ್ಲ. ನೀವು ಪರಿಶುದ್ಧ ಪ್ರಜ್ಞೆ. ಈ ಪರಮ ಸತ್ಯದ ಬಗ್ಗೆ ನೀವು ಧೃಢ ನಿಶ್ಚಯ ಉಳ್ಳವರಾದ ಕ್ಷಣದಲ್ಲಿ, ನಿಮ್ಮಿಂದ ಬೇರೆಯಾದದ್ದು ಏನೂ ಇಲ್ಲ – ಕಾಲವಿಲ್ಲ ದೇಶವಿಲ್ಲ. ಯಾವ ವಸ್ತುವೂ ನಿಮ್ಮನ್ನು ಕಟ್ಟಿ ಹಾಕಲಾರದು. ಸಂಪೂರ್ಣವಾಗಿ ಮುಕ್ತರಂತೆಯೇ ನೀವು ಇದ್ದೀರಿ. ಆ ಸ್ಥಿತಿಯಲ್ಲಿ ಯಾವ ಕರ್ತವ್ಯ ಅಥವಾ ಚಟುವಟಿಕೆಯೂ ನಿಮಗಿಲ್ಲ. "ಇಷ್ಟು ಕರ್ತವ್ಯವನ್ನು ಮಾಡಿಯಾಯಿತು, ಇನ್ನೂ ಇಷ್ಟು ಮಾಡಲಿಕ್ಕೆ ಉಂಟು" ಎಂಬ ಆಲೋಚನೆಗೆ ಆಸ್ಪದವೇ ಇಲ್ಲ.

**23. ಜೀವನ್ಮುಕ್ತನು ದೇಹದಿಂದ ತನ್ನನ್ನು ಬೇರ್ಪಡಿಸಿಕೊಳ್ಳುತ್ತಾನೆ, ಹಾಗೆಯೇ ಮಾತು, ಆಲೋಚನೆಗಳಿಂದ. ಅವನು ಹೇಗೆ ಇದ್ದಾನೋ ಹಾಗೆಯೇ ಇದ್ದುಬಿಡುತ್ತಾನೆ.**

ಕಾಯ ಕೃತ್ಯಾ ಸಹಃ ಪೂರ್ವಂ ತತೋ ವಾಗ್ವಿಸ್ತರಾ ಸಹಃ ।
ಅಥ ಚಿಂತಾಸಹಸ್ತಸ್ಮಾದೇವ ಮೇವಾಹಮಾಸ್ಥಿತಃ ॥ (XII-I)

ಈ ಹನ್ನೆರಡನೇ ಅಧ್ಯಾಯ ಪೂರ್ತಿಯಾಗಿ, ಜನಕ ಮಹಾರಾಜನು ಜೀವನ್ಮುಕ್ತನಾಗಿ ತನ್ನದೇ ಅನುಭವವನ್ನು ವಿವರಿಸುತ್ತಾನೆ. ಒಬ್ಬನು ಜ್ಞಾನಿಯಾದನೆಂದರೆ ಗುರು ಹಾಗೂ ಶಿಷ್ಯನ ಅನುಭವದಲ್ಲಿ ಯಾವ ತಾರತಮ್ಯವೂ ಇರುವುದಿಲ್ಲ. ಅಷ್ಟಾವಕ್ರರ ಬೋಧನೆ ಹಾಗೂ ಜನಕ ಮಹಾರಾಜನ ಅನುಭವ ಎರಡೂ ಪರಸ್ಪರ ಪೂರಕವಾಗಿಯೇ ಇದೆ. ಈ ಶ್ಲೋಕಗಳಲ್ಲಿ ಮುಕ್ತನ ಸಾಧನೆಯ ಹಲವಾರು ಹಂತಗಳನ್ನು ವಿವರಿಸಲಾಗಿದೆ.

ಪ್ರತಿಯೊಬ್ಬ ಪ್ರಾಪಂಚಿಕ ವ್ಯಕ್ತಿ ಹಾಗೂ ಸಾಧನೆ ಮಾಡುತ್ತಿರುವ ಸಾಧಕನೂ ದೇಹ, ಮಾತು, ಮನಸ್ಸುಗಳ ಮೂಲಕ ಮಾಡುವ ಯಾವುದಾದರೂ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತಾನೆ (ದೈಹಿಕ, ವಾಚಿಕ, ಮಾನಸಿಕ) ಅಧ್ಯಾತ್ಮ ಸಾಧಕನು ವಿಸ್ತಾರವಾದ ಪೂಜೆ, ದೇವಾಲಯಗಳ ಸಂದರ್ಶನ, ಸತ್ಸಂಗಗಳಲ್ಲಿ ಸಮಾವೇಶ ಇತ್ಯಾದಿ ದೈಹಿಕ ಕಾರ್ಯಗಳನ್ನು ಮಾಡುತ್ತಿರುತ್ತಾನೆ. ಜೊತೆ ಜೊತೆಗೆ ಭಕ್ತಿಗೀತೆಗಳನ್ನು ಹಾಡುತ್ತಾನೆ (ಭಜನೆ–ಕೀರ್ತನೆ), ಶಾಸ್ತ್ರಗಳನ್ನು ವ್ಯಾಸಂಗ ಮಾಡುತ್ತಾನೆ, ಉಪನ್ಯಾಸಗಳನ್ನು ನೀಡುತ್ತಾನೆ, ಬೇರೆಯವರ ಸಂದೇಹಗಳನ್ನು ಪರಿಹರಿಸುತ್ತಾನೆ ಇತ್ಯಾದಿ. ಹೀಗೆ ಮಾತು, ನಡಿಗೆ, ಆಹಾರ ಸೇವನೆ, ಜಪ, ಪ್ರಾರ್ಥನೆ ಇತ್ಯಾದಿಗಳ ಮೂಲಕ ದೇಹ, ನಾಲಗೆ (ಮಾತಿನಕರಣ) ಅಲ್ಲದೇ ಇದನ್ನು ಮಾಡಬೇಕು, ಇದನ್ನು ಮಾಡಬಾರದು ಎಂದು ಮಾನಸಿಕವಾಗಿ ತೀರ್ಮಾನಿಸುತ್ತಾನೆ. ಮೌನಧ್ಯಾನವನ್ನೂ ಮನಸ್ಸು ಉಪಯೋಗಿಸಿಯೇ ಮಾಡುತ್ತಾನೆ. ಪ್ರಪಂಚದಿಂದ ಒಳಸರಿಯುವ ಈ ಕ್ರಮದಲ್ಲಿ, ಜೀವನ್ಮುಕ್ತನು ಮೊದಲಿಗೆ ದೈಹಿಕ ಚಟುವಟಿಕೆಗಳನ್ನು ಮುಂದುವರೆಸಲು ಅಸಮರ್ಥನಾಗುತ್ತಾನೆ. ಮಾಡಲೇ ಬೇಕಾದ ಕರ್ತವ್ಯಗಳು ಇತರ ಕರ್ಮಗಳು ತಾವೇ ಅವನನ್ನು ಬಿಟ್ಟುಹೋಗುತ್ತವೆ.

ಒಮ್ಮೆ ಶ್ರೀ ರಾಮಕೃಷ್ಣ ಪರಮಹಂಸರು ಸೂರ್ಯನಿಗೆ ಗಂಗಾ ನದಿಯ ನೀರಿನಿಂದ ಅರ್ಘ್ಯ ಕೊಡಲು ಬಯಸಿದರು. ಆದರೆ ಅವರ ಎರಡು ಹಸ್ತಗಳೂ ಒಟ್ಟುಗೂಡಲು ನಿರಾಕರಿಸಿದವು. ಅರ್ಘ್ಯ ಪ್ರದಾನ



ಸಾಧ್ಯವಾಗಲೇ ಇಲ್ಲ. ಅವರು ವಿಚಲಿತರಾದರು – ನನ್ನ ಕೈಗಳಿಗೆ ಪಾರ್ಶ್ವವಾಯು ಬಡಿದಿರಬೇಕು ಎಂದೇ ಭಾವಿಸಿದರು. ಆ ವೇಳೆಗೆ ಅದೇ ಹಾದಿಯಲ್ಲಿ ಬರುತ್ತಿದ್ದ ಶ್ರೀವೈಷ್ಣವ ಚರಣನೆಂಬ ಪ್ರಬುದ್ಧ ಸಾಧಕನು ರಾಮಕೃಷ್ಣರ ದುಃಖಕ್ಕೆ ಕಾರಣವನ್ನು ಕೇಳಿದನು. ತಮ್ಮ ಎರಡೂ ಹಸ್ತಗಳು ಒಟ್ಟುಗೂಡಲು ಸಾಧ್ಯವೇ ಆಗುತ್ತಿಲ್ಲ ಎಂದು ಅವರು ಹೇಳಿದಾಗ, ಶ್ರೀ ವೈಷ್ಣವಚರಣ – "ಇನ್ನು ಮುಂದೆ ಈ ದಿನನಿತ್ಯದ ಕರ್ತವ್ಯಗಳಾವುದನ್ನೂ ಮಾಡಬೇಕಿಲ್ಲ. ಕರ್ಮಗಳೇ ನಿನ್ನನ್ನು ಬಿಟ್ಟು ಹೋಗಿವೆ" ಎಂದುಬಿಟ್ಟರು! ಅಂತಹ ಸಾಧಕನು ಪೂಜೆಗಳನ್ನು ಮಾಡುವುದು, ದೇವಾಲಯಗಳಿಗೆ ಹೋಗುವುದು ಎಲ್ಲದರ ಬಗೆಗೆ ಜಿಹಾಸೆಯನ್ನು ತಾಳುತ್ತಾನೆ. ಹೀಗಾಗಿ ದೈಹಿಕ ಚಟುವಟಿಕೆಗಳೂ ಅವನನ್ನು ಬಿಟ್ಟುಹೋಗುತ್ತವೆ. ಕ್ರಿಯೆಗಳು, ಆಲೋಚನೆಗಳಿಂದಲೇ ಮೂಡಿಬರುವು ದರಿಂದ ಕ್ರಿಯೆಗಳು ಬಿದ್ದುಹೋದವೆಂದರೆ, ನಾಲಗೆ – ಮನಸ್ಸುಗಳೂ ಸಹ, ತಮ್ಮ ಚಟುವಟಿಕೆಗಳಾದ ಧ್ಯಾನ, ಪ್ರಾರ್ಥನೆ, ಏರುಧ್ವನಿಯ ಭಜನೆ – ಕೀರ್ತನೆ ಇತ್ಯಾದಿಗಳೆಲ್ಲವೂ ನಿಂತುಹೋಗುತ್ತವೆ. ಸಾಧಕನು ತನ್ನ ಸಹಜ ಸ್ಥಿತಿಯಲ್ಲಿ ಪರಿಶುದ್ಧ ಆತ್ಮವಾಗಿ ಇದ್ದು ಬಿಡುತ್ತಾನೆ.

ಇದು ಬಾಹ್ಯ ಚಟುವಟಿಕೆಗಳಿಂದ, ಅಂತರ್ಮುಖ ಕಾರ್ಯಗಳಿಗೆ ವಿದಾಯದ ಹಿಮ್ಮುಖ ಪ್ರಯಾಣ. ಎಲ್ಲ ದೈಹಿಕ ಚಟುವಟಿಕೆಗಳೂ ಇಲ್ಲವಾಗುತ್ತವೆ. ಮನಸ್ಸು "ಅಮನಸ್ಕ"ವಾಗುತ್ತದೆ. ನಾಲಗೆಯು ತನ್ನ ಕ್ರಿಯೆಗಳನ್ನು ಸ್ತಬ್ಧಗೊಳಿಸುತ್ತದೆ. ಇನ್ನು ಮುಂದೆ ಅಷ್ಟಾವಕ್ರರು, ಜೀವನ್ಮುಕ್ತನು ಆಲಸಿಗಳ ದೊರೆಯಂತೆ ವರ್ತಿಸುವುದನ್ನು ವಿವರಿಸಲು ತೊಡಗುತ್ತಾರೆ. ಅಂಥವನು ತನ್ನ ಕಣ್ಣುಗಳನ್ನು ಮಿಟುಕಿಸುವುದೂ ಅವನಿಗೆ ಹೊರೆಯಾಗಿ ತೋರುತ್ತದೆ. ನಾನೇ ಸ್ವತಃ ಕಂಡಿದ್ದೇನೆ – ನನ್ನ ಗುರುದೇವರು ಕೆಲವೊಮ್ಮೆ ಬಹುಕಷ್ಟದಿಂದ ಯಾವುದೋ ಅಂತರಾಳದಿಂದ ಹೊರಬರುತ್ತಿರುವುದೋ ಎಂಬಂತೆ ಮಾತನಾಡಲು ಶ್ರಮಿಸುತ್ತಿರುವಂತೆ ತೋರುತ್ತಿತ್ತು. ಎಲ್ಲ ಆಲೋಚನೆಗಳೂ ಅಂತಿಮವಾಗಿ ಬಿಟ್ಟುಹೋದ ಮೇಲೆ, ಸಾಧಕನು ತನ್ನ ಸಹಜ ಸ್ಥಿತಿಯಲ್ಲಿ ಇದ್ದುಬಿಡುತ್ತಾನೆ.

ಇಲ್ಲಿ ಒಂದು ಎಚ್ಚರಿಕೆಯ ಮಾತು. ಕೆಲವು ಪ್ರಾಪಂಚಿಕ ವ್ಯಕ್ತಿಗಳೂ ಯಾವುದೇ ಸಾಧನೆ ಮಾಡದಷ್ಟು ಸೋಮಾರಿಗಳಾಗುವ ಕಾಲವೂ

ಬರುತ್ತದೆ. ನಾವು ಜೀವನ್ಮುಕ್ತ ಸ್ಥಿತಿಯನ್ನು ತಲುಪಿಬಿಟ್ಟಿದ್ದೇವೆ ಎಂದು ಅವರು ಭಾವಿಸುತ್ತಾರೆ. ಜೀವನ್ಮುಕ್ತನು ಗುಂಡು ತುಂಬಿ ಸಿದ್ಧನಾದ ಬಂದೂಕಿನಂತೆ. ಅಗತ್ಯ ಒದಗಿದಾಗ ಕ್ರಿಯೆಗೆ ತೊಡಗಿಬಿಡುತ್ತಾನೆ. ಕೇವಲ ಸೋಮಾರಿಗಳು ಹೀಗಲ್ಲ. ಕಾಡತೂಸುಗಳೇ ಇಲ್ಲದ ಬರಿಯ ಬಂದೂಕಿನಂತೆ ಅವರು. ಸಂಸ್ಕೃತದಲ್ಲಿ ಸೋಮಾರಿ ಎಂಬ ಶಬ್ದಕ್ಕೆ ಆಲಸ : ಎಂಬ ಸಮಾನಾರ್ಥಕ ಪದವೇ ಇದೆ. ಎಂದರೆ ಪ್ರಕಾಶಿಸದ, ಯಾವ ಪ್ರತಿಭೆ ಇಲ್ಲದ ವ್ಯಕ್ತಿ ಎಂದು. ಲಸ್ ಎಂದರೆ ಪ್ರಕಾಶಿಸು. ಅ ಎನ್ನುವುದು ನಕಾರಾತ್ಮದ ಉಪಸರ್ಗ. ಜೀವನ್ಮುಕ್ತನು ಉಜ್ವಲವಾದ ಪ್ರಭೆಯಂತೆ ಬೆಳಗುತ್ತಾನೆ. ಅವನು ತಾನೇ, ಕ್ರಿಯೆಗಳನ್ನು ಬಿಡುವುದಿಲ್ಲ. ಕ್ರಿಯೆಗಳೇ ಅವನನ್ನು ಬಿಟ್ಟುಹೋಗುತ್ತವೆ.

## 24. ಸ್ವೀಕರಿಸಲೂ ಬೇಡ – ನಿರಾಕರಿಸಲೂ ಬೇಡ

ಅಕಿಂಚನ ಭವಂ ಸ್ವಾಸ್ಥ್ಯಂ ಕೌಪೀನತ್ವೇಪಿ ದುರ್ಲಭಂ ।
ತ್ಯಾಗಾದಾನೇ ವಿಹಾಯಾಸ್ಮಾದಹಮಾಸೇ ಯಥಾ ಸುಖಂ॥

(XIII-1)

ಯೋಗಕ್ಷೇಮ ಭಾವವನ್ನು ಒಬ್ಬನು ಹೊಂದುವುದು ಆತನಲ್ಲಿ ಏನೂ ಇಲ್ಲದಾದಾಗಲೇ – (ತನ್ನ ಆತ್ಮವೊಂದಲ್ಲದೆ ಬೇರೆ ಏನೂ ತನ್ನದಲ್ಲ ಎಂಬ ಅರಿವಿನಲ್ಲಿ ಇರುವುದರಿಂದ), ತನ್ನಲ್ಲಿ ಕೇವಲ ಕೌಪೀನ ಮಾತ್ರ ಎಂದು ತಿಳಿದಾಗಲೇ. ಆದುದರಿಂದ ಯಾವುದನ್ನೂ ನಾನು ಹಿಡಿದು ಕೊಳ್ಳುವುದೂ ಇಲ್ಲ. ಬಿಟ್ಟು ಬಿಡುವುದೂ ಇಲ್ಲ. ಸಂತೋಷವಾಗಿದ್ದೇನೆ.

ಇದು ಜೀವನ್ಮುಕ್ತನ ಸ್ಥಿತಿಯನ್ನು ವಿವರಿಸುತ್ತದೆ. ಇದು ದೈವಸಾಕ್ಷಾತ್ಕಾರದ ಮಾರ್ಗವನ್ನೂ ನಿರ್ದೇಶಿಸುತ್ತದೆ. ಅಹಂ ಅಥವಾ ದೇಹದೊಂದಿಗೆ ಆತ್ಮವನ್ನು ಗುರುತಿಸಿಕೊಳ್ಳುವುದು–ನಾನು–ನನ್ನದು ಎಂಬ ಭಾವದೊಂದಿಗೆ ಬೆಸೆದುಕೊಳ್ಳುವದು ಈ ದೇಹಾತ್ಮ ಭಾವದ ಮೇಲೆಯೇ. 'ಇದು ನನ್ನದು – ಇದು ನನ್ನದು' ಎಂಬ ಮನೋವೃತ್ತಿ ಹೊರಟುಹೋದರೆ, 'ನಾನು' ಎಂಬುದು ನನ್ನದು ಎಂಬ ಭಾವವಿಲ್ಲದೆ ತಾನೊಂದೇ ಇರಲಾರದು. ಸಮಸ್ತ ಪ್ರಪಂಚವೂ ಅದರ ವಸ್ತುಗಳೆಲ್ಲವೂ ಸ್ವಪ್ನಸದೃಶ, ಮತ್ತು ಅಸತ್ಯ, ಅವೆಲ್ಲ ಕೇವಲ ಆಲೋಚನೆಗಳಷ್ಟೆ ಎಂಬ ಸತ್ಯದ ಅರಿವು ನಿಮ್ಮದಾಗಲೇಬೇಕು. ಆತ್ಮ (ಕನಸು ಕಾಣುವವ) ಒಂದೇ ಸತ್ಯಸ್ಯಸತ್ಯ 'ನನ್ನದು' ಎಂಬುದು ಇರುವುದೇ ಇಲ್ಲ. ನನ್ನದು ಎಂಬ ಭಾವ ತೀರಾ



ಇಲ್ಲದಿರುವುದರಿಂದ ನಿಮ್ಮ ಸ್ವಸ್ವರೂಪದಲ್ಲಿ ನಿಲ್ಲುತ್ತೀರೇ ವಿನಃ, ಐಶ್ವರ್ಯ ಮನೆ, ಪಾಂಡಿತ್ಯ ಇತ್ಯಾದಿಗಳಲ್ಲಿ ಅಲ್ಲ. ಅದು ಸಹಜ ತ್ಯಾಗವೇ ವಿನಃ ಪ್ರಯತ್ನ ಪೂರ್ವಕವಾಗಿ ಬಿಟ್ಟುಬಿಡುವುದಲ್ಲ. ಔಪಚಾರಿಕ ಸಂನ್ಯಾಸವನ್ನು ತೆಗೆದುಕೊಂಡು ಸಂನ್ಯಾಸಿಯಾಗಿ ಕಾಷಾಯ ವಸ್ತ್ರ ಧರಿಸಬೇಕಾದ ಅವಶ್ಯಕತೆಯೇ ಇಲ್ಲ. ನೀವು ಏನನ್ನೂ ಬಿಟ್ಟುಬಿಡಲೂ ಇಲ್ಲ, ತಿರಸ್ಕರಿಸಲೂ ಇಲ್ಲ – ಏನನ್ನೂ ಹೊಸದಾಗಿ ತೆಗೆದುಕೊಳ್ಳಲೂ ಇಲ್ಲ. ನೀವು ನೀವಾಗಿ ಇದ್ದೀರಿ.

ಆತ್ಮವೊಂದರಲ್ಲೇ ನೆಲೆನಿಂತಾಗ, ಉತ್ಕೃಷ್ಟತೆಯ ಭಾವವಾಗಲಿ, ಅತಿ ಶ್ರೇಷ್ಠವಾದ ಯೋಗಕ್ಷೇಮ ಭಾವವಾಗಲಿ ಅನುಭವಿಸಲ್ಪಡುವುದನ್ನು ಕೇವಲ ಕೌಪೀನವನ್ನು ಧರಿಸಿರುವುದರಿಂದ ಪಡೆಯಲು ಅಸಾಧ್ಯ. ಇದು, ಪುನಃ ಅಜ್ಞಾನಿಯು ಅರ್ಥ ಮಾಡಿಕೊಳ್ಳಲೆಂದು ಬಳಸಿಕೊಂಡ ತಂತ್ರ ಅಷ್ಟೇ. ಅದನ್ನು ಹೇಳಿರುವುದು ಅಜ್ಞಾನದ ಭಾಷೆಯಲ್ಲಿ ಒಬ್ಬನು ಜೀವನ್ಮುಕ್ತನಾಗಿರುವಾಗ, ತನ್ನ ಸಹಜ ಸ್ವರೂಪವಾದ ಆನಂದದಲ್ಲಿರುತ್ತಾನೆ. ಆನಂದಮಯವಾಗಿ ಅಲ್ಲ. ಅವನಿಗೆ ಉತ್ಕೃಷ್ಟತೆ ಅಥವಾ ಸಂತೋಷದ ಭಾವ ಇರುವುದಿಲ್ಲ. ಯಾವ ಗುಣವಾಚಕಗಳೂ ಅವನಿಗೆ ಅನ್ವಯಿಸು ವುದಿಲ್ಲ. ಅವನು ಯಾವುದೇ ಒಂದು ಸ್ಥಿತಿಯನ್ನು ತಲುಪುವುದಿಲ್ಲ. ಅವನು ಹೇಗಿದ್ದಾನೋ ಹಾಗೆ ಇದ್ದಾನೆ.

ಈ ಎಲ್ಲ ಶಬ್ದ (ಮಾತು)ಗಳನ್ನು ಆ ಸ್ಥಿತಿ ಹೇಗಿರಬಹುದು ಎಂಬುದನ್ನು ಸಾಮಾನ್ಯ ಮನುಷ್ಯನಿಗೆ ವಿವರಿಸುವುದಕ್ಕಾಗಿ ಉಪಯೋಗಿಸಲಾಗುತ್ತದೆಯೇ ವಿನಃ "ಆತ್ಮದ ಸ್ಥಿತಿಯಲ್ಲಿ ಇರುವವನು ಆ ಸ್ಥಿತಿಯನ್ನು ವರ್ಣಿಸಲೇ ಆರ. ಅವನಿಗೆ ತಾನು ಏನನ್ನೋ ಪಡೆದುಕೊಂಡಿದ್ದೇನೆ (ಉದಾ : ಸಂನ್ಯಾಸಿಯ ಕಾಷಾಯ ವಸ್ತ್ರ) ಎಂಬ ಭಾವವಾಗಲಿ, ಹೆಂಡತಿ, ಮನೆ, ಸಂಪತ್ತು ಇವುಗಳನ್ನು ತ್ಯಾಗ ಮಾಡಿದೆ ಎಂಬ ಚಿಂತೆಯಾಗಲೀ ಇರುವುದೇ ಇಲ್ಲ.

## 25. ದೇಹ, ಮನಸ್ಸು, ಮಾತುಗಳೊಡನೆ ಸಂಪರ್ಕವನ್ನು ತ್ಯಜಿಸಿ ಬಿಡು.

ಕುತ್ರಾಪಿ ಖೇದಃ ಕಾಯಸ್ಯ ಜಿಹ್ವಾ ಕುತ್ರಾಪಿ ಖಿದ್ಯತೇ ।
ಮನಃ ಕುತ್ರಾಪಿ ತತ್ತ್ಯಕ್ತ್ವಾ ಪುರುಷಾರ್ಥೇ ಸ್ಥಿತಃ ಸುಖಂ ।

(XIII-2)

ಎಲ್ಲೋ ಒಂದು ಕಡೆ ದೇಹವು ಸಂಕಟಪಡುತ್ತಿದೆ. ಮತ್ತೆಲ್ಲೋ ನಾಲಗೆ, ಇನ್ನೆಲ್ಲೋ ಮನಸ್ಸು, ಇವುಗಳೂ ದುಃಖಿತವಾಗಿಬಿಡುತ್ತವೆ. ಅವೆಲ್ಲವನ್ನೂ ಬಿಟ್ಟುಬಿಡು. ನಿನ್ನ ಆತ್ಮದಲ್ಲಿ ಸಂತೋಷವಾಗಿ ಇದ್ದುಬಿಡು. (ಅದೊಂದೇ ಜೀವನದ ಉದ್ದೇಶ).

ಅಷ್ಟಾವಕ್ರರಲ್ಲಿ ಸಹಜವಾಗಿರುವಂತೆ, ಈ ಶ್ಲೋಕವು ಜೀವನ್ಮುಕ್ತನ ಸ್ಥಿತಿಯನ್ನು ವಿವರಿಸುವುದು ಮಾತ್ರವಲ್ಲದೇ ಆ ಸ್ಥಿತಿಯನ್ನು ಹೊಂದುವ ಮಾರ್ಗವನ್ನೂ ತಿಳಿಸುತ್ತದೆ. ಸಾಧನೆಯ ಯಾವುದೋ ಹಂತದಲ್ಲಿ ಉಪವಾಸ, ಪಂಚಾಗ್ನಿ ಮಧ್ಯದಲ್ಲಿ ಕುಳಿತು ಧ್ಯಾನ, ಇತ್ಯಾದಿಗಳನ್ನು ಕೈಕೊಂಡು ದೇಹದಂಡನೆ ಮಾಡುತ್ತೀರಿ. ಪ್ರಾಪಂಚಿಕ ಜೀವನದಲ್ಲಿಯೂ ರೋಗ ರುಜಿನಗಳು ಕಾಡುತ್ತವೆ. ಅಥವಾ ಧನ ಸಂಪಾದನೆಗಾಗಿ ಪ್ರಯತ್ನ ಮಾಡಬೇಕು. ಮನಸ್ಸು ಹಲವಾರು ಕೆಲಸಕ್ಕೆ ಬಾರದ ಆಲೋಚನೆಗಳಲ್ಲಿ ಮುಳುಗಿರುತ್ತದೆ. ಏಕಾಗ್ರ ಚಿತ್ತವನ್ನು ಸಾಧಿಸಲು ಅಥವಾ ಧ್ಯಾನ ಮಾಡಲು ಮನಸ್ಸನ್ನು ಬಹುವಾಗಿ ಸಂಕಷ್ಟಕ್ಕೆ ಈಡು ಮಾಡಲಾಗುತ್ತದೆ. ನಿರುಪಯುಕ್ತ ಆಲೋಚನೆಗಳನ್ನು ನಿಯಂತ್ರಿಸಲು ದುಃಖ ಸಂಕಟಗಳನ್ನು ಅನುಭವಿಸಬೇಕಾಗುತ್ತದೆ. ನೀವು ಪರಿಶುದ್ಧ ಆತ್ಮವೇ ಆಗಿದ್ದೀರಿ. ನಿಮ್ಮ ದೇಹ-ಮನಸ್ಸು ಮಾತು (ನಾಲಗೆ) ಇವುಗಳನ್ನು ನೋಡುತ್ತಿದ್ದೀರಿ. ಮನಸ್ಸಿನ ಮೂಲಕ ಹಾದು ಹೋಗುವ ಆಲೋಚನೆಗಳ ಅರಿವೂ ನಿಮಗಿದೆ. ನೀವು ದೇಹ, ಮಾತು ಮನಸ್ಸು ಮಾತುಗಳ ಕಾರ್ಯಗಳ ಸಾಕ್ಷಿಯಾಗಿದ್ದೀರಿ. "ಮನೋ ಬುದ್ಧ್ಯಹಂಕಾರ ಚಿತ್ತಾನಿ ನಾಹಂ ನ ಚ ಸ್ತೋತ್ರ ಜಿಹ್ವೇ ನ ಚ ಪ್ರಾಣನೇತ್ರೇ" ನೀವು ದೇಹೇಂದ್ರಿಯಗಳಲ್ಲ. ಮನಸ್ಸು ಬುದ್ಧಿಗಳು ನೀವಲ್ಲ. ದೇಹೇಂದ್ರಿಯಗಳು ಅಥವಾ ಮನಸ್ಸಿನ ಒಡನೆ ತಪ್ಪಾಗಿ ನಿಮ್ಮನ್ನು ಗುರುತಿಸಿಕೊಂಡಿರು ವುದರಿಂದ, ಅವುಗಳ ದುಃಖ ಸಂಕಟಗಳೊಡನೆ ನೀವೂ ಸಂಕಟ ಪಡುತ್ತಿದ್ದೀರಿ!

ಧ್ಯಾನ ಮಾಡುತ್ತಿರುವಾಗ, ಅಥವಾ ಏಕಾಂತದಲ್ಲಿ ಕುಳಿತಿರುವಾಗ, ಬೇಕಿಲ್ಲದ ಹಾಗೂ ಕೆಟ್ಟ ಆಲೋಚನೆಗಳು ಮನದಲ್ಲಿ ಏಳುತ್ತವೆ. ಅವುಗಳನ್ನು ನಿಯಂತ್ರಿಸಲು ನಿಮಗೆ ಸಾಧ್ಯವಾಗದೆ ಹತಾಶರಾಗುತ್ತೀರಿ, ದುಃಖಿತರಾಗುತ್ತೀರಿ. ಈ ಶ್ಲೋಕವು ನಿಮಗೆ ಒಂದು ಪರಿಹಾರವನ್ನು ನೀಡುತ್ತದೆ. ನಿಮ್ಮ ಮನಸ್ಸಿಗೆ ಹೀಗೆ ಹೇಳಿರಿ. "ನಾನು ನಿನ್ನೊಡನೆ ವಿಚ್ಛೇದನ ಪಡೆಯುತ್ತೇನೆ. ನಿನ್ನೊಡನೆ ಇನ್ನು ಮೇಲೆ ಯಾವ ಸಂಪರ್ಕವನ್ನೂ ಇಟ್ಟುಕೊಳ್ಳಲು ನಿರಾಕರಿಸುತ್ತೇನೆ. ನಿನ್ನದಾರಿ ನಿನಗೆ. ಆಲೋಚನೆಗಳನ್ನು ಮನಸ್ಸಿಗೆ ಬಂದ ಹಾಗೆ(!) ಶುಶ್ರೂಷೆ ಮಾಡು. ನನಗೇನೂ ಚಿಂತೆಯಿಲ್ಲ. ನಾನು ಹೇಗಿದ್ದೇನೋ ಹಾಗೇ ಇರುತ್ತೇನೆ." ಹಾಗೆಯೇ ನಿಮ್ಮ ದೈಹಿಕ ರೋಗ ರುಜಿನಗಳನ್ನೂ ನೀವು ನಿರ್ಲಕ್ಷಿಸಬಹುದು. ದೇಹದೊಂದಿಗೆ ನಿಮ್ಮನ್ನು ಗುರುತಿಸಿಕೊಳ್ಳುವುದನ್ನು ನಿಲ್ಲಿಸಿಬಿಡಿ. ನೀವು ಹೇಗಿದ್ದೀರೋ ಹಾಗೆ ಆತ್ಮವಾಗಿ ಇದ್ದುಬಿಡಿ.



**26. ನಿದ್ರೆ ಅಥವಾ ಎಚ್ಚರದ ಬಗ್ಗೆ ಉದಾಸೀನತೆ – ಜೀವನ್ಮುಕ್ತನ ಸ್ಥಿತಿ. (ಲಕ್ಷಣ)**

ಸ್ವಪತೋ ನಾಸ್ತಿ ಮೇ ಹಾನಿಃ ಸಿದ್ಧಿರ್ಯತ್ನವತೋ ನ ವಾ ।
ನಾಶೋಲ್ಲಾಸೌ ವಿಹಾಯಾಸ್ಮಾದಹಮಾಸೇ ಯಥಾ ಸುಖಮ್ ॥

(XIII-6)

ನಿದ್ರಿಸುವುದರಿಂದ ನಾನು ಏನನ್ನೂ ಕಳೆದುಕೊಳ್ಳುವುದಿಲ್ಲ. ಎಚ್ಚರದಲ್ಲಿ ಶ್ರಮಪಟ್ಟು ಗಳಿಸುವುದು ಅಥವಾ ಸಾಧಿಸುವುದು ಏನೂ ಇಲ್ಲ. ಆದುದರಿಂದ ಲಾಭ ಅಥವಾ ನಷ್ಟಗಳ ಬಗೆಗೆ ನಾನು ಉದಾಸೀನನಾಗಿದ್ದು, ನಾನು ಈಗ ಇರುವಂತೆಯೇ ಸಂತೋಷವಾಗಿ ಇದ್ದು ಬಿಡುತ್ತೇನೆ.

ನಾನು ನನ್ನ ಸಹಜ ಸ್ಥಿತಿಯಾದ ಸದಾಕಾಲದಲ್ಲೂ ಎಚ್ಚರದಲ್ಲೇ ಇರುತ್ತೇನೆ. ಇತರರಿಗೆ ನಾನು ಕೆಲವೊಮ್ಮೆ ಎಲ್ಲರಂತೆಯೇ ನಿದ್ರಿಸುತ್ತಿದ್ದೇನೆ ಎಂದು ತೋರಬಹುದು. ಹಾಗೆಯೇ ಉಳಿದ ಕಾಲದಲ್ಲಿ ಎಲ್ಲರಂತೆಯೇ ಯಾವುದಾದರೂ ಕೆಲಸದಲ್ಲಿ ತೊಡಗಿದ್ದೇನೆ, ಎನಿಸಬಹುದು. ವೈಯಕ್ತಿಕವಾಗಿ ನನಗಿಂತ ಬೇರೆಯಾದ ಏನೂ ಇಲ್ಲ. ಈ ಜಗತ್ತಿನಲ್ಲಿ ಗಳಿಸಬೇಕಾದುದಾಗಲೀ ಕಳೆದುಕೊಳ್ಳುವುದಾಗಲಿ ಯಾವುದೂ ನನಗಿಲ್ಲ. ಸಾಮಾನ್ಯ ಮನುಷ್ಯನು ನಿದ್ರಿಸುತ್ತಿರುವಾಗ ನಿಶ್ಚಲವಾಗಿ ಹಾಸಿಗೆಯಲ್ಲಿ ಮಲಗಿರುತ್ತಾನೆ. ಆದರೆ ಕನಸಿನಲ್ಲಿ ಅವನು ತಿನ್ನುತ್ತಿರಬಹುದು, ನಡೆಯುತ್ತಿರಬಹುದು, ಹಲವಾರು ಸ್ಥಳಗಳಿಗೆ ಹಾರುತ್ತಿರಬಹುದು. ಕನಸಿನ ವಸ್ತುಗಳು ಅಸತ್ಯವಾಗಿರುವಂತೆಯೇ, ಕನಸಿಗನು ಸಹಾ ಕನಸಿನಲ್ಲಿ ರಾಜನಾಗಿರಬಹುದು. ಅವೆಲ್ಲವೂ ಯಾವ ಕೆಲಸಕ್ಕೂ ಬಾರದಂತಹವು. ಅವನು ಕನಸು ಕಾಣುವುದರ ಬದಲು ಗಾಢ ನಿದ್ರೆಯಲ್ಲಿ ಮುಳುಗಿದ್ದರೆ, ರಾಜನಾಗುವ ಯಾವ ಅವಕಾಶವನ್ನೂ ಕಳೆದುಕೊಳ್ಳುತ್ತಿರಲಿಲ್ಲ! ಜೀವನ್ಮುಕ್ತನಿಗೆ ಇಹದ ಈ ಜೀವನವೇ ಕನಸಿನಂತೆ, ಅವನು ಏನು

ಮಾಡಿದರೂ ಚಿಂತೆಯಿಲ್ಲ. ಅವನು ಎಚ್ಚರದ ಕನಸಿಗನಂತೆಯೇ ಇದ್ದುಬಿಡುತ್ತಾನೆ, ಯಾವ ಸ್ಥಿತಿಯಲ್ಲಿದ್ದರೂ ಅವನಿಗೆ ಅರಿವಿರುತ್ತದೆ. (ನೋಟಕನ ಕಣ್ಣಿನಲ್ಲಿ) ಮತ್ತು ಸಂತೋಷದಲ್ಲಿ ಆತ್ಮನಲ್ಲಿ ಇದ್ದುಬಿಡುತ್ತಾನೆ. ಅವನಿಂದ ಬೇರೆಯಾದ ಯಾವ ವಸ್ತುವೂ ಇಲ್ಲದಿರು ವುದರಿಂದ, ಇಷ್ಟ – ಅನಿಷ್ಟ, ಅಥವಾ ಪಡೆಯಬೇಕಾದ ಪ್ರಿಯವಸ್ತು, ಇತ್ಯಾದಿ ಪ್ರಶ್ನೆಗಳೇ ಏಳುವುದಿಲ್ಲ. ಇದು ಜೀವನ್ಮುಕ್ತನ ಸ್ವರೂಪ – ಸ್ಥಿತಿ.

**27. ಜೀವನ್ಮುಕ್ತನು ಉನ್ಮತ್ತ (ಹುಚ್ಚ)ನಂತೆ ವರ್ತಿಸುತ್ತಾನೆ.**

ಅಂತರ್ವಿಕಲ್ಪ ಶೂನ್ಯಸ್ಯ ಬಹಿಃ ಸ್ವಚ್ಛಂದ ಚಾರಿಣಃ ।
ಭ್ರಾಂತಸ್ಯೇವ ದಶಾಸ್ತಾಸ್ತಾಃ ತಾದೃಶಾ ಏವ ಜಾನತೇ॥ (XIV-4)

ಜೀವನ್ಮುಕ್ತನು ಅಂತರಂಗದಲ್ಲಿ ಆಲೋಚನೆಗಳಿಂದ ಮುಕ್ತನಾಗಿ ಇರುತ್ತಾನೆ. ಬಹಿರಂಗದಲ್ಲಿ (ಹೊರಗಣ ಜಗತ್ತಿನಲ್ಲಿ ಸಂಚರಿಸುವಾಗ) ತನಗೆ ಮನ ಬಂದಂತೆ ವರ್ತಿಸುತ್ತಾನೆ. ನೋಡುವವರ ಕಣ್ಣಿಗೆ ಆಗಾಗ್ಗೆ ಹುಚ್ಚನಂತೆಯೇ ತೋರಿಬರುತ್ತಾನೆ. ವಿವರಿಸಲಾಗದ, ಅತಾರ್ಕಿಕವಾದ ಅವನ ಸ್ಥಿತಿಯನ್ನು ಅವನಂತಹ ವ್ಯಕ್ತಿಗಳು ಮಾತ್ರ (ಜೀವನ್ಮುಕ್ತರು) ಅರ್ಥಮಾಡಿಕೊಳ್ಳಬಲ್ಲರು.

ನಿಮ್ಮ ಮನಸ್ಸು ಯಾವಾಗಲೂ ತಂದೆ–ತಾಯಿ, ಮಗ, ಷೇರುಗಳು (Shares) ಆಫೀಸು, ಧನ, ಅಧಿಕಾರ, ಇಂತಹ ಆಲೋಚನೆಗಳಿಂದಲೇ ತುಂಬಿರುತ್ತದೆ. ಪೂರ್ವಜನ್ಮಗಳ ವಾಸನೆಗಳ ಕಾರಣದಿಂದ ಉಂಟಾದ ಇಷ್ಟ ಅನಿಷ್ಟಗಳು ಹೊಂದಿರುವ ವಸ್ತುಗಳನ್ನು ಇನ್ನಷ್ಟು ಹೆಚ್ಚು ಮಾಡಿಕೊಳ್ಳುವ ಅಥವಾ ಇರುವುದನ್ನು ಭದ್ರ ಪಡಿಸಿಕೊಳ್ಳುವ ಆಸೆಯನ್ನು ಉದ್ದೀಪಿಸುತ್ತವೆ. ಜೀವನ್ಮುಕ್ತನಾದರೋ ಆತ್ಮವಲ್ಲದೆ ಬೇರೆ ಏನನ್ನೂ ಕಾಣದಿರುವುದರಿಂದ ಇಡಿಯ ಪ್ರಪಂಚದಲ್ಲಿ ಯಾವ ವಸ್ತುವೂ ಅವನಿಗೆ ಇರುವುದಿಲ್ಲ.

ಸಹಜವಾಗಿಯೇ ಆತನ ಆತ್ಮಜ್ಞಾನದಿಂದ ಎಲ್ಲ ಪೂರ್ವ ವಾಸನೆಗಳೂ ತೊಳೆದುಹೋಗಿವೆ. ಅವನ ಮನಸ್ಸಿನಲ್ಲಿ ಯಾವ ವಸ್ತುಗಳ ಬಗೆಗೆ ಆಲೋಚನೆಗಳೂ ಮೂಡುತ್ತಿಲ್ಲ. ವಿಶ್ವ ಸಂಯೋಜಕನ ಇಚ್ಛೆಯಂತೆ ಅಥವಾ ಪ್ರಾರಬ್ಧ ಕರ್ಮಗಳ ಕಾರಣವಾಗಿ ಆತ ಈ ಪ್ರಾಪಂಚಿಕ ಕೆಲಸಗಳನ್ನು ಮಾಡಲು ಪ್ರಚೋದಿತನಾಗಿರ ಬಹುದು. ಆದರೆ



ಅದು ಯಾವುದೇ ವಾಸನಾ ಪ್ರವೃತ್ತಿಯ ಕಾರಣದಿಂದ ಅಲ್ಲ. ಅವುಗಳಲ್ಲಿ ಅವನಿಗೆ ಯಾವ ವೈಯಕ್ತಿಕ ಆಸಕ್ತಿಯೂ ಇಲ್ಲ. ಅವು ಒಬ್ಬ ಉನ್ಮತ್ತನ (ಹುಚ್ಚನ) ಉದ್ದೇಶ ರಹಿತ ಕ್ರಿಯೆಗಳಂತೆ ತೋರುತ್ತದೆ. ನಾನು ಎಲ್ಲೋ ಒಂದು ಕಡೆ ಓದಿದ ಕಥೆ ಇದು.

ಒಂದು ದೊಡ್ಡ ಪರ್ವತದ ಪಕ್ಕದಲ್ಲಿ ಇಬ್ಬರು ಯುವಕರು ಜೊತೆಯಲ್ಲಿ ವಾಸವಾಗಿದ್ದರು. ಬೆಟ್ಟದ ಮೇಲೆ ಮಹಾಜ್ಞಾನಿ ಸಂನ್ಯಾಸಿಯೊಬ್ಬ ವಾಸವಾಗಿದ್ದಾನೆ ಎಂದು ಕೇಳಿದ್ದರು. ಈ ಪುಣ್ಯ ಪುರುಷನನ್ನು ಭೇಟಿ ಮಾಡುವ ಉದ್ದೇಶದಿಂದ ಅವರು ಪ್ರಮಾಣ ಕೈಗೊಂಡರು. ಹಾದಿಯಲ್ಲಿ ಒಬ್ಬ ಕುರುಬನು ತನ್ನ ಕುರಿಮಂದೆಯನ್ನು ಮೇಯಿಸಲು ಬೆಟ್ಟ ಹತ್ತುತ್ತಿರುವುದನ್ನು ನೋಡಿದರು. ಬೆಟ್ಟದ ಮೇಲಿನ ಗುಹೆಯು ಯಾವ ದಾರಿಯಲ್ಲಿದೆ ಎಂದು ಈ ಯುವಕರು ಆತನನ್ನು ಕೇಳಿದರು. ಅಲ್ಲಿಯೇ ಆ ಮಹಾತ್ಮ ವಾಸಿಸುತ್ತಿದ್ದಾನಲ್ಲವೆ? ತಾನು ಅದೇ ಹಾದಿಯಲ್ಲಿ ತೆರಳುತ್ತಿರುವುದಾಗಿಯೂ ತನ್ನನ್ನು ಹಿಂಬಾಲಿಸಿ ಬರುವಂತೆಯೂ ಆ ಕುರುಬ ಹೇಳಿದನು. ಸ್ವಲ್ಪ ಹೊತ್ತಿನಲ್ಲಿಯೇ ಒಬ್ಬ ಮುದುಕನು ಅವರೊಡನೆ ಬಂದು ಸೇರಿದನು. ಕುರುಬನು ಒಂದು ಕುರಿಮರಿಯನ್ನು ಹೊಡೆದುದರಿಂದ ಅದು ಕುಂಟುತ್ತಿತ್ತು. ಮುದುಕನು ಕರುಣೆಯಿಂದ ಆ ಮರಿಯನ್ನು ತನ್ನ ಭುಜದ ಮೇಲೆ ಹೊತ್ತುಕೊಂಡನು. ಎಲ್ಲೋ ಒಂದು ಕಡೆ ಅದನ್ನು ಇಳಿಸಿಬಿಟ್ಟು ಬೆಟ್ಟದ ಒಳಗೆ ಮರೆಯಾಗಿಬಿಟ್ಟನು. ಸ್ವಲ್ಪ ಹೊತ್ತಾದ ಮೇಲೆ ಕುರುಬನು ಗುಹೆಯನ್ನು ತೋರಿಸಿ, ತನ್ನ ಹಾದಿ ಹಿಡಿದು ಹೊರಟುಹೋದನು. ಯುವಕರು ಗುಹೆಯನ್ನು ಸಮೀಪಿಸಿದಾಗ, ಅವರಿಗೆ ಒಂದು ಅಚ್ಚರಿ ಕಾದಿತ್ತು. ಕುರಿಮರಿಯನ್ನು ಹೊತ್ತು ಕೊಂಡಿದ್ದ ಮುದುಕನೇ ಆ ಸಂನ್ಯಾಸಿಯಲ್ಲದೆ ಬೇರೆ ಯಾರೂ ಅಲ್ಲ. ಅನೇಕ ಆಧ್ಯಾತ್ಮಿಕ ಪ್ರಶ್ನೆ ಉತ್ತರಗಳನ್ನು ಆ ಯುವಕರು ಸಂನ್ಯಾಸಿಯೊಡನೆ ಚರ್ಚಿಸಿದರು. ಕಡೆಯಲ್ಲಿ ಅವರು – ಪೂಜ್ಯರೇ, ಹಲವು ಗಂಟೆಗಳ ಮೊದಲು ತಾವು ಕುರಿಮರಿಯನ್ನು ತಮ್ಮ ಭುಜದ ಮೇಲೆ ಏಕೆ ಹೊತ್ತುಕೊಂಡಿರಿ? ಅದು ಮರಿಯ ಬಗೆಗೆ ತಮ್ಮ ಕಾರುಣ್ಯವೋ ಅಥವಾ ಪೂರ್ವ ನಿಶ್ಚಿತವೋ?" ಎಂದು ಕೇಳಿದರು. ಮುದುಕನು ಅಚ್ಚರಿಯಿಂದ ಅವರನ್ನು ನೋಡಿ, 'ಯಾವ ಕುರಿಮರಿ? ಯಾವಾಗ ಹೀಗಾಯಿತು?' ಎಂದು ಪ್ರಶ್ನಿಸಿದನು.

ಜೀವನ್ಮುಕ್ತನ ಕಾರ್ಯಗಳು ಉನ್ಮತ್ತನ ಕ್ರಿಯೆಗಳಂತೆಯೇ ಇರುತ್ತವೆ. ತಾನು ಮಾಡುತ್ತಿರುವ ಕೆಲಸದ ಪರಿಯೇ ಅವನಿಗೆ ತಿಳಿದಿರುವುದಿಲ್ಲ. ಸಾಮಾನ್ಯ ಮನುಷ್ಯನು ಅವುಗಳನ್ನು ಅರ್ಥ ಮಾಡಿಕೊಳ್ಳಲೇ ಆರ. ಅವನಂತಹ ಮತ್ತೊಬ್ಬ ಜೀವನ್ಮುಕ್ತರಿಗೆ ಮಾತ್ರ ಅವರ ಕಾರ್ಯಗಳು ಅರ್ಥವಾಗುತ್ತವೆ.

## 28. ಸತ್ವಗುಣದಿಂದ ತುಂಬಿದ ವಿವೇಕಿಯು ಈ ಜ್ಞಾನಕ್ಕೆ ಅರ್ಹ

ಯಥಾ ತಥೋಪದೇಶೇನ ಕೃತಾರ್ಥಃ ಸತ್ವ ಬುದ್ಧಿಮಾನ್ ।  
ಆಜೀವಮಪಿ ಜಿಜ್ಞಾಸುಃ ಪದಸ್ತತ್ರ ವಿಮುಹ್ಯತಿ । (XV -1)

ಸತ್ವಗುಣದಲ್ಲಿ ಆಳವಾಗಿ ಮುಳುಗಿದವನು, ಆ ಕಾರಣದಿಂದಲೇ ಪರಿಶುದ್ಧನಾದವನು ಈ ಬೋಧನೆಯ ಕೆಲವೇ ಶಬ್ದಗಳನ್ನು ಕೇಳಿದುದರಿಂದಲೇ ಪರಿಪೂರ್ಣ ಜ್ಞಾನಿಯಾಗಿ ಬಿಡುತ್ತಾನೆ. ಒಬ್ಬ ಸಾಮಾನ್ಯ ಸಾಧಕನು ಈ ಎಲ್ಲ ಬೋಧನವನ್ನೂ ಕೇಳಿದರೂ – ಜೀವಮಾನವೆಲ್ಲ ಕೇಳುತ್ತಲೇ ಇದ್ದರೂ, ಗೊಂದಲಕ್ಕೆ ಈಡಾಗುತ್ತಾ ಅಜ್ಞಾನದಲ್ಲಿರುವುದನ್ನೇ ಮುಂದುವರೆಸಿಬಿಡುತ್ತಾನೆ.

ಇಲ್ಲಿ ಅಷ್ಟಾವಕ್ರ ಹಾಗೂ ಜನಕರು ಜೀವನ್ಮುಕ್ತನ ಅತಿ ಉನ್ನತ ಸ್ಥಿತಿಯನ್ನೂ ಆ ಸ್ಥಿತಿಯನ್ನು ತಲುಪುವ ಬಗೆಯನ್ನೂ ತಮ್ಮದೇ ಅನುಭವದ ಆಧಾರದಿಂದ ಮಾತನಾಡಿಕೊಳ್ಳುತ್ತಿದ್ದಾರೆ. ಹೀಗಾಗಿ ಬೋಧನೆ ಎಲ್ಲರಿಗೂ ಅಲ್ಲ. ಆತ್ಮಾನಾತ್ಮ ವಿವೇಕಿಗೆ (ತಮ್ಮ ದೇಹವೂ ಸೇರಿದಂತೆ ಸಮಸ್ತ ಪ್ರಪಂಚ, ಮನಸ್ಸು, ಇಂದ್ರಿಯ ಇತ್ಯಾದಿ) ಅಥವಾ ರಜೋಗುಣ-ತಮೋಗುಣಗಳಿಂದ ಉದ್ದೀಪ್ತವಾದ ವಾಸನೆಗಳಿಂದ ಸಂಪೂರ್ಣವಾಗಿ ಮುಕ್ತನಾದವನಿಗೆ– ಸತ್ವಗುಣ ಭರಿತನಾದವನಿಗೆ (ಪ್ರಕಾಶ, ಸಮತೆ, ಪ್ರೀತಿ, ಅನುಕಂಪ, ಇತ್ಯಾದಿ) ಮಾತ್ರ ಈ ಜ್ಞಾನದ ಅರ್ಹತೆ ಇರುತ್ತದೆ. ಅಂಥವನು ಸುದೀರ್ಘವಾದ ಪ್ರವಚನಗಳನ್ನು-ವಿವರಣೆಗಳನ್ನು ಕೇಳಬೇಕಾಗಿಲ್ಲ. ಪರಮ ಸತ್ಯದ ಬಗೆಗೆ ಕೆಲವೇ ಮಾತುಗಳನ್ನು ಕೇಳುವುದರಿಂದ, ಆ ಸ್ಥಿತಿಯನ್ನು ಪಡೆಯುವುದು ಹೇಗೆ ಎಂಬ ಸೂಚನೆಗಳನ್ನು ಆಲಿಸುವುದರಿಂದ, ಆತ್ಮಸ್ಥಿತನಾಗುವುದು ಅವನಿಗೆ ಸಾಧ್ಯವಾಗುತ್ತದೆ. ಜೀವನದ ಪರಮ ಉದ್ದೇಶ್ಯವಾದ ಮುಕ್ತಿಯನ್ನು ಹೊಂದಿಬಿಡುತ್ತಾನೆ. ಸಾತ್ವಿಕ ಸ್ವಭಾವದವನು ಕೆಲವೇ ಉಪದೇಶದ ಮಾತುಗಳನ್ನು ಕೇಳಿ, ತಾನು ಆ ಆತ್ಮವೇ ಎಂಬ ದೃಢ ನಿಶ್ಚಯವನ್ನು



ಪಡೆದು– ಅದೊಂದೇ ಇರುವುದು, ಸಮಸ್ತ ಪ್ರಪಂಚವೂ ಅದರಿಂದ ಬೇರೆಯಾಗಿ ಇಲ್ಲವೇ ಇಲ್ಲ ಎಂಬುದು ಅವನಿಗೆ ಮನವರಿಕೆಯಾಗಿ ಬಿಡುತ್ತದೆ. ಜಗತ್ತು ಆತ್ಮನದೇ-ಸ್ವಪ್ನದಂತೆ, ಹಾಗೂ ಸ್ವಪ್ನವೆಂಬುದೂ ಒಂದು ಆಲೋಚನೆ. ರಜೋಗುಣ ಭರಿತರಾದ ಉಳಿದೆಲ್ಲ ಮನುಷ್ಯರೂ (ಕ್ರಿಯಾಶೀಲತೆ, ಆಕ್ರಮಣಶೀಲತೆ ಇತ್ಯಾದಿ) ತಮೋಗುಣಿಗಳೂ (ಆಲಸ್ಯ, ಕೆಲಸಗಳನ್ನು ಸುಮ್ಮನೆ ಮುಂದಕ್ಕೆ ಹಾಕುವುದು ಇತ್ಯಾದಿ) ತಮ್ಮ ಜೀವಮಾನದುದ್ದಕ್ಕೂ ವಿವರಗಳನ್ನು ಕೇಳುತ್ತಲೇ ಇದ್ದರೂ ಅರ್ಥ ಮಾಡಿಕೊಳ್ಳುವುದಿಲ್ಲ. ಈ ಸಂದರ್ಭದಲ್ಲಿ ಅಷ್ಟಾವಕ್ರ ಗೀತೆಯಲ್ಲಿ (ಗುಜರಾತಿ) ಪ್ರಕೃತ ಜೀವಂತವಾಗಿರುವ ಸಂತಶ್ರೇಷ್ಠ ಸ್ವಾಮಿ ಚಿದ್ರೂಪಾನಂದಜೀ ಮಹಾರಾಜರು ಒಂದು ಮನರಂಜಕವಾದ ದೃಷ್ಟಾಂತವನ್ನು ಹೇಳಿದ್ದಾರೆ.

ಗುರೂಜಿಯವರು ಉಪನ್ಯಾಸ ಮಂದಿರದಿಂದ ಹೊರಬರುತ್ತಿರುವಾಗ, ಒಬ್ಬ ಸಭಿಕನು ತನ್ನೆದುರು ನಡೆಯುತ್ತಿದ್ದ ಮತ್ತೊಬ್ಬನನ್ನು ತಳ್ಳುತ್ತಾನೆ. ಹಾಗೆ ತಳ್ಳಿಸಿಕೊಂಡವನು ತುಂಬ ಕೋಪದಿಂದ ತಳ್ಳಿದವನನ್ನು ಕತ್ತೆ ಎಂದು ನಿಂದಿಸಿದ. ಆತ ಗುರೂಜಿಯ ಬಳಿಸಾರಿ ಈ ಬಗ್ಗೆ ದೂರು ಹೇಳಿದ –"ನೋಡಿ ಗುರೂಜಿ, ವರ್ಷಗಟ್ಟಲೇ ಸತ್ಸಂಗಕ್ಕೆ ಬರುತ್ತಿದ್ದರೂ ಹೇಗೆ ಕೆಟ್ಟದಾಗಿ ವರ್ತಿಸಿ ನನ್ನನ್ನು ಕತ್ತೆ ಎಂದು ಬಯ್ಯುತ್ತಾನೆ!" ಗುರೂಜಿ ಈ ದೂರು ತಂದವನನ್ನು ಕೇಳಿದರು – "ಸ್ವಾಮೀ, ಈ ಹಲವು ತಿಂಗಳಿಂದಲೂ ತಮ್ಮ ಕಿವಿಯಲ್ಲಿ ನಾನು ಸುರಿಯುತ್ತಲೇ ಇದ್ದೇನೆ. ನೀವು ಬ್ರಹ್ಮವೇ ಆಗಿದ್ದೀರಿ, ಪರಿಶುದ್ಧ ಪರಮಾತ್ಮ ಸ್ವರೂಪರೇ. ಆದರೆ ಅದು ನಿಮ್ಮ ಮೆದುಳನ್ನು ಪ್ರವೇಶಿಸಿಯೇ ಇಲ್ಲ ಎಂದು ತೋರುತ್ತದೆ. ಇದಕ್ಕೆ ಬದಲಾಗಿ ಈ ಮನುಷ್ಯ ಕೇವಲ ಒಂದು ಸಲ ನಿಮ್ಮನ್ನು 'ಕತ್ತೆ' ಎಂದ. ಅದು ತಕ್ಷಣ ನಿಮ್ಮ ಮೇಲೆ ಪರಿಣಾಮ ಉಂಟುಮಾಡಿದೆ! ಎಂಥ ಆಶ್ಚರ್ಯ?"

## 29. ಜೀವನ್ಮುಕ್ತನು ನಿದ್ರೆಯಲ್ಲಿ ನಡೆಯುತ್ತಿರುವವನಂತೆ ಕ್ರಿಯೆಗಳನ್ನು ಮಾಡುತ್ತಾನೆ.

ಪ್ರಕೃತ್ಯಾ ಶೂನ್ಯ ಚಿತ್ತೋ ಯಃ ಪ್ರಮಾದಾದ್ಭಾವ ಭಾವನಃ ।  
ನಿದ್ರಿತೋ ಬೋಧಿತ ಇವ ಕ್ಷೀಣ ಸಂಸರಣೋ ಹಿ ಸಃ ॥  
(XIV – 1)

ಯಾರ ಮನಸ್ಸು ಸಹಜವಾಗಿ ಅಮನಸ್ಕವಾಗಿ ಬಿಟ್ಟಿದೆಯೋ, (ಆಲೋಚನಾರಹಿತ) ಅಂಥವನು ಪ್ರಾಪಂಚಿಕ ವಸ್ತುಗಳ ವಿಷಯದಲ್ಲಿ ಪೂರ್ಣ ಉದಾಸೀನನಾಗಿರುತ್ತಾನೆ ಗಾಢ ನಿದ್ರೆಯಿಂದ ಅದೇತಾನೇ ಎದ್ದಿರುವವನಂತೆ ಕ್ರಿಯೆಗಳನ್ನು ಮಾಡುತ್ತಾನೆ. (ಅತಿ ಆಲಸ್ಯ ತುಂಬಿದ ದೇಹ) ಅಂಥವನು ಪ್ರಾಪಂಚಿಕತೆಯನ್ನು ತೊರೆದು ಬಿಸುಟ ಜೀವನ್ಮುಕ್ತನೇ ಸರಿ.

ಈ ಗ್ರಂಥದಲ್ಲಿ ಈ ಮೊದಲು ಹಲವಾರು ಬಾರಿ ಹೇಳಿದಂತೆ ಒಬ್ಬ ಸಾಧಕನ ಮನಸ್ಸು ಪ್ರಾಪಂಚಿಕ ವಿಷಯುಗಳ ಬಗೆಗೆ ಆಲೋಚನಾರಹಿತವಾಗಿ ಸಹಜವಾಗಿ (ಒತ್ತಾಯದಿಂದಲ್ಲ) ಇರದಿದ್ದರೆ ಅವನು ಮುಕ್ತನಾಗಲು ಸಾಧ್ಯವೇ ಇಲ್ಲ. ಮುಕ್ತಿಯ ಅನಂತರವೂ ಅವನು ತನ್ನ ನಿತ್ಯಜೀವನದಲ್ಲಿ ಪ್ರಾಪಂಚಿಕ ವಿಷಯದಲ್ಲಿ ತೊಡಗಿರಬಹುದು. ಆದರೆ ಅವನ ಮನಸ್ಸು ಪ್ರಾಪಂಚಿಕ ವಸ್ತುಗಳೊಡನೆ ಸಂಬಂಧವನ್ನು ಕಳಚಿಕೊಂಡುಬಿಟ್ಟಿರುವುದರಿಂದ, ಅವನು ಅಂತಹ ಕ್ರಿಯೆಗಳನ್ನು ಮಾಡುವುದು, ತಾನು ಅವುಗಳನ್ನು ಇಷ್ಟಪಡುತ್ತೇನೆ ಎಂದಲ್ಲ ಅಥವಾ ಅದರಿಂದ ಏನಾದರೂ ಲಾಭ ಉಂಟು ಎಂದಲ್ಲ. ಪ್ರಾರಬ್ಧ ಎಂದು ಕರೆಯಬಹುದಾದ ವಿಶ್ವನಾಟಕದಲ್ಲಿ ಅವನು ಈ ಕಾರ್ಯಗಳನ್ನು ಒತ್ತಾಯ ಪೂರ್ವಕವಾಗಿ ಮಾಡಲೇ ಬೇಕಾದುದರಿಂದ. ಗಾಢವಾದ ನಿದ್ರೆಯಿಂದ ಎದ್ದವನಂತೆ, ದಿನ ನಿತ್ಯದ ಕರ್ಮಗಳನ್ನು ಮಾಡತ್ತಾನಷ್ಟೆ. ಅವನ ಮೆದುಳು ಇನ್ನೂ ನಿದ್ರೆಯ ಮಂಪರಿನಲ್ಲೇ ಇರುತ್ತದೆ. ವೈಯಕ್ತಿಕ ಆಸಕ್ತಿಯೇನೂ ಇರುವುದಿಲ್ಲ. ಕ್ರಿಯೆಗಳು ಆಲೋಚನೆಗಳಿಂದ ಪ್ರಚೋದಿತವಾಗುತ್ತವೆ. ಆಲೋಚನೆಗಳು ಪೂರ್ವಸಂಸ್ಕಾರದ ವಾಸನೆಗಳಿಂದ ಪ್ರಚೋದಿತ ವಾಗುತ್ತವೆ. ಜೀವನ್ಮುಕ್ತನಾದರೋ ಎಲ್ಲ ಬಗೆಯ ಇಷ್ಟ ಅನಿಷ್ಟಗಳಿಂದ ಮುಕ್ತನಾಗಿರುತ್ತಾನೆ. ಆದುದರಿಂದ ಅವನಿಗೆ ತಾನು ಮಾಡುತ್ತಿರುವ ಕರ್ಮಗಳಲ್ಲಿ ಯಾವ ವೈಯಕ್ತಿಕ ಆಸಕ್ತಿಯೂ ಇರುವುದಿಲ್ಲ. ನಿದ್ರೆಯಲ್ಲಿ ಸಂಚರಿಸುವವನಂತೆ ಅವನು ಕೆಲಸಗಳನ್ನು ಮಾಡುತ್ತಿರುತ್ತಾನೆ, ಏನೋ ಮಾಡುತ್ತಿದ್ದೇನೆ ಎಂಬ ಅರಿವೂ ಅವನಿಗಿರುವುದಿಲ್ಲ. ಅವನು ವೈಭವದಲ್ಲಿ ಓಲಾಡುತ್ತಿರುವಂತೆ ತೋರಬಹುದು. ಆದರೆ ಒಂದು ಕ್ಷಣದಲ್ಲಿ ಎಲ್ಲವನ್ನೂ ತೊರೆದು ಹೊರಟುಬಿಡುತ್ತಾನೆ. ಶಿರ್ಡಿಸಾಯಿಬಾಬಾ ಅವರಂತೆ ಸಿಟ್ಟಿಗೆದ್ದು ಉಗ್ರವಾಗಿ ಆಗಾಗ ವರ್ತಿಸಬಹುದು (ಅಥವಾ ಉಪಾಸನಿ ಬಾಬಾರಂತೆ) ಆದರೆ ಅವನಿಗೆ ಯಾವ ವೈಯಕ್ತಿಕ ಅಪೇಕ್ಷೆಯೂ ಇರುವುದಿಲ್ಲ. ಈ ಕಾರಣದಿಂದಲೇ ಜೀವನ್ಮುಕ್ತನ ಸ್ಥಿತಿಯನ್ನು ಗುರುತಿಸಲು ಸಾಧ್ಯವೇ ಆಗುವುದಿಲ್ಲ. ಜೀವನ್ಮುಕ್ತನ ಸ್ವರೂಪ ಇಂತಹ ವರ್ತನೆಗಳಿಗೆ ವಿರುದ್ಧವೇ ಆಗಿರುತ್ತದೆ.



## 30. ಪ್ರಾಪಂಚಿಕ ವ್ಯಾಮೋಹವನ್ನು ತೊರೆದು ಬಿಡು.

ಮೋಕ್ಷೋ ವಿಷಯ ವೈರಸ್ಯಂ ಬಂಧೋ ವೈಷಯಿಕೋ ರಸಃ ।
ಏತಾವದೇವ ವಿಜ್ಞಾನಂ ಯಥೇಚ್ಛಸಿ ತಥಾ ಕುರು ॥ (XV-2)

ಪ್ರಾಪಂಚಿಕ ವಿಷಯಗಳ ಬಗೆಗೆ ವ್ಯಾಮೋಹವೇ ಬಂಧವನ್ನುಂಟು ಮಾಡುತ್ತದೆ. ಅವುಗಳಲ್ಲಿನ ಔದಾಸೀನ್ಯವೇ ಮುಕ್ತಿ. ಇದಿಷ್ಟೇ ವ್ಯಾವಹಾರಿಕ ಜ್ಞಾನ. ಈಗ ನಿನಗೆ ಇಚ್ಛೆಯಿದ್ದಂತೆ ನೀನು ಮಾಡಬಹುದಾಗಿದೆ.

ಪ್ರಕೃತದಲ್ಲಿ ನಮ್ಮ ನಿಜವಾದ ಸ್ವರೂಪವು, ಮಿಥ್ಯಾ ಪ್ರಪಂಚವನ್ನು ಆರೋಪಿಸಿರುವುದರಿಂದ ಮುಚ್ಚಲ್ಪಟ್ಟಿದೆ. ಈ ಪ್ರಪಂಚವು ಸ್ವಪ್ನ ಪ್ರಪಂಚದಂತೆಯೇ ಅಸತ್ಯ. ಮನಸ್ಸು ನಮ್ಮನ್ನು ಪ್ರೀತಿ, ಮಾತ್ಸರ್ಯ, ದ್ವೇಷ, ಭಯ ಮುಂತಾದ ಸಂಬಂಧಗಳಿಂದ ಪ್ರಾಪಂಚಿಕ ವಸ್ತು ವಿಷಯಗಳಿಗೆ ಕಟ್ಟಿಹಾಕಿಬಿಟ್ಟಿದೆ. ಹೀಗಾಗಿ ನಮ್ಮ ನಿಜವಾದ ಸ್ವರೂಪವೇ ನಮಗೆ ತಿಳಿದಿಲ್ಲ. ಪ್ರಾಪಂಚಿಕ ವಸ್ತುಗಳಲ್ಲಿ ನಮ್ಮ ಮನಸ್ಸು ಯಾವುದೇ ಆಸಕ್ತಿಯನ್ನು ತೊರೆದು ಬಿಟ್ಟ ಕ್ಷಣದಲ್ಲಿಯೇ ನಾವು ಯಾರು? ಎಂಬ ಅರಿವು ಮೂಡಿ, ನಮ್ಮ ಆತ್ಮದಲ್ಲಿ ಸ್ಥಿರವಾಗಿ ಬಿಡುತ್ತೇವೆ. ಆತ್ಮವು ಬೇರ್ಪಡಿಸಿಕೊಂಡು (ವಿಷಯಗಳಲ್ಲಿನ ಆಸಕ್ತಿಯಿಂದ) ಪರಿಶುದ್ಧವೂ, ಸದಾಸ್ವತಂತ್ರವೂ ಕಾಲ, ದೇಶ, ವಸ್ತುಗಳ ಬಂಧದಿಂದ ಮುಕ್ತವೂ ಆಗಿದೆ. ಇದೇ ಮುಕ್ತಿ ಅಥವಾ ಮೋಕ್ಷ. ಜೀವನ್ಮುಕ್ತನಿಂದ ಅನುಭವಿಸಲ್ಪಟ್ಟ ಅಂತಿಮ ಸತ್ಯ ಇದೇ ಆಗಿದೆ. ಒಮ್ಮೆ ನೀವು ಭ್ರಮೆಯಿಂದ ಮುಕ್ತರಾದಿರಿ ಎಂದರೆ, ಆತ್ಮನಿಷ್ಠರಾಗಿ ಇದ್ದುಬಿಡುವುದು, ಅಥವಾ 'ಪ್ರಪಂಚದಲ್ಲಿನ ಬದುಕು' ಎಂಬ ಕ್ರೀಡೆಯಲ್ಲಿ ಭಾಗವಹಿಸಬಹುದು. ನಿಮಗೆ ಇಷ್ಟಬಂದಂತೆ ಇರಿ.

## 31. ಜೀವನ್ಮುಕ್ತರು ಬಹಿರಂಗದಲ್ಲಿ ಮೂಕರಾಗಿರುತ್ತಾರೆ, ಜಡರೂ, ಆಲಸಿಗಳೂ ಆಗಿರುತ್ತಾರೆ.

ವಾಗ್ಮೀ ಪ್ರಾಜ್ಞ ಮಹೋದ್ಯೋಗಂ ಜನಂ ಮೂಕ ಜಡಾಲಸಂ ।
ಕರೋತಿ ತತ್ತ್ವಬೋಧೋಯಂ ಅತಸ್ತ್ಯಕ್ತೋ ಬುಭುಕ್ಷುಭಿಃ ॥
(XV-3)

ಈ ಅಂತಿಮ ಸತ್ಯದ ಅರಿವು ಉತ್ತಮ ವಾಗ್ಮಿಯನ್ನು ಮೂಕನನ್ನಾಗಿಯೂ, ಬುದ್ಧಿವಂತನನ್ನು ಜಡನನ್ನಾಗಿಯೂ ಕ್ರಿಯಾಶೀಲನನ್ನು ಆಲಸಿಯಾಗಿಯೂ ಮಾಡಿಬಿಡುತ್ತದೆ. ಈ ಕಾರಣದಿಂದಲೇ ಪ್ರಾಪಂಚಿಕ ಸುಖಾಪೇಕ್ಷಿಗಳು ಈ ಪರಮಸತ್ಯವನ್ನು ತಿರಸ್ಕರಿಸಿ ಬಿಡುತ್ತಾರೆ.

ಜೀವನ್ಮುಕ್ತನಾಗಿ ಪ್ರಬುದ್ಧನಾಗದಿರುವವರೆಗೂ ನೀವು ನಿಮ್ಮ ಅಲ್ಪಜ್ಞಾನವನ್ನು ಬೇರೆಯವರಲ್ಲಿ ಪ್ರಚಾರ ಮಾಡುತ್ತಾ ಅವಿಶ್ರಾಂತರಾಗಿ ಭಾಷಣಗಳನ್ನು ಬಿಗಿಯುತ್ತಾ ಇರಲು ಇಚ್ಛಿಸುತ್ತೀರಿ. (ಬುದ್ಧ ಅಥವಾ ಮಹಾವೀರರಂತೆ, ಆತ್ಮಜ್ಞಾನದ ನಂತರ ಉಪದೇಶಿಸುವುದು ಬೇರೆ ವಿಷಯ). ಆದರೆ ಒಮ್ಮೆ ನೀವು ಆತ್ಮನಿಗಿಂತ ಬೇರೆಯಾದದ್ದು ಏನೂ ಇಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳುವಿರೋ, ನಿಮ್ಮ ಈ ಜ್ಞಾನವನ್ನು ಹಂಚಿಕೊಳ್ಳಲು ಬೇರೆ ಯಾರೂ ಇರುವುದೇ ಇಲ್ಲ. ಹೀಗಾಗಿ ನೀವು ಮೂಕರೇ ಆಗಿರುತ್ತೀರಿ. ನಿಮ್ಮ ಸ್ವಪ್ನದಲ್ಲಿ ನೀವು ಸಾವಿರಾರು ಜನರಿಗೆ ಉಪನ್ಯಾಸವನ್ನು ನೀಡುತ್ತಿದ್ದರೂ, ನೀವು ಎಚ್ಚರಗೊಂಡ ಕ್ಷಣದಲ್ಲಿ ಉಪನ್ಯಾಸವನ್ನು ನಿಲ್ಲಿಸಿಬಿಡುತ್ತೀರಿ. ಮೂಕರಾಗಿಬಿಡುತ್ತೀರಿ. ಹಾಗೆಯೇ ನೀವು ಮಹಾನ್ ವಿದ್ವಾಂಸರಾಗಿದ್ದಾಗ, ನಿಮ್ಮ ಪ್ರತಿಭೆಯಿಂದ ಪ್ರಸಿದ್ಧ ವ್ಯಕ್ತಿಯಾಗಿರುವಾಗ, ಬೇರೆಯವರಿಗೆ ಬೋಧನೆ ಮಾಡುತ್ತಾ, ಗ್ರಂಥಗಳನ್ನು ರಚಿಸುತ್ತಾ ಇದ್ದಿರಿ. ನೀವು ಆತ್ಮಜ್ಞಾನಿಯಾದ ಕ್ಷಣದಲ್ಲಿಯೇ, ನಿಮ್ಮಿಂದ ಬೇರೆಯಾದ ಯಾರೂ ಇಲ್ಲ ಎಂದು ಕಂಡುಕೊಂಡ ಕೂಡಲೇ ನಿಮ್ಮ ಅಪಾರ ಜ್ಞಾನ, ವಿದ್ವತ್ತುಗಳನ್ನು ಪ್ರದರ್ಶಿಸುವ ಸಂದರ್ಭವೇ ಇರುವುದಿಲ್ಲ. ಹೀಗಾಗಿ ನೀವು ಜಡರಂತೆ, ವರ್ತಿಸ ತೊಡಗುತ್ತೀರಿ ಮತ್ತು ನಿಮ್ಮ ಜ್ಞಾನವನ್ನು ಪ್ರಕಟಿಸುವುದೇ ಇಲ್ಲ. ಹಾಗೆಯೇ ನೀವು ಹಲವಾರು ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಿರಿ. ದೇಶ ವಿದೇಶಗಳಿಗೆ ಭೇಟಿ ಕೊಡುತ್ತಿದ್ದೀರಿ. ಅಜ್ಞಾನಿಗಳನ್ನು ಉದ್ಧರಿಸಲು ಬಯಸುತ್ತಿದ್ದೀರಿ. ದುಃಖಿತರಿಗೆ ಅನಾಥರಿಗೆ ಸಾಂತ್ವನ ಹೇಳುತ್ತಿದ್ದೀರಿ. ಇದೀಗ ನೀವು ಪರಮಜ್ಞಾನಿಗಳಾಗಿದ್ದೀರಿ; ಅಜ್ಞಾನಿಗಳು, ದುಃಖಿತರು ಎಂಬ ಬೇರೆ ಯಾರು ಇದ್ದಾರೆ? ನಿಮ್ಮ ಸಹಾಯ ಬೇಕಾಗಿರುವುದಾದರೂ ಯಾರಿಗೆ? ಈಗ ನೀವು ಎಲ್ಲ ಚಟುವಟಿಕೆಯನ್ನೂ ನಿಲ್ಲಿಸಿಬಿಡುತ್ತೀರಿ. ಆಲಸಿಯಂತೆ ಇದ್ದುಬಿಡುತ್ತೀರಿ, ಆದರೆ ನೀವು ಜ್ಞಾನಿಯಂತೆ ಪ್ರಕಾಶಿಸುತ್ತೀರಿ. ಆತ್ಮವಾಗಿ ಇದ್ದುಬಿಡುತ್ತೀರಿ. ಸಮಸ್ತ ವಿಶ್ವವೇ ನೀವಾಗಿ, ಎಲ್ಲ ಜಗನ್ನಾಟಕದ ಸೂತ್ರಧಾರಿಯಾಗಿಬಿಡುತ್ತೀರಿ.



ಪ್ರಪಂಚದಲ್ಲಿ ವೈವಿಧ್ಯಪೂರ್ಣವಾದ ವಸ್ತು ವಿಷಯಗಳು, ಇರುವುದರಿಂದ, ಅವುಗಳನ್ನು ಹೊಂದಲು ನಮಗೆ ಲೋಭ, ಅವುಗಳನ್ನು ಪ್ರದರ್ಶಿಸುವ ದುರಾಸೆ, ನಮ್ಮ ಪಾಂಡಿತ್ಯವನ್ನು ಮೆರೆಸಿ ಬೇರೆಯವರನ್ನು ಮಣಿಸುವ ಅತ್ಯುತ್ಸಾಹ. ಒಮ್ಮೆ ನಾವು ಇರುವುದೊಂದೇ ಎಂಬ ಎಚ್ಚರಕ್ಕೆ ಬಂದಾಗ, ಈ ಎಲ್ಲ ಸ್ಪರ್ಧೆಗಳು, ಪಾಂಡಿತ್ಯ ಪ್ರದರ್ಶನ, ಇತರರೊಡನೆ ನಮ್ಮ ಅಪ್ರಬುದ್ಧ ಜ್ಞಾನದ ಹಂಚಿಕೆ ಎಲ್ಲವೂ ಮಾಯವಾಗುತ್ತವೆ. ಅಂತಹ ಅರೋಚಕ ಬದುಕು ಯಾರಿಗೆ ಬೇಕಾಗಿದೆ? ಸಮಸ್ತ ಪ್ರಪಂಚವೂ ವೈವಿಧ್ಯಮಯ ಇಂದ್ರಿಯ ಭೋಗಗಳನ್ನು ಹಂಚಿಕೊಳ್ಳುವಂತೆ ನಮ್ಮನ್ನು ಕೈಬೀಸಿ ಕರೆಯುತ್ತಿರುವಾಗ? (ಆ ಸನ್ನಿವೇಶದಲ್ಲಿ ಈ ಆಹ್ವಾನ ನಮ್ಮನ್ನು ಮುಂದೆ ಬಂದೊದಗುವ ಭೀಕರ ದುರಂತಗಳನ್ನೂ ತೀವ್ರ ಪರಿಣಾಮಗಳನ್ನೂ ಮರೆಯುವಂತೆ ಮಾಡಿ ಸಂಕಷ್ಟಗಳ ಆಳವಾದ ಬಾವಿಗೆ ನಮ್ಮನ್ನು ತಳ್ಳಿಬಿಡುತ್ತದೆ). ಸುಖ – ಭೋಗಗಳ ಬೆನ್ನು ಹತ್ತಿದ ಅಂತಹ ಜನರು ಅವರ್ಣನೀಯವೂ, ಅಖಂಡವೂ, ದುಃಖ ಮಿಶ್ರಿತವಲ್ಲದ ಪರಿಶುದ್ಧವೂ ಆದ ಆನಂದದತ್ತ ತಮ್ಮನ್ನು ಕೊಂಡೊಯ್ಯುವ ಮಾರ್ಗವನ್ನು ಸ್ವೀಕರಿಸಲು ಸಿದ್ಧರಿಲ್ಲದೆ ಹೋಗುತ್ತಾರೆ ಎಂತಹ ದೌರ್ಭಾಗ್ಯ!

## 32. ರಾಗ ದ್ವೇಷ ಎರಡನ್ನೂ ತ್ಯಜಿಸಿಬಿಡು

ರಾಗದ್ವೇಷೌ ಮನೋಧರ್ಮೌ ನ ಮನಸ್ತೇ ಕದಾಚನ ।
ನಿರ್ವಿಕಲ್ಪೋऽಸಿ ಬೋಧಾತ್ಮಾ ನಿರ್ವಿಕಾರಃ ಸುಖಂ ಚರ ॥
(XV-5)

ರಾಗದ್ವೇಷ ಎರಡೂ ಮನಸ್ಸಿನ ಗುಣಗಳು. ಮನಸ್ಸು ಎಂದೂ ನಿಮಗೆ ಸೇರಿದ್ದಲ್ಲ. ನೀನು ಪರಿಶುದ್ಧ ಪ್ರಜ್ಞೆಯ ಸ್ವರೂಪ. ವಸ್ತುಗಳ ನಡುವೆ ನೀನು ಯಾವ ಪಕ್ಷಪಾತವನ್ನೂ ಮಾಡುವುದಿಲ್ಲ. ಎಲ್ಲ ವಸ್ತುಗಳೂ ಒಂದೇ ರೀತಿಯಾಗಿ ನಿನಗೆ ತೋರುವುದರಿಂದ, ಬೇರೆ ಬೇರೆ ಪ್ರತಿಕ್ರಿಯೆಗಳು ಉಂಟಾಗಲು ಸಾಧ್ಯವೇ ಇಲ್ಲದುದರಿಂದ ನೀನು ಆನಂದಮಯನೂ ಯಾವ ಬದಲಾವಣೆಯಿಲ್ಲದವನೂ ಆಗಿರುತ್ತೀಯೆ.

ಮನಸ್ಸು ತನ್ನ ಪೂರ್ವಾಗ್ರಹಗಳಿಂದ ಕೆಲವು ವಸ್ತುಗಳನ್ನು ದ್ವೇಷಿಸುತ್ತದೆ, ಮತ್ತೆ ಕೆಲವನ್ನು ಪ್ರೀತಿಸುತ್ತದೆ. ಅದು ಇಷ್ಟ ಅನಿಷ್ಟಗಳನ್ನು ಬೆಳೆಸಿಕೊಳ್ಳುತ್ತದೆ. ಕಣ್ಣು, ಕಿವಿ ಮುಂತಾದವುಗಳಂತೆ ಮನಸ್ಸು ಒಂದು

ಅಂಗವಲ್ಲ. ವಸ್ತುಗಳಿಗೆ ಸಂಬಂಧ ಪಟ್ಟಂತೆ ಆಲೋಚನೆಗಳ ಸರಣಿಗೆ ಕೊಟ್ಟ ಹೆಸರೇ 'ಮನಸ್ಸು'. ಅದರ ತೀರ್ಮಾನಗಳು ವ್ಯಕ್ತಿನಿಷ್ಠ ಮತ್ತು ವಸ್ತುಗಳ ಅಂತರ್ಗತ ಸ್ವಭಾವಕ್ಕೆ ಸಂಬಂಧಪಡ ಬೇಕಾದದ್ದಿಲ್ಲ. ನೀವು ಇಷ್ಟಪಡುವ ವಸ್ತುಗಳನ್ನು ನಾನು ಇಷ್ಟಪಡದಿರಬಹುದು. ಈ ತೀರ್ಮಾನಗಳು ವಸ್ತುನಿಷ್ಠವಲ್ಲದುದರಿಂದ, ದೋಷರಹಿತವಾಗಿರ ಬೇಕಾಗಿಲ್ಲವಾದುದರಿಂದ ದುಃಖ ಸಂಕಟಗಳನ್ನು ಉಂಟು ಮಾಡುತ್ತವೆ. ಅವುಗಳ ವಿಷಯದಲ್ಲಿ ಸತ್ಯವಾದದ್ದು ಏನೂ ಇಲ್ಲ. ವಸ್ತುಗಳೇ ಬರಿಯ ಆಲೋಚನೆಗಳು, ಹಾಗೂ ಅವುಗಳಿಂದ ಉಂಟಾಗುವ ರಾಗ ದ್ವೇಷಗಳೂ ಸಹ ಆಲೋಚನೆಗಳೇ. ಈ ಆಲೋಚನೆ ಎಂಬುದು ಮನಸ್ಸಿನ ಒಂದು ಗುಣ. ಮನಸ್ಸು ಎಂಬ ಹೆಸರಿನ ನಿರ್ದಿಷ್ಟ ಇಂದ್ರಿಯವೇ ಇಲ್ಲವೆಂದಮೇಲೆ, ಸಂತೋಷ – ದುಃಖ ಎಂಬ ಭಾವನೆಗಳೂ ಇಲ್ಲವೇ ಇಲ್ಲ. ಮನಸ್ಸು ಎಂಬುದೇ ನಿಜವಾಗಿ ಇಲ್ಲದ ಮೇಲೆ ಮನಸ್ಸನ್ನು ನಾನು ಹೊಂದಿದ್ದೇನೆ, ಅದು ನನ್ನ ಸ್ವಂತದ್ದು ಎಂದು ಹೇಗೆ ತಾನೇ ಹೇಳಬಲ್ಲಿರಿ? ಮನಸ್ಸು ಪ್ರಜ್ಞೆಯ ಪ್ರತಿಫಲನ ಮಾತ್ರ. ನೀವು ನೋಡುತ್ತಿರುವ ಮೇಜು, ಬಟ್ಟಲು, ನಿಮ್ಮ ಮಗ, ನೀವು ನಿಮ್ಮ ಶತ್ರು ಎಂದು ಭಾವಿಸಿರುವ ನೆರೆಯವ, ಎಲ್ಲವೂ, ಎಲ್ಲರೂ ಬದಲಾಯಿಸಬಹುದು. ನೋಟಕನಾದ ನೀವು ಮಾತ್ರ ನೀವೇ ಆಗಿರುತ್ತೀರಿ. ಒಂದು ನಾಟಕದಲ್ಲಿ ನೀವು ಪೋರ್ಷಿಯಾಳ ಪ್ರಿಯಕರನಾದ ಆಂಟೋನಿಯೋ ಆಗಿ ಹಾಗೆಯೇ ರಕ್ತಪಿಪಾಸಿಯಾದ ಬೇಟೆನಾಯಿಯಂತೆ, ಆಂಟೋನಿಯೋನ ರಕ್ತಕ್ಕೆ ನಾಲಗೆ ಚಾಚಿಕೊಂಡಿರುವ ಶೈಲಾಕ್ ಆಗಿಯೂ ಅದೇ ಸಿನೆಮಾದಲ್ಲಿ ಪಾತ್ರ ವಹಿಸಿದ್ದರೆ (ದ್ವಿಪಾತ್ರ) ಯಾರನ್ನು ನೀವು ಪ್ರೀತಿಸುತ್ತೀರಿ ಅಥವಾ ಯಾರನ್ನು ದ್ವೇಷಿಸುತ್ತೀರಿ? ಅದರಲ್ಲೂ ನೀವು ಅದೇ ಸಿನಿಮಾದ ಪ್ರೇಕ್ಷಕನಾಗಿದ್ದರೆ! ನಿಮ್ಮ ಪ್ರತಿಕ್ರಿಯೆಯಲ್ಲಿ ಯಾವ ಬದಲಾವಣೆಯೂ ಇರಲು ಸಾಧ್ಯವಿಲ್ಲ. ನೀವು ಶೈಲಾಕ್ ಹಾಗೂ ಆಂಟೋನಿಯೋ ಇಬ್ಬರನ್ನೂ ಒಂದೇ ರೀತಿಯಾಗಿ ಪರಿಭಾವಿಸುತ್ತೀರಿ – ಏಕೆಂದರೆ ಈ ಎರಡು ಪಾತ್ರಗಳೂ ನೀವೇ ಆಗಿದ್ದೀರಿ. ಆತ್ಮವಾಗಿ ನೀವೇ ಎಲ್ಲವೂ ಆಗಿದ್ದೀರಿ. ಒಬ್ಬನನ್ನು ಪ್ರೀತಿಸುವ ಮತ್ತೊಬ್ಬವನ್ನು ದ್ವೇಷಿಸುವ ಪ್ರಶ್ನೆಯಾದರೂ ಎಲ್ಲಿ? ಎಲ್ಲ ಕಾಲದಲ್ಲೂ ನೀವು ಸಂತೋಷವಾಗಿಯೇ ಇರುತ್ತೀರಿ. ಪ್ರಪಂಚದ ವೈವಿಧ್ಯ ವೈರುಧ್ಯಗಳು ನಿಮ್ಮಲ್ಲಿ ವಿಭಿನ್ನ ಪ್ರತಿಕ್ರಿಯೆಗಳನ್ನು ಉಂಟುಮಾಡಲಾರವು. ನೀವು ತಟಸ್ಥರಾಗಿಬಿಟ್ಟಿರುತ್ತೀರಿ.



ಕಾಲ್ಪನಿಕವಾದ ವಿವಿಧ ಪಾತ್ರಗಳನ್ನು ನೋಡುತ್ತಿರುವ ಏಕಮಾತ್ರ ಪ್ರಜ್ಞೆಯೇ ನೀವಾಗಿದ್ದೀರಿ. ಒಬ್ಬನನ್ನು ಕಂಡಾಗ ತಿರಸ್ಕಾರ – ದ್ವೇಷವಾಗಲೀ ಮತ್ತೊಬ್ಬನನ್ನು ಕಂಡಾಗ ಆಕರ್ಷಣೆ – ಪ್ರೀತಿಗಳಾಗಲೀ ಉದ್ಭವಿಸುವುದೇ ಇಲ್ಲ. ಎಲ್ಲರ ಬಗೆಗೂ ಸಮಾನ ದೃಷ್ಟಿ ನಿಮ್ಮದಾಗಿರುತ್ತದೆ.

### 33. ಎಲ್ಲರನ್ನೂ ನಿನ್ನಲ್ಲಿ – ನಿನ್ನನ್ನು ಎಲ್ಲರಲ್ಲೂ ಕಾಣು ।

ಸರ್ವ ಭೂತೇಷು ಚಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ವಿಜ್ಞಾಯ ನಿರಹಂಕಾರೋ ನಿರ್ಮಮಸ್ತ್ವಂ ಸುಖೀ ಭವ ॥ (XV-6)

ಎಲ್ಲ ವಸ್ತು ವಿಷಯಗಳನ್ನು ನಿನ್ನಲ್ಲಿ ಹಾಗೂ ನಿನ್ನನ್ನು ಎಲ್ಲ ವಸ್ತುಗಳಲ್ಲಿ ಕಾಣುವುದರಿಂದ ನೀನು ಅಹಂಕಾರ ರಹಿತನಾಗಿ ಇರುತ್ತೀಯೆ. ನನ್ನಿಂದ ಎಂಬ ಮಮಕಾರದಿಂದ ದೂರವಾಗುತ್ತೀಯೆ. ಹೀಗೆ ಸಂತೋಷವಾಗಿರು.

ಸ್ವಪ್ನ ಪ್ರಪಂಚ ನಿಮ್ಮ ಮನಸ್ಸಿನಿಂದಲೇ ಹೊರ ಹೊಮ್ಮಿದ ಹಾಗೆ ಸಮಸ್ತ ಪ್ರಪಂಚವೂ ಆತ್ಮನಿಂದಲೇ ಉದ್ಧವಿಸಿದೆ. ನೀವು ನಿಮಿತ್ತ ಕಾರಣ. ಮಣ್ಣು; ಮಡಕೆಗೆ ನಿಮಿತ್ತ ಕಾರಣವಾದಂತೆ, ಪ್ರಪಂಚದ ಎಲ್ಲ ವಸ್ತುಗಳೂ ನಿಮ್ಮಿಂದಲೇ ನಿರ್ಮಿತವಾಗಿವೆ. ಅವು ವಿಶ್ವಾತ್ಮನ ಮಾನಸಿಕ ಕಲ್ಪನೆಗಳೇ ಆಗಿವೆ.

ಒಂದು ವರ್ಣಚಿತ್ರವನ್ನು ರಚಿಸುವ ಮೊದಲು, ಅದು ಎಲ್ಲಿತ್ತು? ಅದು ಇದ್ದುದು ಚಿತ್ರಕಾರನ ಮನಸ್ಸಿನಲ್ಲಿ, ಹಾಗೆಯೇ ನಿಮ್ಮ ಸ್ವಪ್ನದ ಮೊದಲು, ಕನಸಿನ ವಸ್ತುಗಳೆಲ್ಲವೂ ನಿಮ್ಮ ಮನಸ್ಸಿನಲ್ಲೇ ಇದ್ದವು. ಎಚ್ಚರದ ಬದುಕು, ಇನ್ನೊಂದು ಕನಸು ಅಷ್ಟೇ. ಈ ಜಗತ್ತು ಹಾಗೂ ಅದರ ವಸ್ತುಗಳು ಅವು ಹೊರಹೊಮ್ಮುವ ಮೊದಲು ನಿಮ್ಮಲ್ಲೇ ಇದ್ದವು. ಹಾಗೂ ನೀವು ಗಾಢ ನಿದ್ರೆಯಲ್ಲಿ ಇದ್ದಾಗ, ಜಗತ್ತು ನಿಮ್ಮ ಪಾಲಿಗೆ ಇರಲೇ ಇಲ್ಲ. ನೀವು ಎಚ್ಚರಗೊಂಡಾಗ ಮಾತ್ರ, 'ನಾನು' ಎಂಬುದು ಎದ್ದುಕೊಂಡಾಗ, ನಿಧಾನವಾಗಿ ಸಕಲ ಜಗತ್ತು ಹಾಗೂ ಅದರ ಎಲ್ಲ ವಸ್ತುಗಳೂ ಗೋಚರವಾಗುತ್ತವೆ. ಹಾಗೆ ಜಗತ್ತು ನಿಮ್ಮ 'ಅಹಂ' ನಲ್ಲಿ ಅಡಗಿತ್ತು.

ಒಬ್ಬ ಕವಿರಾಜನಿದ್ದ. ಒಂದು ದಿನ ಅವನು ತನ್ನ ಶಯ್ಯಾಗೃಹಕ್ಕೆ ಹಿಂತಿರುಗಿದಾಗ, ಅಲ್ಲಿ ಒಬ್ಬ ದರೋಡೆಕೋರನಿದ್ದ. ರಾಜನನ್ನು ಕಾಣುತ್ತಲೇ ಭಯಗೊಂಡು ರಾಜನ ಹಾಸಿಗೆಯ ಕೆಳಗೆ ಬಚ್ಚಿಟ್ಟುಕೊಂಡು

ಬಿಟ್ಟ. ರಾಜನು ಒಳಗೆ ಬರುತ್ತಿದ್ದಾಗ ಕುದುರೆಗಳು, ಆನೆಗಳು ಸಾಲುಸಾಲಾಗಿ ಅವನಿಗೆ ನಮಸ್ಕರಿಸುತ್ತಿರುವುದನ್ನು ಕಂಡ. ಕೂಡಲೆ ರಾಜನು ಹರ್ಷಗೊಂಡು ಮೂರು ಸಾಲಿನ ಕವನವೊಂದನ್ನು ನಿಂತ ನಿಂತ ಹಾಗೇ ರಚಿಸಿಬಿಟ್ಟ. ಅದರ ಅರ್ಥ ಹೀಗಿತ್ತು : "ನೋಡು ಆನೆಗಳೆಲ್ಲ ಘೀಂಕರಿಸುತ್ತಿವೆ. ಕುದುರೆಗಳು ಕೆನೆಯುತ್ತಿವೆ. ಸುಂದರ ರಮಣಿಯರು ನನ್ನನ್ನು ಸ್ವಾಗತಿಸುತ್ತಿದ್ದಾರೆ." ಆ ಕವನಕ್ಕೆ ಇನ್ನೊಂದು ಸಾಲು ಅಗತ್ಯವಾಗಿತ್ತು. ದರೋಡೆಕೋರನೂ ಒಬ್ಬ ಕವಿಯೇ! ತಾನೂ ಮೈಮರೆತು ಕಡೆಯ ಸಾಲನ್ನು ರಚಿಸಿ ಗಟ್ಟಿಯಾಗಿ ಕೂಗಿದನು : "ಒಮ್ಮೆ ನೀನು ಕಣ್ಣು ಮುಚ್ಚಿದೆಯೆಂದರೆ, ಈ ಯಾವ ವಸ್ತುಗಳೂ ಇಲ್ಲಿರುವುದಿಲ್ಲ." "ಸಮ್ಮೀಲಿತೇ ನಯನ್ಯೋ : ನಹಿ ಕಿಂಚಿದಸ್ತಿ" ವೇದಾಂತದಲ್ಲಿ ಇದನ್ನು "ದೃಷ್ಟಿ – ಸೃಷ್ಟಿವಾದ" ಎಂದು ಕರೆಯಲಾಗಿದೆ. ನೀವು ಕಣ್ಣುಗಳನ್ನು ತೆರೆದಾಗ ಮಾತ್ರ ಪ್ರಪಂಚವು ಕಂಡು ಬರುತ್ತದೆ. ಎಂದರೆ ನೀವು ನೋಡಿದಾಗ, ಅವುಗಳನ್ನು ಸೃಷ್ಟಿಸುತ್ತೀರಿ. ಅದು ಮೊದಲೇ ಇದ್ದಿತು ಎಂದಲ್ಲ. ಈಗ ತಾನೇ ನೋಡಿದಿರಿ ಎಂದೂ ಅಲ್ಲ. ರಾಜನಿಗೆ ಪರಮ ಸಂತೋಷವಾಗಿ ಕವಿ – ಕಳ್ಳನನ್ನು ವಿಪುಲವಾದ ಹಣದಿಂದ ಬಹುಮಾನಿಸಿದನು !

ಭಕ್ತಿ ಮಾರ್ಗದಲ್ಲಿ ಸಹ, "ಶ್ರೀಮನ್ ನಾರಾಯಣನನ್ನು ಎಲ್ಲ ಜೀವಿಗಳಲ್ಲೂ ಕಾಣಬೇಕು. "ವಾಸುದೇವಃ ಸರ್ವಮಿತಿ ಸಾ ಮಹಾತ್ಮಾ ಸುದುರ್ಲಭಃ" ಭಗವಂತನನ್ನು ಎಲ್ಲರಲ್ಲಿಯೂ ಕಾಣುವಂತಹ ಭಕ್ತನು ಅತಿ ದುರ್ಲಭ. ಭಾಗವತದಲ್ಲಿಯೂ ಹೀಗೆಯೇ ಹೇಳಲಾಗಿದೆ. "ಭಗವಂತನು ಕೃಷ್ಣನಾಗಿ ವಿಶ್ವರೂಪವನ್ನು ತೋರಿದನು. ಸಮಸ್ತ ವಿಶ್ವವೂ ಅವನಲ್ಲಿಯೇ ತೋರಿಬಂದಿತು– ಆಕಾಶ, ಸೂರ್ಯ, ಚಂದ್ರ ಎಲ್ಲವೂ ಅಲ್ಲಿಯೇ ಇದ್ದಿತು. (ಭಗವದ್ಗೀತೆಯಲ್ಲೂ ಹೀಗೆಯೇ ಹೇಳಿದೆ).

ಸಮಸ್ತ ವಸ್ತುಗಳಲ್ಲೂ, ಸಮಸ್ತ ಜೀವಿಗಳಲ್ಲೂ ತನ್ನನ್ನೇ ಗುರುತಿಸಿಕೊಳ್ಳುವ ಚಿಂತನೆ ಒಮ್ಮೆ ಮೂಡಿತೆಂದರೆ, ಶತ್ರುವೆಲ್ಲಿದ್ದಾನೆ? ಮಿತ್ರನೆಲ್ಲಿದ್ದಾನೆ? ಇಬ್ಬರಲ್ಲೂ ಯಾವ ತಾರತಮ್ಯವೂ ಇಲ್ಲ. ಎಲ್ಲರನ್ನೂ ನೀವು ಸಮದೃಷ್ಟಿಯಿಂದಲೇ ಕಾಣುತ್ತೀರಿ. ದ್ವೇಷ, ಭಯ, ಕ್ರೋಧ ಯಾವುದೂ ಇರುವುದಿಲ್ಲ. ಏಕೆಂದರೆ ಎಲ್ಲ ದೇಹವೂ ನಿಮ್ಮದೇ ಆಗಿರುತ್ತದೆ. ಯಾವ ಪರಸ್ಪರ ಪೈಪೋಟಿಯೂ ಇರುವುದಿಲ್ಲ. ಒಂದೇ ದೇಹದೊಂದಿಗೆ ನಿಮ್ಮನ್ನು ಗುರುತಿಸಿಕೊಂಡು ಉಳಿದೆಲ್ಲ ದೇಹಗಳೂ



ಬೇರೆ ಬೇರೆಯವರದು ಎಂಬ ಪ್ರಶ್ನೆಯೇ ಏಳುವುದಿಲ್ಲ. 'ನಾನು' ಎಂಬುದೇ ಇಲ್ಲದಿರುವಾಗ, ಇದು ನನ್ನದು ಅದು ನಿನ್ನದು, ಎಂಬ ಪ್ರತ್ಯೇಕ ಸ್ವಾಮ್ಯವೂ ಇರುವುದಿಲ್ಲ. ನಾನು – ನನ್ನದು (ಅಹಂಕಾರ–ಮಮಕಾರ) ಅಳಿದುಹೋಗುತ್ತದೆ. ಇದೇ ಮೋಕ್ಷ. ಇದೇ ಅಂತಿಮ ಆನಂದ. ಆದುದರಿಂದ ಎಲ್ಲರನ್ನೂ ದೈವ ಸ್ವರೂಪರೇ ಎಂದು ಭಾವಿಸುವುದನ್ನು ಅಭ್ಯಾಸ ಮಾಡಿ. ಬೀದಿಯ ಭಿಕ್ಷುಕನೂ ದೇವರೇ. (ಇದು ಮನಸ್ಸಿನ ಸ್ತರದಲ್ಲಿ ಮಾತ್ರ!) ಈ ಭಾವವು ಪ್ರಾಮಾಣಿಕವೂ ಹೃತ್ಪೂರ್ವಕವೂ ದೃಢವಾಗಿಯೂ ವಿಶ್ವಾಸಕ್ಕೆ ಬಂದಾಗ ಅದು ಮುಕ್ತಿಯ ಕಡೆಗೆ ನಿಮ್ಮನ್ನು ಕರೆದೊಯ್ಯುತ್ತದೆ. ಇದು ಜೀವನ್ಮುಕ್ತನಾಗುವ– ಒಂದು ಮಾರ್ಗ.

## 34. ನೀವು ಪರಿಶುದ್ಧ ಪ್ರಜ್ಞೆಯಾದ ಆತ್ಮವೇ.

ಶ್ರದ್ಧಸ್ವ ತಾತ, ಶ್ರದ್ಧಸ್ವ ನಾತ್ರ ಮೋಹಂ ಕುರುಷ್ವ ಭೋಃ।
ಜ್ಞಾನ ಸ್ವರೂಪೋ ಭಗವಾನ್ ಆತ್ಮಾ ತ್ವಂ ಪ್ರಕೃತೇಃಪರಃ॥ (XV-8)

ದಯುಮಾಡಿ ನನ್ನ ಮಾತುಗಳಲ್ಲಿ ನಂಬಿಕೆ ಇಡು. ನನ್ನ ಮಾತುಗಳನ್ನು ನಂಬು. ಅಜ್ಞಾನದಿಂದ ಭ್ರಮೆಗೆ ಒಳಗಾಗಬೇಡ. ನೀನು ಪರಿಶುದ್ಧ ಪ್ರಜ್ಞೆ (ಜ್ಞಾನ)ಯೇ ಆಗಿದ್ದೀಯೆ, ಪರಮ ಆತ್ಮವೇ ನೀನು, ಪ್ರಥಮ ಸೃಷ್ಟಿಯ ಆತ್ಮದ ಆಚೆಯವನು. ನೀನು ದಿವ್ಯತೆಗೂ ವ್ಯಕ್ತಿತ್ವಕ್ಕೂ ಮೀರಿದವನು.

ಇಲ್ಲಿ ಅಜ್ಞಾನಿಗಳ ಬಗೆಗೆ ಅಷ್ಟಾವಕ್ರರ ನಿರ್ಮಲ ಕಾರುಣ್ಯ, ಶಬ್ದಗಳಲ್ಲಿ ಸುರಿಯುತ್ತಿದೆ. ಅವರನ್ನು ಅಪನಂಬಿಕೆಯಿಂದ ಕಾಣುವ ತಪ್ಪನ್ನು ನೀವು ಮಾಡುವುದು ಅವರಿಗೆ ಬೇಕಿಲ್ಲ. ಇದು ಸಾವು ಬದುಕಿನ ಪ್ರಶ್ನೆ. ಈ ಬೋಧನೆಗಳು ನಿಮ್ಮನ್ನು ವಿಳಂಬವಿಲ್ಲದೆ ಅಮರ್ತ್ಯರನ್ನಾಗಿ ಮಾಡುತ್ತವೆ. ನೀವು ಪರಿಶುದ್ಧ ಪ್ರಜ್ಞೆ, (ಅರಿವು)–ಸದಾ ನಿಮ್ಮ ಇರವಿನ ಬಗೆಗೆ ಅರಿವಿರಲಿ. ನಿಮಗಿಂತ ಬೇರೆಯಾದ ಯಾವ ವಸ್ತುಗಳೂ ಇಲ್ಲ. ನೀವು ಪರಮೋಚ್ಚ ಸ್ವರೂಪಿ. ನೀವು 'ಭಗವಾನ್' ಹೌದು. ಷಡ್ಗುಣ ಸಂಪನ್ನರು.

ನೀವು ಆತ್ಮವೇ. ಪ್ರಕೃತಿಯು ಪರಮಾತ್ಮನ ಶಕ್ತಿಯೇ. ನೀವು ಪ್ರಕೃತಿಯನ್ನೂ ಮೀರಿದವರು. ಇದು ಅಷ್ಟಾವಕ್ರರ ನೇರ ಮಾತು.

ಗುರುವಿನ ಉಪದೇಶದಲ್ಲಿ ಶ್ರದ್ಧೆಯುಂಟಾಗಬೇಕಾದರೆ ಹಾಗೆಯೇ ಶಾಸ್ತ್ರಗಳಲ್ಲಿ – ಅವು ಸತ್ಯವನ್ನೇ ಸಾರುತ್ತವೆಯಾದ್ದರಿಂದಲೇ ಶ್ರದ್ಧಾ ಎಂದು ಕರೆಯಲ್ಪಟ್ಟಿದೆ. ಭಗವದ್ಗೀತೆಯ 17ನೇಯ ಅಧ್ಯಾಯ ಪೂರ್ತಾ 'ಶ್ರದ್ಧೆ'ಯನ್ನು ವಿವರಿಸಲಾಗಿದೆ.

## 35. ಧ್ಯಾನವನ್ನೂ ತೊರೆದುಬಿಡಿ.

ತ್ಯಜೈವ ಧ್ಯಾನಂ ಸರ್ವತ್ರ ಮಾ ಕಿಂಚಿತ್ ಹೃದಿಧಾರಯ ।
ಆತ್ಮಾ ತ್ವಂ ಮುಕ್ತ ಏವಾಸಿ ಕಿಂ ವಿಮೃಶ್ಯ ಕರಿಷ್ಯಸಿ ॥ (XV-20)

ಯಾವುದೇ ವಸ್ತುವಿನ ಮೇಲೆ ಯಾವುದೇ ಸ್ಥಳದಲ್ಲಿ ಧ್ಯಾನವನ್ನು ತೊರೆದು ಬಿಡಿ. ನಿಮ್ಮ ಹೃದಯದಲ್ಲಿ ಯಾವುದನ್ನೂ ಹಿಡಿದುಕೊಳ್ಳಲು ಯತ್ನಿಸಬೇಡಿ. ಆತ್ಮವೇ ನೀವಾಗಿರುವುದರಿಂದ ನೀವು ಸದಾ ಮುಕ್ತರೇ ಆಗಿದ್ದೀರಿ. ಅದನ್ನು ಕುರಿತು ವಿಚಾರ ಮಾಡುವುದಾದರೂ ಯಾವ ಪುರುಷಾರ್ಥಕ್ಕೆ !

ಯಾವಾಗಲೂ ಬದ್ಧರಾಗಿ ಇರದ, ಸದಾ ಮುಕ್ತರಾದ, ಬದಲಾಗದ, ನಿರ್ವಿಕಾರದ, ಮರಣರಹಿತವಾದ ಅಮರ ಆತ್ಮವೇ ನೀವು. ಆತ್ಮವಲ್ಲದೇ ಬೇರೊಂದು ವಸ್ತುವೇ ಇಲ್ಲ. ಧ್ಯಾನ ಮಾಡುವವ, ಧ್ಯಾನ, ಧ್ಯಾನಕ್ಕೆ ಯಾವುದು ವಸ್ತುವಾಗಿದೆಯೋ ಅದು, ಎಂಬ ತ್ರಿಪುಟಿಯು ಒಂದೇ ಆಗಿ ಯಾವ ವ್ಯತ್ಯಾಸವೂ ಇಲ್ಲದಂತಾಗುವುದು ಇಲ್ಲಿಯೇ.(ಧ್ಯಾತೃ–ಧ್ಯಾನ–ಧ್ಯೇಯ) ನಿಮ್ಮ ಆತ್ಮದ ನೇರವಾದ ಅನುಭವ ಒಮ್ಮೆ ಆಯಿತೆಂದರೆ, ಉಳಿದಿರುವುದಾದರೂ ಏನು? ಆತ್ಮವು ಹಿಡಿದುಕೊಳ್ಳಲು ಬರುವಂತಹುದಲ್ಲ. ಎಂದ ಮೇಲೆ ಧ್ಯಾನ ಮಾಡುವುದಾದರೂ ಏಕೆ? ಹಿಡಿದುಕೊಳ್ಳಲು ಪ್ರಯತ್ನಿಸುವುದಾದರೂ ಏಕೆ? ನಿಮ್ಮ ಸಹಜ ಸ್ವರೂಪವೇ ಆದ ಸದ್ವಸ್ತುವಿನ ಎಚ್ಚರವನ್ನು (ಅರಿವನ್ನು ಆಗಲೇ ಪಡೆದಿರುವಿರಿ. ನಿಮಗೆ ಅರಿವುಂಟು ಮಾಡಲು (ಎಚ್ಚರಗೊಳಿಸಲು) ಇನ್ನು ಯಾವ ಸಾಧನಬೇಕು?

ಆತ್ಮವು ಸರ್ವವ್ಯಾಪಿ. ಹೃದಯ ಕೇಂದ್ರದಲ್ಲಿ ಆತ್ಮದ ಮೇಲೆ ಕೇಂದ್ರೀಕರಿಸುವ ಸಾಧನೆಯ (ಪ್ರಯತ್ನ) ಪ್ರಶ್ನೆ ಎಲ್ಲಿ ಬಂತು? ಅನಂತವೇ ಆದ ನಿಮ್ಮನ್ನೇ ನೀವು ಹಿಡಿಯಬಲ್ಲಿರಾ? ನೀವು ಹೇಗಿದ್ದೀರೋ ಹಾಗೆ ಇದ್ದು ಬಿಡಿ.



## 36. ಎಲ್ಲವನ್ನೂ ಮರೆತುಬಿಡಿ

**ಆಚಕ್ಷ್ವ ಶೃಣು ವಾ ತಾತ ನಾನಾ ಶಾಸ್ತ್ರಾಣ್ಯನೇಕಶಃ ।**
**ತಥಾಪಿ ನ ತವ ಸ್ವಾಸ್ಥ್ಯಂ ಸರ್ವವಿಸ್ಮರಣಾದೃತೆ ॥ (XVI-1)**

ಪ್ರಿಯನೇ, ನೀನು ಗ್ರಂಥಗಳನ್ನು ಅಭ್ಯಾಸ ಮಾಡಬಹುದು, ಹಲವಾರು ಪ್ರವಚನಗಳನ್ನು ಮತ್ತೆ ಮತ್ತೆ ನಾನಾ ರೀತಿಯಲ್ಲಿ ಕೇಳಬಹುದು. ಅವೆಲ್ಲವನ್ನೂ ಸಂಪೂರ್ಣವಾಗಿ ಮರೆತಲ್ಲದೇ ನಿನ್ನ ಸಹಜ ಸ್ವರೂಪದಲ್ಲಿ ನೆಲೆಗೊಳ್ಳಲಾರೆ.

ಅಧ್ಯಾತ್ಮ ಪಥದಲ್ಲಿ ನೀವು ಮುಂದುವರೆಯಬೇಕಾದರೆ, ನೀವು ಪುಸ್ತಕಗಳನ್ನು ಓದಿ ಓದಿ ಪಡೆದುಕೊಂಡ ಪೂರ್ವಗ್ರಹದ ಅಭಿಪ್ರಾಯಗಳನ್ನೆಲ್ಲ ಅಳಿಸಿ ಹಾಕಬೇಕು. ನಿಮ್ಮ ಮನಸ್ಸನ್ನು ಅನಿರ್ಬಂಧವಾಗಿರಿಸಿಕೊಳ್ಳಬೇಕು (ಮುಕ್ತವಾಗಿ). ಒಬ್ಬ ತತ್ತ್ವ ಶಾಸ್ತ್ರದ ಪ್ರಾಧ್ಯಾಪಕರು ಒಮ್ಮೆ ಒಬ್ಬ ಸಂತರ ಬಳಿಗೆ ಹೋಗಿ ದೇವರನ್ನು ಸಮೀಪಿಸುವುದು ಹೇಗೆ? ಎಂದು ಪ್ರಶ್ನಿಸಿದರು. ಆ ಸಂತರು ಒಳಗೆ ಹೋಗಿ ಒಂದು ಬಟ್ಟಲು ಚಹಾ ಹಾಗೂ ಚಹಾ ತುಂಬಿದ ಒಂದು ಕೆಟಲ್ ತಂದರು. ಆಗಲೇ ಭರ್ತಿಯಾಗಿದ್ದ ಬಟ್ಟಲಿಗೆ ಕೆಟಲ್‌ನಿಂದ ಚಹಾ ಸುರಿಯಲು ತೊಡಗಿದರು. ಚಹಾ ತುಂಬಿ ತುಳುಕಹತ್ತಿತ್ತು. ಪ್ರೊಫೆಸರ್ ಸಾಹೇಬರು ಸಂತರನ್ನು ಕುರಿತು– "ಬಟ್ಟಲಲ್ಲಿ ಮೊದಲೇ ತುಂಬಿದ ಚಹಾ ಖಾಲಿ ಮಾಡಿದಲ್ಲದೆ ಮತ್ತಷ್ಟು ಸುರಿಯುವುದರಿಂದ ಏನು ಪ್ರಯೋಜನ ಸ್ವಾಮಿ? ಅದೆಲ್ಲ ಚೆಲ್ಲಿ ಹೋಗುವುದಿಲ್ಲವೆ?" ಎಂದರು. ಸಂತರು ಮಂದಹಾಸ ಬೀರುತ್ತಾ ಪ್ರೋಫೆಸರ್‌ಅನ್ನು ನೋಡಿದರು. ಅವರೆಂದರು – "ಇದು ನಿಮಗೂ ಸಹ ಅನ್ವಯಿಸುವುದಿಲ್ಲವೇ? ನಿಮ್ಮ ಮೆದುಳಿನಲ್ಲಿ ಈಗಾಗಲೇ ತುಂಬಿರುವ ಕಸವನ್ನು ಖಾಲಿ ಮಾಡಿದಲ್ಲದೆ, ಅದರಲ್ಲಿ ಯಾವ ಹೊಸ ಜ್ಞಾನವನ್ನು ನಾನು ತುಂಬಿಸಲಿ ಸ್ವಾಮಿ?"

ನೀವು ಓದಿರುವ ಎಲ್ಲ ಶಾಸ್ತ್ರಗಳನ್ನೂ ನೀವು ಮರೆತಲ್ಲದೇ ಆಧ್ಯಾತ್ಮ ಪಥದಲ್ಲಿ ಮುಂದುವರೆಯಲು ಸಾಧ್ಯವೇ ಇಲ್ಲ. ಆತ್ಮನಿಷ್ಠರಾಗಿ ಇರುವುದೂ ಅಸಾಧ್ಯ. ಆದಿ ಶಂಕರರ ವಿವೇಕ ಚೂಡಾಮಣಿಯಲ್ಲಿ ಹೀಗೆ ಹೇಳಲಾಗಿದೆ:

ಅವಿಜ್ಞಾತೇ ಪರೇತತ್ತ್ವೇ ಪರೇತತ್ತ್ವೇ ಶಾಸ್ತ್ರಾಧಿತಿಸ್ತು ನಿಷ್ಫಲಾ ।
ವಿಜ್ಞಾತೇಹಿ ಪರೇತತ್ತ್ವೇ ಶಾಸ್ತ್ರಾಧಿತಿಸ್ತು ನಿಷ್ಫಲಾ ॥

ಅಂತಿಮ ಸತ್ಯವನ್ನು ಅರಿತಲ್ಲದೇ, ಎಲ್ಲ ಶಾಸ್ತ್ರ ಗ್ರಂಥಗಳ ಓದೂ ವ್ಯರ್ಥ. ಹಾಗೆಯೇ, ಪರಮ ಸತ್ಯವನ್ನೂ ಅರಿತ ಮೇಲೆ ಎಲ್ಲ ಶಾಸ್ತ್ರಗಳ ವ್ಯಾಸಂಗವೂ ಅಪ್ರಯೋಜಕ! (ವಿ.ಚೂ.59)

ಹಲವಾರು ವ್ಯಾಖ್ಯಾನಗಳಿಂದ ವಿಚಲಿತರಾಗಿ ನಾವು ಶಬ್ದಾರಣ್ಯದಲ್ಲಿ ಸಿಲುಕಿ ಬಳಲುತ್ತೇವೆ. ಪರತತ್ತ್ವ ಎಂಬುದು ಯಾವುದು ಅದನ್ನು ಸಾಕ್ಷಾತ್ಕರಿಸಿಕೊಳ್ಳುವುದು ಹೇಗೆ? ಎಂದು ಸೂಚಿಸುವುದಷ್ಟೇ ಶಾಸ್ತ್ರ ಗ್ರಂಥಗಳ ಉದ್ದೇಶ. ಭಗವದ್ಗೀತೆಯೂ ಇದನ್ನೇ ಪುನರುಚ್ಚರಿಸುತ್ತದೆ.

**"ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ ॥"**

**(ಭ.ಗೀ. 2-46)**

**37. ಆಲಸ್ಯಧುರೀಣ ಜೀವನ್ಮುಕ್ತನು ಆಲಸಿ ಜನಗಳ ಮಧ್ಯದಲ್ಲಿ ದೊರೆಯಂತೆ ಕಾಣುತ್ತಾನೆ !**

ವ್ಯಾಪಾರೇ ಖಿದ್ಯತೇ ಯಸ್ತು ನಿಮೇಷೋನ್ಮೇಷಯೋರಪಿ ।
ತಸ್ಮಾಲಸ್ಯಧುರೀಣಸ್ಯ ಸುಖಂ ನಾನ್ಯಸ್ಯ ಕಸ್ಯಚಿತ್ ॥ (XVI-4)

ತಮ್ಮ ಕಣ್ಣರೆಪ್ಪೆಗಳನ್ನು ತೆರೆಯಲೂ, ಮುಚ್ಚಲೂ ಒಲ್ಲದ ಸಂತರು ಆಲಸಿಗಳ ನಡುವೆ ದೊರೆಯಂತೆ ಇರುತ್ತಾರೆ. ಅವರು ಎಷ್ಟು ಆನಂದವಾಗಿರುತ್ತಾರೆಂದರೆ, ಬೇರಾರೂ ಸಹ ಅವರಂತೆ ಸಂತೋಷವಾಗಿರುವುದಿಲ್ಲ. ಕಣ್ಣರೆಪ್ಪೆಗಳನ್ನು ಮಿಟಕಿಸುವಂಥ ಅನಿವಾರ್ಯ ಕಾರ್ಯಗಳನ್ನು ಮಾಡಲೂ ತಮಗೆ ಹೊರೆ ಎಂದು ಭಾವಿಸುತ್ತಾರೆ. ಆಲಸಿ ಜನಗಳ ನಡುವೆ ಅವರು ನಾಯಕರಂತೆ ತೋರುತ್ತಾರೆ. ಬಹಿರಂಗವಾಗಿ ಅವರು ಕಡುಸೋಮಾರಿಗಳಂತೆ ತೋರಿದರೂ, ಅವರು ಸಂಪೂರ್ಣ ಪ್ರಜ್ಞೆಯಿಂದಿರುತ್ತಾರೆ. ಯಾವಾಗಲೂ ಸಿದ್ಧತೆಯಿಂದಿರುತ್ತಾರೆ. ರೆಪ್ಪೆ ಮಿಟುಕಿಸುವುದೇ ಮುಂತಾದ ಸಹಜವಾದ ಕ್ರಿಯೆಗಳನ್ನು ಮಾಡುವುದೂ ಸಹ, ತಮ್ಮ ಸಹಜ ಸ್ವರೂಪವಾದ ಶುದ್ಧ ಸಾಕ್ಷಿಪ್ರಜ್ಞೆಯಿಂದ ತಮ್ಮನ್ನು ಜಾರಿಸಿಬಿಡ ಬಹುದೇನೋ ಎಂದು ಅವರು ಭಾವಿಸುವಂತೆ ತೋರುತ್ತದೆ.

ಒಮ್ಮೆ ಒಬ್ಬ ನಗ್ನ ಸಾಧುವಿದ್ದ– ಅವನು ಖಾಯಂ ಆಗಿ ಹಲವಾರು ವರ್ಷಗಳಿಂದ ಒಂದು ದೇವಾಲಯದ ಎದುರು ಮೂಲೆಯಲ್ಲಿ ಮಲಗಿ



ಇದ್ದುಬಿಟ್ಟ. ಅವನು ಎದ್ದು ನಿಂತದ್ದನ್ನೂ ಸಹ ಯಾರೂ ನೋಡಿರಲಿಲ್ಲ. ಯಾರಾದರೊಬ್ಬರು ಸ್ವಲ್ಪ ಪವಿತ್ರ ಪ್ರಸಾದವನ್ನು ತಂದಿತ್ತರೆ, ಮಲಗಿದಂತೆಯೇ ಅದನ್ನು ಭಕ್ಷಿಸುತ್ತಿದ್ದ. ಒಂದು ದಿನ ಒಬ್ಬ ಪಂಡಿತರು ಅವನ ಪಕ್ಕದಲ್ಲಿ ಕುಳಿತು ವೇದಾಂತ ಗ್ರಂಥವಾದ ಪಂಚದಶಿಯನ್ನು ವಿವರಿಸಿ ಹೇಳುತ್ತಿದ್ದರು. ಅವರ ಸುತ್ತ ಕೆಲವೇ ಆಯ್ದ ಶ್ರೋತೃಗಳು ಕುಳಿತು ಕೇಳುತ್ತಿದ್ದರು. ಒಂದು ನಿರ್ದಿಷ್ಟವಾದ ಶ್ಲೋಕಕ್ಕೆ ಅವರು ಬಂದರು, ಆದರೆ ಅದರ ಅರ್ಥವನ್ನು ವ್ಯಾಖ್ಯಾನಿಸಲು ಅವರಿಗೆ ಸಾಧ್ಯವಾಗಲಿಲ್ಲ. ಶ್ರೋತೃಗಳನ್ನು ಕುರಿತು– "ಒಂದು ಭಾಷ್ಯವನ್ನು ನೋಡಿಕೊಂಡು ನಾಳೆ ಬರುತ್ತೇನೆ" ಎಂದರು. ತಕ್ಷಣ ಆ ನಗ್ನಸಾಧು ಎದ್ದು ಕುಳಿತು ಶ್ರೋತೃಗಳ ಅನುಮತಿಯನ್ನು ಪಡೆದು ಆ ಶ್ಲೋಕವನ್ನು ವಿವರಿಸತೊಡಗಿದ. ಹದಿನಾರು ಬಗೆಯ ವ್ಯಾಖ್ಯಾನಗಳನ್ನು ತಿಳಿಯಹೇಳಿದ. ಸಮಸ್ತ ಶ್ರೋತೃಗಳೂ ಬೆಕ್ಕಸ ಬೆರಗಾದರು. ಮುಕ್ತಾಯದ ನಂತರ ಅವರೆಲ್ಲ ಎದ್ದು ಬಂದು ಆ ಸಾಧುವಿಗೆ ನಮಸ್ಕರಿಸಿ – "ಅದು ಹೇಗೆ ಈವರೆಗೆ ತಾವು ಒಮ್ಮೆಯೂ ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸಿಯೇ ಇರಲಿಲ್ಲ" ಎಂದು ಕೇಳಿದರು. ಆ ಸಾಧು ಉತ್ತರಿಸಿದರು. "ಅದು ನನ್ನ ದುರ್ದೈವ–ಇವತ್ತು ಮಾತನಾಡುವಂತೆ ನನ್ನನ್ನು ಪ್ರೇರೇಪಿಸಿತು." ಅದೇ ರಾತ್ರಿ ಆತ ಆ ಸ್ಥಳವನ್ನು ತೊರೆದು ಹೊರಟುಹೋದರು. ಯಾರೂ ಅವನನ್ನು ಮತ್ತೆ ಕಾಣಲಿಲ್ಲ.

ಜೀವನ್ಮುಕ್ತನು ಮಾಡಬೇಕಾದ ಯಾವ ಕೆಲಸ ಅಥವಾ ಕರ್ತವ್ಯ ಎಂಬುದು ಇಲ್ಲ. "ಆತ್ಮನ್ಯೇವ ಚ ಸಂತುಷ್ಟಃ ತಸ್ಯ ಕಾರ್ಯಂ ನ ವಿದ್ಯತೇ ॥ (ಭಗವದ್ಗೀತೆ 3–17) ಆತನು ತನ್ನ ಆತ್ಮದಲ್ಲೇ ನೆಲೆನಿಂತು ಸಂತೋಷವಾಗಿರುತ್ತಾನೆ. ನೀವು ಸಾಧುವನ್ನೂ, ಆಲಸಿಯನ್ನೂ ಪ್ರತ್ಯೇಕವಾಗಿ ಗುರುತಿಸಲಾರಿರಿ. ಹೀಗಾಗಿ ಸಾಮಾನ್ಯ ಮನುಷ್ಯನಿಗೆ ಜೀವನ್ಮುಕ್ತನನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ನೀವು, ನಾವು, ನಮ್ಮಿಂದ ಬೇರೆಯಾದ ಪ್ರಪಂಚವನ್ನು ನೋಡುತ್ತೇವೆ. ಬಗೆಬಗೆಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತೇವೆ. ಜೀವನ್ಮುಕ್ತನನ್ನು ನಾವು ನೋಡುತ್ತಲೇ ಇರಬಹುದು, ಅವನು ಮಾತನಾಡುತ್ತಿರುವುದನ್ನೂ, ನಡೆದಾಡುತ್ತಿರುವುದನ್ನೂ ಗಮನಿಸುತ್ತಿರಬಹುದು. ಆದರೆ ಆತನು ಪ್ರಪಂಚವನ್ನು ನೋಡುತ್ತಲೇ ಇಲ್ಲ. ಗೌತಮ ಬುದ್ಧನು ಒಮ್ಮೆ ಹೇಳಿದ್ದು– "ಜೀವನ್ಮುಕ್ತನು ಒಂದು ಹೆಜ್ಜೆಯೂ ಮುಂದಿಡುವುದಿಲ್ಲ, ಒಂದು ಶಬ್ದವನ್ನೂ ವರ್ಷಗಟ್ಟಲೇ ಮಾತನಾಡುವುದಿಲ್ಲ. ಇದೊಂದು ದೈವೀ

ರಹಸ್ಯ. ಜೀವನ್ಮುಕ್ತನು ಕಾರ್ಯಗಳಲ್ಲಿ ತೊಡಗಿಕೊಂಡಿರುವಂತೆ ಅಥವಾ ಅಪ್ಪಟ ಸೋಮಾರಿಯಂತೆ ನಮಗೆ ತೋರಬಹುದಷ್ಟೆ.

**38. ವಸ್ತು ವಿಷಯಗಳನ್ನು ಪ್ರೀತಿಸಲೂ ಬೇಡಿ, ದ್ವೇಷಿಸಲೂ ಬೇಡಿ.**

ವಿರಕ್ತೋ ವಿಷಯದ್ವೇಷ್ಟಾ ರಾಗೀ ವಿಷಯ ಲೋಲುಪಃ ।
ಗ್ರಹಮೋಕ್ಷವಿಹೀನಸ್ತು ನ ವಿರಕ್ತೋ ನ ರಾಗವಾನ್ ॥ (XVI-6)

ತಾನು ವಿರಕ್ತನೆಂದು ಹೇಳಿಕೊಳ್ಳುವವನು ಪ್ರಾಪಂಚಿಕ ವಸ್ತುಗಳನ್ನು ದ್ವೇಷಿಸುತ್ತಾನೆ. ವಸ್ತುಗಳಲ್ಲಿ ವ್ಯಾಮೋಹ ಹೊಂದಿದ ಮನುಷ್ಯ ಅವುಗಳನ್ನು ಹೊಂದಲು ಲೋಭಿಯಾಗುತ್ತಾನೆ. ಆದರೆ ಯಾರು ಲೋಭದಿಂದ ಪಡೆಯುವುದೂ ಇಲ್ಲ, ಪಡೆಯಲಾಗದುದನ್ನು ದ್ವೇಷಿಸುವುದೂ ಇಲ್ಲ, ಅಂಥವನು ವಿರಕ್ತನೂ ಅಲ್ಲ, ಮೋಹಿಯೂ ಅಲ್ಲ.

ವಸ್ತುಗಳೊಡನೆ ಯಾವುದೇ ರೀತಿಯ ಸಂಬಂಧ (ಉದಾ: ಹಣ) ನಿಮ್ಮನ್ನು ನಶ್ವರವಾದ ಸಂಸಾರ ಚಕ್ರದಲ್ಲಿ ಬಂಧಿಸಿ ಬಿಡಬಹುದು. ಯಾವುದೇ ವಸ್ತುವನ್ನು ಪ್ರೀತಿಸಿದರೆ, ಅದನ್ನು ಇನ್ನಷ್ಟು ಮತ್ತಷ್ಟು ಹೊಂದಬೇಕೆಂಬ ದುರಾಸೆ ಬಲಿಯಬಹುದು. ನಿಮ್ಮ ಮನಸ್ಸು ಯಾವಾಗಲೂ ಅವುಗಳನ್ನು ಪಡೆದುಕೊಳ್ಳುವುದು ಹೇಗೆ? ಪಡೆದದ್ದನ್ನು ಸಂಭಾಳಿಸುವುದು ಹೇಗೆ? ಎಂದೆಂದೂ ಅದನ್ನು ಕಳೆದುಕೊಳ್ಳದಿರುವುದು ಹೇಗೆ? ಇತ್ಯಾದಿ ಚಿಂತನೆಗಳಲ್ಲಿ ಮುಳುಗಬಹುದು. ಅವುಗಳನ್ನು ತೊರೆದುಬಿಡುವುದೇ ನಿಮ್ಮ ಆಸಕ್ತಿಯಾದಲ್ಲಿ ನಿಮ್ಮ ಮನಸ್ಸು ಅಂಥ ವಸ್ತುಗಳನ್ನು ದ್ವೇಷಿಸುವುದರಲ್ಲಿ, ಅದರತ್ತ ನೋಡದೆಯೇ ಇರುವುದರಲ್ಲಿ (ಉದಾ: ಹಣ) ಚಿಂತಿತವಾಗಿರಬಹುದು! ಎಂದರೆ ಮನಸ್ಸು ಹಣವನ್ನೇ ಕುರಿತು ಚಿಂತಿಸುತ್ತಿರುತ್ತದೆ. ಒಮ್ಮೆ ಈ ವಸ್ತುಗಳು ನಿಮಗೆ ಯಾವ ರೀತಿಯಲ್ಲೂ ಬೆಲೆಯಿಲ್ಲದವು ಎಂದು ಎನಿಸಿಬಿಟ್ಟರೆ, ಮನಸ್ಸನ್ನು ಅವುಗಳಿಂದ ಪ್ರಯತ್ನಪೂರ್ವಕವಾಗಿ ಹಿಂತೆಗೆದುಕೊಳ್ಳುವುದಾಗಲೀ ಅಥವಾ ವಸ್ತುಗಳ ಬಗೆಗೆ ಕಷ್ಟಪಟ್ಟು ಆಕರ್ಷಣೆ ಬೆಳೆಸಿಕೊಳ್ಳುವುದಾಗಲೀ ಇರುವುದಿಲ್ಲ. ನೀವು ಅನಾಸಕ್ತ (ಉದಾಸೀನ)ರಾಗಿರುತ್ತೀರಿ. ವಸ್ತುಗಳನ್ನು ಕಂಡಾಗ–"ನನ್ನಿಂದ ದೂರ ತೊಗೊಂಡು ಹೋಗಿ!" ಎಂದು ಕಿರುಚುವುದೂ ಇಲ್ಲ. ಹಿರಿಹಿರಿ ಹಿಗ್ಗುತ್ತಾ "ಹಾಂ, ಇದೇ ನನಗೆ ಬೇಕಾಗಿತ್ತು ಬನ್ನಿ–ಬನ್ನಿ ನನಗೆ ಕೊಡಿ" ಎಂದು ಹಲ್ಲುಕಿರಿಯುವುದೂ ಇಲ್ಲ! ಅದನ್ನು ಕಿತ್ತುಕೊಳ್ಳುವ ಅತ್ಯುತ್ಸಾಹವಾಗಲಿ, ತಿರಸ್ಕರಿಸುವ



ಉದ್ರೇಕವಾಗಲೀ ಇರುವುದಿಲ್ಲ. ಜೀವನ್ಮುಕ್ತನಿಗಾದರೋ (ತನ್ನಿಂದ ಬೇರೆಯಾದ) ಸ್ವತಂತ್ರ ಅಸ್ತಿತ್ವದ ವಸ್ತುವೇ ಇರುವುದಿಲ್ಲ. ಆತನು ಅದನ್ನು ದ್ವೇಷಿಸಿವುದೂ ಇಲ್ಲ, ಪ್ರೀತಿಸುವುದೂ ಇಲ್ಲ.

**39. ಮುಕ್ತಿಗಾಗಲೀ ದೇಹೇಂದ್ರಿಯಗಳಿಗಾಗಲಿ ಅಂಟಿಕೊಳ್ಳಬೇಡಿ**

ಯಸ್ಯಾಭಿಮಾನೋ ಮೋಕ್ಷೇಪಿ ದೇಹೇಽಪಿ ಮಮತಾ ತಥಾ ।
ನ ಚ ಜ್ಞಾನೀ ನ ವಾ ಯೋಗೀ ಕೇವಲಂ ದುಃಖಭಾಗಸೌ॥
(XVI-10)

ಮುಕ್ತಿ (ಮೋಕ್ಷ)ಗಾಗಿ ಹಂಬಲಿಸುತ್ತಿರುವವನೂ ಹಾಗೂ ದೇಹ ವ್ಯಾಮೋಹಿಯೂ–ಅದರೊಡನೇ ತನ್ನನ್ನು ಗುರುತಿಸಿಕೊಂಡವನೂ ಯೋಗಿಗಳೂ ಅಲ್ಲ, ಜ್ಞಾನಿಗಳೂ ಅಲ್ಲ. ಅವರಿಬ್ಬರೂ ಎಲ್ಲ ಬಗೆಯ ದುಃಖ, ಸಂಕಟಗಳಿಗೂ ಒಳಗಾಗುತ್ತಾರೆ.

ಪ್ರಾರಂಭದ ಹಂತದಲ್ಲಿ ಮುಮುಕ್ಷುತ್ವ (ಮುಕ್ತಿಗಾಗಿ ತೀವ್ರ ಹಂಬಲ) ನಾಲ್ಕು ಬಗೆಯ ಅಧ್ಯಾತ್ಮ ಸಾಧನೆಗಳಲ್ಲಿ ಒಂದು. ಆದರೆ ಮುಂದಕ್ಕೆ ಸಾಧನೆಯ ಪ್ರಬುದ್ಧ ಸ್ಥಿತಿಯಲ್ಲಿ, ಮೋಕ್ಷದ ವ್ಯಾಮೋಹವೂ ಪ್ರಾಪಂಚಿಕ ವಸ್ತು ವಿಷಯದ (ದೇಹದ) ವ್ಯಾಮೋಹದಂತೆಯೇ ಅಪಾಯಕಾರಿ ಯಾದದ್ದು. ನಾವು ಪ್ರಾಪಂಚಿಕ ವಿಷಯಗಳಲ್ಲಿ ಆಸೆಯನ್ನೂ, ಮೋಕ್ಷದ ಅಭಿಲಾಷೆಯನ್ನೂ ವಿನಿಮಯ ಮಾಡಿಕೊಳ್ಳುತ್ತಿದ್ದೇವೆ, ಅಷ್ಟೇ. ಎಲ್ಲ ಬಗೆಯ ಅಪೇಕ್ಷೆಗಳೂ–ವಾಸನಾಗಳೂ ಬಂಧವೇ. ನಮ್ಮೆಲ್ಲ ಸಾಧನೆಗಳೂ ಮುಂದಿನ ಹಂತದಲ್ಲಿ ಎಲ್ಲ ಬಗೆಯ ಅಪೂರ್ಣತೆಯನ್ನು ತೊಡೆದುಹಾಕಿ, ಮನಸ್ಸನ್ನು ಪರಿಶುದ್ಧವಾಗಿಸಿ ಕೊಳ್ಳುವುದಕ್ಕಾಗಿಯೇ ಇರಬೇಕು. ಮೋಕ್ಷವು ಹೊಸದಾಗಿ ಪಡೆಯು ವಂತಹುದು ಅಲ್ಲ. ಪ್ರತಿಯೊಬ್ಬನೂ ಆತ್ಮಜ್ಞಾನಿಯೇ. ನಾವು ಮಾಡಬೇಕಾದುದೇನೆಂದರೆ ನಮ್ಮ ನಿಜವಾದ ಸ್ವರೂಪದ ಮೇಲೆ ಅಧ್ಯಾರೋಪ ಮಾಡಿಕೊಂಡಿರುವ ಪ್ರಪಂಚದ ಭ್ರಮೆಯನ್ನು ತೆಗೆದುಹಾಕುವುದು. ಇದಕ್ಕೆ ಪ್ರತಿಯಾಗಿ ಮೋಕ್ಷದ ಹಂಬಲವೆಂಬ ವಾಸನಾ ಸಹ ನಮ್ಮನ್ನು ಜನ್ಮ–ಜನ್ಮಗಳ ಜಾಲದಲ್ಲಿ ಕಟ್ಟಿಹಾಕುವುದು. ನಮ್ಮ ಎಲ್ಲ ಪಾಪಗಳೂ, ಕ್ರೂರ ಅಪರಾಧಗಳೂ ನಮ್ಮ ದೇಹ ವ್ಯಾಮೋಹದ ಕಾರಣದಿಂದಲೇ ಮಾಡಲ್ಪಡುತ್ತವೆ. ಹಾಗೆಯೇ ದೇಹಕ್ಕೆ ಸಂಬಂಧಪಟ್ಟ ಪತ್ನಿ, ಪುತ್ರ ಮುಂತಾದ ಸಂಬಂಧಗಳೆಲ್ಲ ನಮ್ಮ ವ್ಯಾಮೋಹದಿಂದಲೇ ಉಂಟಾದದ್ದು. ಇವುಗಳೇ

ಪ್ರಾರಬ್ಧಗಳಾಗಿ, ಅವುಗಳನ್ನು ಅನುಭವಿಸಲೇಬೇಕಾದುದರಿಂದ ನಾವು ಜನ್ಮಗಳನ್ನು ಎತ್ತಬೇಕಾಗುತ್ತದೆ. ಪ್ರತಿಯೊಂದು ಜನ್ಮವೂ ಹಲವಾರು ವರ್ಷಗಳತನಕ ವಿಸ್ತರಿಸುತ್ತದೆ, ಮತ್ತು ಈ ಅವಧಿಯಲ್ಲಿ ಮತ್ತಷ್ಟು ಪಾಪಗಳನ್ನು ಅಥವಾ ಪುಣ್ಯಕಾರ್ಯಗಳನ್ನು ಮಾಡಲು ಕಾರಣ ವಾಗುತ್ತವೆ. ಈ ಕರ್ಮಗಳಿಂದ ಇನ್ನಷ್ಟು ಜನ್ಮಗಳು! ದೇಹದೊಡನೆ ನಮ್ಮ ವ್ಯಾಮೋಹವು ಇರುವವರೆಗೂ, ನಾವು ಧ್ಯಾನ, ಏಕಾಗ್ರತೆ ಇತ್ಯಾದಿಗಳನ್ನು ಸಾಧಿಸಲು ಸಾಧ್ಯವೇ ಆಗುವುದಿಲ್ಲ. ನಾವು ಅಹಂ ಅನ್ನು ಅಥವಾ ದೇಹಭಾವವನ್ನು ತೊರೆದು, ನಾವು ಪರಿಶುದ್ಧ ಆತ್ಮಸ್ವರೂಪರೇ ಎಂದು ಇನ್ನೂ ಅರಿಯಬೇಕಾಗಿರುವುದರಿಂದ, ಜ್ಞಾನಿಯಾಗಿರುವುದು ಹೇಗೆ ಸಾಧ್ಯ? ಆದುದರಿಂದ ಮೋಕ್ಷದ ಹಂಬಲವನ್ನು ನಾವು ಬೆಳೆಸಿಕೊಂಡರೆ, ಈ ಹಂಬಲವೇ ಮತ್ತೊಂದು ಪ್ರಬಲ ವಾಸನಾ ಆಗಿಬಿಡುತ್ತದೆ ಹಾಗೂ ಅದು ಅಧ್ಯಾತ್ಮ ಪಥದಲ್ಲಿ ಮುಂದೆ ಸಾಗಲು ನಮ್ಮನ್ನು ಬಿಡುವುದೇ ಇಲ್ಲ.

**40. ಎಲ್ಲವನ್ನೂ ಮರೆತುಬಿಡಿ–ಹೇಗಿದ್ದೀರೋ ಹಾಗೆ ಇದ್ದುಬಿಡಿ !**

ಹರೋ ಯದ್ಯುಪದೇಷ್ಟಾ ತೇ ಹರಿಃ ಕಮಲಜೋಪಿ ವಾ ।
ತಥಾಪಿ ನ ತವ ಸ್ವಾಸ್ಥ್ಯಂ ಸರ್ವ ವಿಸ್ಮರಣಾದೃತೇ ॥ (XVI-11)

ಪ್ರಭು ಶಿವನೇ ನಿಮ್ಮ ಉಪದೇಶಕನಾಗಿರಲಿ ಅಥವಾ ಬ್ರಹ್ಮ ಅಥವಾ ವಿಷ್ಣುವೇ ಆಗಿರಲಿ, ಅದರಿಂದೇನು? ಆಗಲೂ ಸಹ, ನೀವು ಎಲ್ಲವನ್ನೂ ಮರೆತುಬಿಟ್ಟಲ್ಲದೆ, ನಿಮ್ಮ ಸ್ವಸ್ವರೂಪದಲ್ಲಿ ಸ್ಥಿತರಾಗಲು ಸಾಧ್ಯವಿಲ್ಲ.

ದೇಹ ವ್ಯಾಮೋಹ, ಅಹಂ, ಎಲ್ಲ ಬಾಹ್ಯ ಉಪಾಧಿಗಳು, ಮನಸ್ಸಿನ ಎಲ್ಲ ಆಲೋಚನೆಗಳು, ಅನಾತ್ಮ ವಸ್ತುಗಳೊಡನೆ ಗುರುತಿಸಿ ಕೊಳ್ಳುವುದು. ಈ ಎಲ್ಲ ವಾಸನಾಗಳೂ ಮರೆಯಲೇಬೇಕಾದಂತಹವುಗಳು. ಹೀಗೆ ಮಾಡಿದಲ್ಲದೆ, ತ್ರಿಮೂರ್ತಿಗಳಲ್ಲಿ ಒಬ್ಬನಾದ ಗುರುವೂ ಸೇರಿದಂತೆ ಯಾವ ಗುರುವೂ, ಮುಕ್ತಿಯನ್ನು ಕರುಣಿಸಿ ನಿಮ್ಮನ್ನು ಜೀವನ್ಮುಕ್ತನಾಗಿ ಮಾಡಲಾರ !

**41. ಏಕಾಂತದಲ್ಲಿ ರಮಿಸು (ಆನಂದಿಸು) ಮತ್ತು ಆತ್ಮದಲ್ಲಿ ನೆಲೆಸು.**

ತೇನ ಜ್ಞಾನ ಫಲಂ ಪ್ರಾಪ್ತಂ ಯೋಗಾಭ್ಯಾಸ ಫಲಂ ತಥಾ ।
ತೃಪ್ತಃ ಸ್ವಚ್ಛೇಂದ್ರಿಯೋ ನಿತ್ಯಂ ಏಕಾಕೀ ರಮತೇ ತು ಯಃ ।

(XVII-1)



ತನ್ನ ಆತ್ಮದಲ್ಲೇ ತೃಪ್ತನಾಗಿ ನೆಲೆಗೊಂಡವನು ಏಕಾಂತದಲ್ಲೇ ರಮಿಸುತ್ತಾನೆ. (ಸಂತೋಷದಿಂದಿರುತ್ತಾನೆ) ಆತನ ಇಂದ್ರಿಯಗಳು ನಿರ್ಮಲವಾಗಿರುವುದರಿಂದ, ಯೋಗಾಭ್ಯಾಸದ ಫಲವನ್ನೂ, ಪರಮಜ್ಞಾನವನ್ನೂ, ಅದರ ಫಲವನ್ನೂ ಪಡೆಯುತ್ತಾನೆ.

ಜೀವನ್ಮುಕ್ತನ ಇಂದ್ರಿಯಗಳು, ಅವು ಹಲವಾರು ವಸ್ತುಗಳ ಒಡನಾಟದಲ್ಲಿದ್ದರೂ ಅವುಗಳ ಗುರುತು (ನೆರಳು) ಉಳಿಯುವುದಿಲ್ಲ. ಕಣ್ಣುಗಳಂತಹ ಇಂದ್ರಿಯುಗಳು ಸುಂದರವಾದ ವಸ್ತುಗಳಿಂದ ಆಕರ್ಷಿತವಾಗುವುದಿಲ್ಲ, ಕಿವಿಗಳು ಮಧುರವಾದ ಸಂಗೀತದಿಂದ ಉಬ್ಬುವುದಿಲ್ಲ, ನಾಲಗೆಯು ರುಚಿಕರವಾದ ತಿನಿಸುಗಳಿಗೆ ನೀರಾಡುವುದಿಲ್ಲ, ಇತ್ಯಾದಿ ಇಂದ್ರಿಯಗಳು ಸ್ವಚ್ಛವಾಗಿಯೇ ಇದ್ದು, ಹಲವಾರು ವಸ್ತುಗಳ ಸಂಪರ್ಕಕ್ಕೆ ಬಂದರೂ ಯಾವುದೇ ಪರಿಣಾಮ ಅಥವಾ ಪ್ರತಿಕ್ರಿಯೆಗೆ ಈಡಾಗುವುದಿಲ್ಲ. ಜ್ಞಾನಿಯು ಯಾವಾಗಲೂ ಎಚ್ಚರದ ಭಾವದಲ್ಲಿಯೇ ಸ್ಥಿರವಾಗಿರುತ್ತಾನಾಗಿ ತನ್ನನ್ನು ತೃಪ್ತಿಗೊಳಿಸಲು ಅಥವಾ ರಂಜಿಸಲು ಬೇರೊಂದು ವಸ್ತುವಿನ ಅಗತ್ಯವೂ ಅವನಿಗಿಲ್ಲ. ಆತ್ಮನಲ್ಲೇ ಸ್ಥಿರವಾಗಿ ಇದ್ದು ಅಥವಾ ಬೇರೆ ಮಾತುಗಳಲ್ಲಿ ಹೇಳುವುದಾದರೆ, 'ನಾನು ಇದ್ದೇನೆ' ಎಂಬ ಭಾವದಲ್ಲಿ ಸದಾಕಾಲ ಸಹಜವಾಗಿ ಇದ್ದುಕೊಂಡು, ದೇಹಭಾವದಿಂದ ಮುಕ್ತ ಇರುವುದೇ ಏಕಾಂತದಲ್ಲಿರುವುದು. ಅಂಥ ಮನುಷ್ಯನು ಜ್ಞಾನಿಯೂ ಹೌದು, ಯೋಗಿಯೂ ಹೌದು. ಅವನು ಈ ಸ್ತರವನ್ನು ಯೋಗಿಯು ಧ್ಯಾನದಿಂದಲೂ, ಸಮಾಧಿಯಿಂದಲೂ ಪಡೆಯುವ ಫಲವನ್ನೇ ಪಡೆಯುತ್ತಾನೆ. ದೇಹದಲ್ಲಿರುವ ಹಲವಾರು ಚಕ್ರಗಳ ಮೇಲೆ ಯೋಗಿಯು ಏಕಾಗ್ರ ಚಿತ್ತನಾಗಿ ತಲುಪುವ ಸ್ತರವನ್ನೇ ಪಡೆಯುವ ಯೋಗಿಯೂ ಹೌದು (ಜ್ಞಾನಿಯು) ಎಲ್ಲ ಅಪೇಕ್ಷೆಗಳೂ ಅವನನ್ನು ಬಿಟ್ಟುಹೋಗಿರುವುದರಿಂದ, ಅವನು ಜೀವನ್ಮುಕ್ತನಾಗುತ್ತಾನೆ. ಇಲ್ಲಿ, ಈಗಲೇ ಮುಕ್ತಿಯನ್ನೂ ಪಡೆಯುತ್ತಾನೆ.

**42. ಬದುಕು ಹಾಗೂ ಮರಣದ ಬಗ್ಗೆ ಉದಾಸೀನನಾಗಿರು.**

ಧರ್ಮಾರ್ಥಕಾಮಮೋಕ್ಷೇಷು ಜೀವಿತೇ ಮರಣೇ ತಥಾ ।
ಕಸ್ಯಾಪ್ಯುದಾರ ಚಿತ್ತಸ್ಯ ಹೇಯೋಪಾದೇಯತಾ ನಹಿ ॥ (XVII-6)

ಶಾಸ್ತ್ರಗಳಲ್ಲಿ "ಯಾರೊಬ್ಬನೂ ಯಮಧರ್ಮನನ್ನು ಕರೆದು, ತಾನು ಅತಿಯಾದ ಸಂಕಟಗಳಿಂದ ನರಳುತ್ತಿರುವುದರಿಂದ, ತನ್ನನ್ನು ಕರೆದುಕೊಂಡು

ಹೋಗು ಎಂದು ಹೇಳುತ್ತಾ ಸಾವನ್ನು ಸ್ವಾಗತಿಸಬಾರದು" ಎಂದು ಹೇಳಲಾಗಿದೆ. ಹಾಗೆಯೇ ಭಗವಂತನನ್ನು ಪ್ರಾರ್ಥಿಸುತ್ತಾ "ತನ್ನ ಜೀವನವನ್ನು ಇನ್ನೂ ಐದು ಅಥವಾ ಹತ್ತು ವರ್ಷಗಳು ಮುಂದುವರೆಸು ಎಂದು ಬೇಡಿ ಜೀವನವನ್ನು ಸ್ವಾಗತಿಸಬಾರದು". ಅವನು ರಾಜನ ಛೇಂಬರ್‌ನ ಹೊರಗೆ ಕುಳಿತು, ಯಾವ ಕ್ಷಣದಲ್ಲಾದರೂ ತನ್ನನ್ನು ಎಚ್ಚರಿಸು ಎಂದು ಆಜ್ಞಾಪಿಸಿರುವ ರಾಜನ ಆದೇಶವನ್ನು ನಿರೀಕ್ಷಿಸುವ ಘಂಟಾಬಾಲಕನಂತಿರಬೇಕು. ಇಡೀ ದಿನ ರಾಜನು ತನ್ನನ್ನು ಕರೆಯದಿದ್ದರೂ ಅವನು ತಲೆಕೆಡಿಸಿಕೊಳ್ಳುವುದಿಲ್ಲ.

"ಮರಣಂ ನಾಭಿನಂದೇತ ನಾಭಿನಂದೇತ ಜೀವಿತಂ ।
ರಾಜಾನಂ ಭ್ರತಕೋ ಯಥಾ ॥"

ಜೀವನದ ನಾಲ್ಕು ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ, ಮೋಕ್ಷಗಳು ಉದ್ಭವವಾಗುವುದು, ದೇಹಾತ್ಮ ಬುದ್ಧಿಯ ಕಾರಣದಿಂದಲೇ, ಜೀವನ್ಮುಕ್ತನು ಅಹಂ ಅಥವಾ ದೇಹಬುದ್ಧಿಯನ್ನು ತೊಡೆದುಬಿಟ್ಟಿರುವುದರಿಂದ, ಈ ನಾಲ್ಕು ಪುರುಷಾರ್ಥಗಳ ಗೊಡವೆಯೇ ಅವನ ಜೀವನದಲ್ಲಿರುವುದಿಲ್ಲ, ಹಾಗೆಯೇ ಸಾವಿನ ಅನಂತರದ ಬದುಕಿನಲ್ಲೂ ಆಸಕ್ತನಾಗಿರುವುದಿಲ್ಲ. ಜೀವನ ಅಥವಾ ಮರಣ ದೇಹಕ್ಕೆ ಸಂಬಂಧಪಟ್ಟದ್ದು ಮಾತ್ರ.

**43. ಜೀವನ್ಮುಕ್ತನು ವಸ್ತುಗಳಿಂದ ಆಕರ್ಷಿತನಾಗುವುದೂ ಇಲ್ಲ ಅಥವಾ ಅವುಗಳಿಂದ ಜುಗುಪ್ಸಿತನಾಗುವುದೂ ಇಲ್ಲ.**

ಶೂನ್ಯಾ ದೃಷ್ಟಿರ್ವೃಥಾ ಚೇಷ್ಟಾ ವಿಕಲಾನೀಂದ್ರಿಯಾಣಿ ಚ।
ನಸ್ಪೃಹಾ ನ ವಿರಕ್ತಿರ್ವಾ ಕ್ಷೀಣ ಸಂಸಾರ ಸಾಗರೇ॥ (XVII-9)

ಜ್ಞಾನಿಯ ದೃಷ್ಟಿ ಶೂನ್ಯವಾಗಿ ತೋರುತ್ತದೆ. ಆತನ ಚರ್ಯೆಗಳೆಲ್ಲ ಉದ್ದೇಶರಹಿತವಾದವುಗಳು. ಇಂದ್ರಿಯಗಳು ನಿರುಪಯುಕ್ತವಾಗಿ ಬಿದ್ದಿರುತ್ತವೆ. ಅವನಿಗೆ ಆಕರ್ಷಣೆ–ವಿಕರ್ಷಣೆ ಎಂಬುದೇ ಇಲ್ಲ. ಸಂಸಾರ ಸಾಗರ ಅವನಲ್ಲಿ ಬತ್ತಿಹೋಗಿರುತ್ತದೆ.

ಜ್ಞಾನಿಗೆ ಯಾವುದರಲ್ಲಿಯೂ ಆಸಕ್ತಿಯೇ ಇಲ್ಲದಿರುವುದರಿಂದ ಅವನ ದೃಷ್ಟಿ ಯಾವ ಒಂದು ನಿರ್ದಿಷ್ಟ ವಸ್ತುವಿನಲ್ಲಿಯೂ ಕೇಂದ್ರೀಕೃತವಾಗಿರುವುದಿಲ್ಲ. ಅವನು ಯಾವಾಗಲೂ ಶೂನ್ಯಾಕಾಶ



ದಿಂದಲೇ ಪ್ರಾರಂಭಿಸುತ್ತಾನೆ. ಯಾವುದೋ ಕ್ರಿಯೆಗಳಲ್ಲಿ ಅವನು ತೊಡಗಿಕೊಂಡಿರುವಂತೆ ಭಾಸವಾಗುತ್ತದೆ. ತನಗೆ ಆಗಬೇಕಾದ ಯಾವುದೂ ಇಲ್ಲದಿರುವುದರಿಂದ ಅವನಿಗೆ ಯಾವುದರಲ್ಲೂ ಆಸಕ್ತಿಯಿರುವುದಿಲ್ಲ, ಅವನ ಎಲ್ಲ ಕಾರ್ಯಗಳೂ ಉದ್ದೇಶರಹಿತ. ಅವನ ಇಂದ್ರಿಯಗಳು ಯಾವ ವಸ್ತುಗಳಿಂದಲೂ ಆಕರ್ಷಿತವಾಗುವುದೂ ಇಲ್ಲ, ವಿಕರ್ಷಿತವೂ ಆಗುವುದಿಲ್ಲ. ಆದುದರಿಂದ ಅವು ನಿಷ್ಪ್ರಯೋಜಕವಾಗಿ ಬಿದ್ದಿರುತ್ತವೆ. ಅವನಿಗೆ ಇಷ್ಟಾನಿಷ್ಟಗಳೆಂಬುದೇ ಇಲ್ಲ. ಏಕೆಂದರೆ ಅವನು ತನ್ನಿಂದ ಬೇರೆಯಾದ ಯಾವ ವಸ್ತುವನ್ನೂ ನೋಡುತ್ತಿರುವುದೂ ಇಲ್ಲ. ಇದು ಜೀವನ್ಮುಕ್ತನನ್ನು ಕುರಿತ ತುಂಬ ಸುಂದರವಾದ ವಿವರಣೆ. ಜೀವನ್ಮುಕ್ತನು ಯಾವಾಗಲೂ ತನ್ನ ಆತ್ಮದಿಂದ ಬೇರೆಯಾದ ಯಾವ ವಸ್ತುವನ್ನೂ ನೋಡುತ್ತಿರುವುದೂ ಇಲ್ಲ. ಆದುದರಿಂದ ಇಷ್ಟಾನಿಷ್ಟಗಳ ಪ್ರಶ್ನೆ ಏಳುವುದೇ ಇಲ್ಲ.

**44. ಜೀವನ್ಮುಕ್ತನು ಕಾಮಾನುರಾಗ ಅಥವಾ ಭಯದಿಂದ ವಿಚಲಿತನಾಗುವುದೇ ಇಲ್ಲ.**

ಸಾನುರಾಗಾಂ ಸ್ತ್ರಿಯಂ ದೃಷ್ಟ್ವಾ ಮೃತ್ಯುಂ ವಾ ಸಮುಪಸ್ಥಿತಂ।
ಅವಿಹ್ವಲ ಮನಾಃ ಸ್ವಸ್ಥೋ ಮುಕ್ತ ಏವ ಮಹಾಶಯಃ॥ (XVII-14)

ಆತ್ಮನಿಷ್ಠನಾದವನು, ಒಬ್ಬ ತರುಣಿಯನ್ನು ನೋಡಿದಾಗ, ಅವಳು ಆತನಲ್ಲಿ ತನ್ನ ಪ್ರಣಯವನ್ನು ವ್ಯಕ್ತಗೊಳಿಸಿದಾಗಲಾಗಲೀ, ಅಥವಾ ಮೃತ್ಯುವನ್ನು ಹೊಂದುವಾಗಲಾಗಲೀ, ವಿಚಲಿತನಾಗುವುದಿಲ್ಲ. ಅವನು ಜೀವನ್ಮುಕ್ತನೆಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ಶ್ರೀ ರಾಮಕೃಷ್ಣರನ್ನು ಪರೀಕ್ಷಿಸಲು ಎಸ್ಟೇಟ್ ಮ್ಯಾನೇಜರ್ ಮಥುರ ಬಾಬು, ಒಮ್ಮೆ ಅವರನ್ನು ಒಬ್ಬ ವೈಶ್ಯೆಯ ಹಾಸ್ಟೆಲ್‌ಗೆ ಕರೆದೊಯ್ದು, ಒಂದು ಸುರಕ್ಷಿತವಾದ ಕೋಣೆಯಲ್ಲಿ ಇರಿಸಿದ. ಆ ಹಾಸ್ಟೆಲ್‌ನ ವ್ಯವಸ್ಥಾಪಕಿಯನ್ನು ಕುರಿತು ಒಬ್ಬ ಸುರಸುಂದರಿ ತರುಣಿಯನ್ನು ಒದಗಿಸುವಂತೆ ತಿಳಿಸಿದ. ಶ್ರೀರಾಮಕೃಷ್ಣರು ಅರೆನಗ್ನಳಾದ ಸುಂದರ ತರುಣಿ ತನ್ನ ಕೋಣೆಯನ್ನು ಪ್ರವೇಶಿಸುವುದನ್ನು ನೋಡುತ್ತಿದ್ದಂತೆಯೇ ಉದ್ಗರಿಸಿದರು – "ಓಹ್, ಮಾತೇ!" ತಕ್ಷಣ ಉತ್ಕಟ ಸಮಾಧಿಗೆ ಹೋಗಿಬಿಟ್ಟರು. ಆಕೆಯಲ್ಲಿ ದಿವ್ಯಮಾತೆಯನ್ನೇ ಅವರು ಕಂಡರು.

ಆದಿ ಶಂಕರರನ್ನು ಒಬ್ಬ ತಾಂತ್ರಿಕನು ಸಮೀಪಿಸಿ "ನಾನು ನಿನ್ನ ತಲೆಯನ್ನು ಕತ್ತರಿಸಿ ದೇವರಿಗೆ ಬಲಿಕೊಡಬೇಕೆಂದಿದ್ದೇನೆ. ಒಂದು ಯಜ್ಞದಲ್ಲಿ ಜ್ಞಾನಿಯ ತಲೆಯನ್ನು ಅರ್ಪಿಸಿದರೆ ಇಡೀ ಪ್ರಪಂಚ ನನ್ನದಾಗುತ್ತದೆ" ಎಂದನು. ಶಂಕರರು ಸ್ವಲ್ಪವೂ ಹಿಂಜರಿಯಲಿಲ್ಲ. "ಅರ್ಧರಾತ್ರಿಯಲ್ಲಿ, ಎಲ್ಲಿಗೆ ಬೇಕೋ ಅಲ್ಲಿಗೆ ನನ್ನನ್ನು ಕರೆದುಕೊಂಡು ಹೋಗು! ಹಗಲು ಹೊತ್ತಿನಲ್ಲಿ ನನ್ನ ಶಿಷ್ಯರು ನಿನ್ನನ್ನು ನೋಡಿದರೆ, ನನ್ನ ತಲೆಯ ಒಂದು ಕೂದಲನ್ನು ನೀನು ಮುಟ್ಟಿದರೂ, ನಿನ್ನ ಕತೆಯನ್ನೇ ಮುಗಿಸಿಬಿಡುತ್ತಾರೆ!" ಎಂದುಬಿಟ್ಟರು. ತಮ್ಮ ಜೀವಕ್ಕೇ ಆಪತ್ತು ಬಂದಾಗಲೂ ಅಥವಾ ಅತ್ಯಾಕರ್ಷಕ ಪ್ರಲೋಭನೆಗಳು ಎದುರಾದಾಗಲೂ, ಜೀವನ್ಮುಕ್ತನು ಹೀಗೆಯೇ ಪ್ರತಿಕ್ರಿಯಿಸುತ್ತಾನೆ. ನಿಜದಲ್ಲಿ ಆತನಲ್ಲಿ ಪ್ರತಿಕ್ರಿಯೆ ಎಂಬುದೇ ಇರುವುದಿಲ್ಲ. ಏಕೆಂದರೆ ಅವರಿಗೆ ದೇಹಪ್ರಜ್ಞೆಯೇ ಇರುವುದಿಲ್ಲ. ಎಲ್ಲ ಪ್ರಲೋಭನೆಗಳೂ ಹಾಗೂ ಭಯವೂ ದೇಹಕ್ಕೆ ಸಂಬಂದಪಟ್ಟದ್ದು. ಅವು ಜ್ಞಾನಿಯನ್ನು ಬಾಧಿಸುವುದಿಲ್ಲ. ಜ್ಞಾನಿಯು ಸದಾ ಮುಕ್ತನೇ ಆಗಿರುತ್ತಾನೆ. ನಾವು ನಮ್ಮ ಮನಸ್ಸನ್ನು ದೇಹದಿಂದ ಬೇರ್ಪಡಿಸಿಕೊಂಡುಬಿಟ್ಟರೆ, ಮನಸ್ಸು ದೇಹವನ್ನು ಆಕರ್ಷಿಸುವ ಪ್ರಲೋಭನೆಗಳಿಂದ ಅಥವಾ ದೇಹಕ್ಕೆ ಅಪಾಯ ಒಡ್ಡುವ ಸಂದರ್ಭಗಳಲ್ಲಿ ಉಂಟಾಗುವ ಭಯದಿಂದ ವಿಚಲಿತವಾಗದೆ ತಟಸ್ಥವಾಗಿ ಬಿಡುತ್ತದೆ. ನಮ್ಮೆಲ್ಲರಲ್ಲಿ ಇರುವುದೂ ಒಂದೇ ಆತ್ಮವಾಗಿರುವುದರಿಂದ ಯಾರೂ ಆತ್ಮವನ್ನು ಭಯಗೊಳಿಸುವುದೂ ಸಾಧ್ಯವಿಲ್ಲ.

**45. ಜೀವನ್ಮುಕ್ತನಲ್ಲಿ ಹಿಂಸೆ ಅಥವಾ ಕಾರುಣ್ಯವೂ ಇಲ್ಲ. ಅಹಂಕಾರ ಅಥವಾ ದೌರ್ಬಲ್ಯವೂ ಇಲ್ಲ.**

> ನ ಹಿಂಸಾ ನೈವ ಕಾರುಣ್ಯಂ ನೌದ್ಧತ್ಯಂ ನ ಚ ದೀನತಾ ।
> ನಾಶ್ಚರ್ಯಂ ನೈವ ಚ ಕ್ಷೋಭಃ ಕ್ಷೀಣ ಸಂಸರಣೇ ನರೇ ॥ (XVII-16)

ಬಾಹ್ಯ ಪ್ರಪಂಚವೇ ಮಾಯವಾದ ಜೀವನ್ಮುಕ್ತನು ಹಿಂಸೆ ಅಥವಾ ಕಾರುಣ್ಯವನ್ನು ಪ್ರಯೋಗಿಸುವುದೇ ಇಲ್ಲ. ಆತನಲ್ಲಿ ಅಹಂಕಾರ ಅಥವಾ ದೀನತೆ ಅಥವಾ ಕೀಳರಿಮೆ ಅಥವಾ ಆಶ್ಚರ್ಯ ಅಥವಾ ಕ್ರೌರ್ಯ ಈ ಯಾವುದೂ ಇರುವುದಿಲ್ಲ.

ತನ್ನಿಂದ ಬೇರೆಯಾದ ಯಾವ ಪ್ರಪಂಚವನ್ನೂ ಜ್ಞಾನಿಯು ನೋಡುವುದೇ ಇಲ್ಲ. ಆತನು ಸರ್ವವ್ಯಾಪಿ. ಮತ್ತೊಬ್ಬ ಎಂಬುದೇ



ಯಾವಾಗ ಇಲ್ಲವೋ ಯಾರ ಬಗ್ಗೆ ಅವನು ಹಿಂಸೆ ಅಥವಾ ಕ್ರೌರ್ಯವನ್ನು ಪ್ರಕಟಿಸಬೇಕು? ಯಾರ ಬಗ್ಗೆ ಅನುಕಂಪ ಅಥವಾ ದಯೆಯನ್ನು ತೋರಬೇಕು? ಪ್ರಪಂಚದ ಜನರೆಲ್ಲಲೂ ಕೇವಲ ಸ್ವಪ್ನ ಚಿತ್ರಗಳು, ಬರಿಯ ಆಲೋಚನೆಗಳು (ಜಡವಾಗಿ ಹೆಪ್ಪುಗಟ್ಟಿದ ಶಕ್ತಿ ಮಾತ್ರ) – ಕಲ್ಪನೆಗಳು ಮಾತ್ರ ಹಾಗೂ ಅಸತ್ಯ.

ಒಬ್ಬ ನಟನು ರಂಗಸ್ಥಳದ ಮೇಲೆ ಬಂದು ಒಬ್ಬ ಡಕಾಯಿತ ಕತ್ತರಿಸಿದ ಕೈಯಿಂದ ಸೋರುತ್ತಿರುವ ರಕ್ತವನ್ನು ಪ್ರದರ್ಶಿಸುತ್ತಿದ್ದರೆ, ಪ್ರೇಕ್ಷಕರ ಮಧ್ಯೆ ಕುಳಿತ ವೈದ್ಯರೇ ನೀವಾಗಿದ್ದರೂ, ಎದ್ದು ಹೋಗಿ ಅವನಿಗೆ ಚಿಕಿತ್ಸೆ ಮಾಡಿ ಬ್ಯಾಂಡೇಜ್ ಕಟ್ಟುತ್ತೀರಾ? ಅದು ಕೇವಲ ಒಂದು ನಾಟಕ–ಸತ್ಯವಲ್ಲ. ಹಾಗೆಯೇ ಜ್ಞಾನಿಯು ಎಲ್ಲವನ್ನೂ ಕನಸಿನ ನಾಟಕವಷ್ಟೇ ಎಂಬಂತೆ ನೋಡುತ್ತಾನೆ. ಅವನು ಕ್ರೌರ್ಯ ಅಥವಾ ಅಹಂಕಾರದಿಂದ ವರ್ತಿಸುವುದಿಲ್ಲ. ಅಥವಾ ದೈನ್ಯತೆಯನ್ನೂ ತೋರುವುದಿಲ್ಲ. ಅನುಕಂಪ ಅಥವಾ ದಯೆಯನ್ನೂ ಪ್ರಕಟಿಸುವುದಿಲ್ಲ. ನಡೆಯುತ್ತಿರುವ ಯಾವ ಘಟನೆಗೂ ಆಶ್ಚರ್ಯ ಪಡುವುದೂ ಇಲ್ಲ, ಆತಂಕಗೊಳ್ಳುವುದೂ ಇಲ್ಲ. ಅವನಿಗೆ ಅಹಂ ಎನ್ನುವುದಾಗಲೀ, ಕರ್ತೃತ್ವಭಾವವಾಗಲೀ ಇಲ್ಲ.

**46. ಏನು ಬಂದರೂ ಸ್ವೀಕರಿಸುತ್ತಾನೆ. ಏನನ್ನೂ ತಿರಸ್ಕರಿಸುವುದಿಲ್ಲ.**

> ನ ಮುಕ್ತೋ ವಿಷಯದ್ವೇಷ್ಟಾ ನ ವಾ ವಿಷಯಲೋಲುಪಃ ।
> ಅಸಂಸಕ್ತಮನಾ ನಿತ್ಯಂ ಪ್ರಾಪ್ತಾಪ್ರಾಪ್ತ ಮುಪಾಶ್ನುತೇ ॥ (XVII-17)

ಜೀವನ್ಮುಕ್ತನು ಯಾವ ವಸ್ತುವನ್ನೂ ದ್ವೇಷಿಸುವುದೂ ಇಲ್ಲ–ವಸ್ತುಗಳನ್ನು ಹೊಂದುವ ದುರಾಸೆಯೂ ಅವನಿಗಿಲ್ಲ. ಅವನ ಮನಸ್ಸು ಯಾವಾಗಲೂ ಅನಾಸಕ್ತವಾಗಿರುತ್ತದೆ. ಪ್ರಾರಬ್ಧಕರ್ಮದಿಂದ ಪ್ರಾಪ್ತವಾದ ಯಾವುದನ್ನಾದರೂ ಅನುಭವಿಸುತ್ತಾನೆ, ಏನಾದರೂ ದೊರೆಯದಿದ್ದರೆ ಅವನು ತಲೆಕೆಡಿಸಿಕೊಳ್ಳುವುದಿಲ್ಲ.

ಜೀವನ್ಮುಕ್ತನು ಪ್ರಾಪಂಚಿಕ ವಸ್ತುಗಳ ಬಗೆಗೆ ವ್ಯಾಮೋಹವನ್ನು ಹೊಂದಿರುವುದಿಲ್ಲ ಅಥವಾ ದ್ವೇಷವನ್ನು ತಾಳುವುದಿಲ್ಲ. ಅವನಿಗೆ ಇಷ್ಟ ಅನಿಷ್ಟಗಳೂ ಇರುವುದಿಲ್ಲ. ಈ ವಸ್ತುವನ್ನು ನನ್ನ ಬಳಿಗೆ ತರಲೇಬೇಡಿ. ಅದು ನನಗೆ ಸ್ವಲ್ಪವೂ ಇಷ್ಟವಿಲ್ಲ, ಎನ್ನುವುದೂ ಇಲ್ಲ. "ಇದನ್ನು

ದಯಮಾಡಿ ಇನ್ನೂ ಸ್ವಲ್ಪ ಕೊಡಿ. ಅದು ನನಗೆ ತುಂಬಾ ಇಷ್ಟವಾಗಿದೆ" ಎನ್ನುವುದೂ ಇಲ್ಲ. ಅದೃಷ್ಟವಶದಿಂದ ಏನು ಬಂದರೂ ಸ್ವೀಕರಿಸುತ್ತಾನೆ, ಹಾಗೆ ಏನೂ ಬರದಿದ್ದರೂ ಅವನು ತಲೆಗೆ ಹಚ್ಚಿಕೊಳ್ಳುವುದಿಲ್ಲ. ದೊರೆತಿರುವುದರಲ್ಲೇ ಅವನು ಪೂರ್ಣ ಸಂತುಷ್ಟ, ಅದು ದೊರೆಯದಿದ್ದರೆ ಅವನು ಏನನ್ನೂ ಕಳೆದುಕೊಳ್ಳುವುದಿಲ್ಲ. ಕರ್ತೃತ್ವಭಾವವೇ ಅವನಿಗಿಲ್ಲದಿರುವುದರಿಂದ ಅವನ ಅನಾಸಕ್ತಿಯ ಕಾರಣದಿಂದ ಕರ್ಮದ ಪುಣ್ಯ ಅಥವಾ ಪಾಪ ಎಂಬುದು ಅವನಿಗೆ ತಟ್ಟುವುದೇ ಇಲ್ಲ.

## 47. ವೈವಿಧ್ಯಮಯ ಪ್ರಪಂಚ ಕೇವಲ ಕನಸಾಗಿತ್ತು.

ಯಸ್ಯ ಬೋಧೋದಯೇ ತಾವತ್ ಸ್ವಪ್ನವದ್‌ಭವತಿ ಭ್ರಮಃ ।
ತಸ್ಮೈ ಸುಖೈಕರೂಪಾಯ ನಮಃ ಶಾಂತಾಯ ತೇಜಸೇ ॥ (XVIII-1)

"ಆ ಜ್ಞಾನ ಪ್ರಭೆಗೆ ನಾನು ತಲೆ ಬಾಗುತ್ತೇನೆ, ಅದು ಅರಿಯುವವನು, ಅರಿಯಲ್ಪಡುವ ವಸ್ತು ಎಂಬುದರಿಂದ ಮುಕ್ತವಾಗಿದೆ ಹಾಗೂ ಅದು ಸಂಪೂರ್ಣ ಶಾಂತಮಯವಾಗಿದೆ-ಆನಂದ ಸ್ವರೂಪವಾಗಿದೆ. ಅದು ಎಂತಹ ಜ್ಞಾನವೆಂದರೆ, ಅದು ಮೂಡುತ್ತಿದ್ದಂತೆಯೇ ಎಲ್ಲ ಭ್ರಮೆಯೂ ಒಂದು ಕನಸಿನಂತಾಗಿಬಿಡುತ್ತದೆ."

ಅಷ್ಟಾವಕ್ರ ಗೀತೆಯ ಈ ಹದಿನೆಂಟನೇ ಅಧ್ಯಾಯವು 100 ಶ್ಲೋಕಗಳನ್ನೊಳಗೊಂಡ ಅತಿ ದೊಡ್ಡ ಅಧ್ಯಾಯ. ಶ್ರೀಮದ್ ಭಗವದ್ಗೀತೆಯ 18ನೆಯ ಅಧ್ಯಾಯದಂತೆಯೇ ಅದನ್ನು ಹಿಂದಿನ ಅಧ್ಯಾಯಗಳಲ್ಲಿ ಈವರೆಗೆ ಹೇಳಿದುದರ ಸಂಕ್ಷಿಪ್ತ ರೂಪ ಎಂದು ಭಾವಿಸಬಹುದಾಗಿದೆ. ನಮ್ಮ ಬದುಕಿನ ಪೂರ್ಣ ಉದ್ದೇಶವೇ ಶಾಶ್ವತ ಸಂತೋಷವನ್ನು ಹೊಂದುವುದು. ಆದುದರಿಂದ ಈ ಮೊದಲ ಶ್ಲೋಕದಲ್ಲಿ, ಅಷ್ಟಾವಕ್ರರು ಆನಂದದ ಸ್ವರೂಪದಲ್ಲಿರುವ ಆ ಜ್ಞಾನಕ್ಕೆ ತಲೆಬಾಗಿ ನಮಸ್ಕರಿಸುತ್ತಾರೆ. ಜ್ಞಾನವನ್ನು ಯಾವಾಗಲೂ ಬೆಳಕಿಗೆ ಹೋಲಿಸಲಾಗುತ್ತದೆ. ಅಂತಿಮ ಆನಂದ ಹಾಗೂ ಶಾಂತಿ ಎರಡೂ ಒಂದೇ. ಈ ಕಾರಣದಿಂದಲೇ ಅವರು ಆ ಶಾಶ್ವತವಾದ ಸಂತೋಷ ಹಾಗೂ ಶಾಂತತೆಯ ಸ್ವರೂಪವಾದ ಪವಿತ್ರ ಜ್ಞಾನಕ್ಕೆ ತಲೆಬಾಗಿ ನಮಸ್ಕರಿಸುತ್ತಾರೆ.

ಆತ್ಮಜ್ಞಾನವಾಗುವವರೆಗೂ ಎಚ್ಚರ, ಕನಸು, ಗಾಢನಿದ್ರೆಯ ಅವಸ್ಥೆಗಳೆಲ್ಲ ಸತ್ಯವೆಂದೇ ಭಾಸವಾಗುತ್ತದೆ. ದುಃಖ ಸಂಕಟಗಳ ಎಚ್ಚರದ



ಸ್ಥಿತಿ, ಕೊನೆಯೇ ಇಲ್ಲದಂತೆ ತೋರುತ್ತದೆ. ಸತ್ಯಜ್ಞಾನವು ನಮ್ಮ ಮೇಲೆ ಇಳಿದುಬಂದ ಕ್ಷಣದಲ್ಲೇ ನಾವು ನಿಜವೆಂದು ಭ್ರಮಿಸಿದ್ದ ಅವಧಿಯು ಕೇವಲ ಸ್ವಪ್ನವೇ ಆಗಿದ್ದು, ನಾವು ಎಚ್ಚರಗೊಳ್ಳುತ್ತೇವೆ. ಇಲ್ಲವೇ ನಾವು ಅದನ್ನು ಮರತೇಬಿಡುತ್ತೇವೆ ಅಥವಾ ಅದು ನಡೆದೇ ಇಲ್ಲವೇನೋ ಎಂಬಂತೆ, ಅಸತ್ಯ ಎಂದು ತಿಳಿಯುತ್ತೇವೆ. ನಾವು ಬದುಕಿದ ಬಗೆ-ಬಗೆಯ ಜೀವನವು ಬೇರೆ-ಬೇರೆ ನಾಟಕಗಳು, ಒಂದೊಂದರಲ್ಲೂ ನಾವು ಬೇರೆ-ಬೇರೆ ಪಾತ್ರಗಳನ್ನು ಅಭಿನಯಿಸಿದ್ದೆವು. ಆ ಪಾತ್ರಗಳೊಡನೆಯೇ ಗುರುತಿಸಿಕೊಂಡುಬಿಟ್ಟಿದ್ದೆವು. ಜ್ಞಾನೋದಯವಾದ ಮೇಲೆಯೇ ನಾವು ಯಾರು ಎಂಬುದನ್ನು ಅರ್ಥಮಾಡಿಕೊಂಡೆವು. ಅದೇ ನಮ್ಮ ನಿಜವಾದ ಸ್ವರೂಪ. ಎಚ್ಚರದ ಪ್ರಪಂಚದ ಎಲ್ಲ ವೈವಿಧ್ಯಗಳು ಈ ಎಲ್ಲ ದುಃಖ ಸಂಕಟಗಳು ಮಾಯವಾಗಿಬಿಟ್ಟವು. ನಾವು ಯಾವಾಗಲೂ ಒಟ್ಟಂದವೇ ಆಗಿದ್ದೇವೆ, ಒಬ್ಬೊಬ್ಬ ವ್ಯಕ್ತಿಗಳಲ್ಲ. ನಾವು ಯಾವಾಗಲೂ ಮೂರ್ತಿವೆತ್ತ ಆನಂದವೇ. ಆನಂದವೇ ನಮ್ಮ ನಿಜಸ್ವರೂಪ-ಸ್ವಭಾವ. ನಾವು ಯಾರು ಎಂಬ ಜ್ಞಾನ-ಯಾವುದರಲ್ಲಿ ಎಲ್ಲ ಆತಂಕಗಳು ಸಂಕಟಗಳ ಅಲೆಗಳೂ ಮಾಯವಾಗುತ್ತವೆ, ಕೇವಲ ಆನಂದವೇ ನೆಲೆನಿಲ್ಲುತ್ತದೆ. ಇಲ್ಲಿ ತಲೆಬಾಗುವುದು, ನಮಸ್ಕರಿಸುವುದು ಎಂಬುದರ ಅರ್ಥವೆಂದರೆ, ನಾವು ಆ ಜ್ಞಾನದೊಡನೆಯೇ ನಮ್ಮನ್ನು ಗುರುತಿಸಿಕೊಂಡು ಅದರಲ್ಲೇ ಒಂದಾಗಿಬಿಡುತ್ತೇವೆ. ದ್ವೈತ ಅಥವಾ ದ್ವಂದ್ವವು ಯಾವುದು, ಎಲ್ಲಿ ಅಸಂತೋಷ ಹಾಗೂ ಅಶಾಂತಿಯನ್ನು ಉಂಟುಮಾಡಿತ್ತೋ, ಅದರ ನಿರ್ಗಮನವನ್ನು ಅದು ಪ್ರತಿನಿಧಿಸುತ್ತದೆ.

## 48. ಪ್ರಾಪಂಚಿಕ ಸುಖಭೋಗಗಳ ತ್ಯಾಗವೇ ಆನಂದದತ್ತ ನಡೆಸುತ್ತದೆ.

ಆರ್ಜಯಿತ್ವಾಽಖಿಲಾನರ್ಥಾನ್ ಭೋಗಾನಾಪ್ನೋತಿ ಪುಷ್ಕಲಾನ್ ।
ನ ಹಿ ಸರ್ವ ಪರಿತ್ಯಾಗಮನ್ತರೇಣ ಸುಖೀ ಭವೇತ್ ॥ (XVIII-2)

ಅದೆಷ್ಟೋ ಶ್ರಮವಹಿಸಿ ಧನಸಂಪಾದನೆ ಮಾಡಿ ಒಬ್ಬನು ಬಹುವಾಗಿ ತಾತ್ಕಾಲಿಕ ಪ್ರಾಪಂಚಿಕ ಸುಖಗಳನ್ನು ಪಡೆಯುತ್ತಾನೆ. ದುಃಖದ ಮಿಶ್ರಣವಲ್ಲದ ಶಾಶ್ವತ ಸುಖವನ್ನು ಪಡೆಯಬೇಕೆಂದರೆ, ಎಲ್ಲ ಪ್ರಾಪಂಚಿಕ ಸುಖಭೋಗಗಳನ್ನು ತ್ಯಾಗ ಮಾಡಿದಲ್ಲದೆ ಆ ಶಾಶ್ವತ ಸಂತೋಷ ಸಿದ್ಧಿಸುವುದಿಲ್ಲ.

ಈ ಪ್ರಪಂಚದ ಸುಖಭೋಗಗಳನ್ನು ನೀವು ಅನುಭವಿಸಬೇಕಾದರೆ, ನಿಮಗೆ ಒಂದು ಸೊಗಸಾದ ಬಂಗಲೆ, ರೂಪಸಿಯೂ, ಸಹಕಾರಿಯೂ

ಆದ ಪತ್ನಿ, ವಿದೇಶಕ್ಕೆ ಪ್ರವಾಸ ಹೋಗಿ ಅಲ್ಲಿಯ ಪ್ರೇಕ್ಷಣೀಯ ಸ್ಥಳಗಳನ್ನು ನೋಡುವುದಲ್ಲದೆ, ನಿಮ್ಮ ಮಕ್ಕಳು-ಮರಿಗಳಿಗೆ ಉನ್ನತ ವಿದ್ಯಾಭ್ಯಾಸ ಕೊಡಿಸುವುದು ಇತ್ಯಾದಿಗಳಿಗೆ ಕೈತುಂಬ ಹಣವಂತೂ ಬೇಕಲ್ಲ! ಅದಕ್ಕೆ ಶ್ರಮ-ಸಂಕಷ್ಟಗಳು ಎಲ್ಲವೂ ಅನಿವಾರ್ಯ. ಇದಿಷ್ಟೂ ಸಾಧ್ಯವಾಗಬೇಕೆಂದೇ ನೀವು ಒಬ್ಬ ಶ್ರೀಮಂತ ಹುಡುಗಿಯನ್ನು ಮದುವೆಯಾಗುತ್ತೀರಿ. ಎಷ್ಟೋ ದಿನಗಳ ನಂತರ, ಆಕೆಗೆ ಕ್ಯಾನ್ಸರ್ ರೋಗವಿದೆ ಎಂಬುದು ನಿಮಗೆ ತಿಳಿಯುತ್ತದೆ. ಅಥವಾ ಅವಳ ಜೀವನ ದೃಷ್ಟಿಗೂ ನಿಮ್ಮದಕ್ಕೂ ಅಜಗಜಾಂತರ-ಹೀಗಾಗಿ ಅವಳು ಉನ್ಮಾದ ಗ್ರಸ್ತಳಾಗಿಬಿಡುತ್ತಾಳೆ, ಅಥವಾ ತನ್ನ ಬೇಕುಬೇಡಗಳನ್ನು ನೀವು ಗೌರವಿಸುತ್ತಿಲ್ಲ ಎಂಬ ನೆಪದಿಂದ ತವರುಮನೆಗೆ ಓಡಿಬಿಡುತ್ತಾಳೆ. ಬದುಕು ನಿಮಗೊಂದು ನರಕವಾಗುತ್ತದೆ. ನೀವು ಸಂಪಾದಿಸಿದ ಧನಸಂಪತ್ತು ಸಹ ತೆರಿಗೆ, ಸುರಕ್ಷಣೆ ಇತ್ಯಾದಿ ಸಂಕಟಗಳನ್ನು ನಿಮಗೆ ಉಂಟುಮಾಡುತ್ತದೆ.

ಪರಿಶುದ್ಧ ಸಂತೋಷವನ್ನು ನಿಮಗೆ ನೀಡುವ ಯಾವೊಂದು ವಸ್ತುವೂ ಈ ಜಗತ್ತಿನಲ್ಲಿಲ್ಲ. ಸುಖಭೋಗವೂ ಬಹುಕಾಲ ಇರುವಂತಹುದಲ್ಲ. ಅದು ತಾತ್ಕಾಲಿಕ ಮಾತ್ರ. ದುಃಖ, ಸಂಕಟಗಳು ಅದನ್ನು ಹಿಂಬಾಲಿಸುತ್ತವೆ. ನಿಮಗೆ ಶಾಶ್ವತ ಸುಖ ಬೇಕಿದ್ದರೆ, ಅದು ದುಃಖಲೇಪವೂ ಇಲ್ಲದಾಗ ಬೇಕಿದ್ದರೆ, ಆತ್ಮಜ್ಞಾನವನ್ನು ಪಡೆಯುವುದರಿಂದ ಮಾತ್ರ ಅದು ನಿಮಗೆ ಸಾಧ್ಯ. ಆ ಉದ್ದೇಶಕ್ಕಾಗಿ ನೀವು ಗಳಿಸಿದ ಎಲ್ಲ ಸಂಪತ್ತು, ಸಂಗ್ರಹಿಸಿದ್ದ ಸುಖಸಾಧನಗಳು, ಎಲ್ಲವನ್ನೂ ತ್ಯಾಗ ಮಾಡಬೇಕಾಗುತ್ತದೆ. ಹಾಗಲ್ಲದೆ ನಿಮಗೆ ಆನಂದವು ದೊರಯದು. ಆತ್ಮವೊಂದೇ ಸತ್ಯ ಹಾಗೂ ಆನಂದ ಸ್ವರೂಪ ಎಂದು ನೀವು ಅರಿಯಬೇಕು. ಆತ್ಮಸಾಕ್ಷಾತ್ಕಾರಕ್ಕಾಗಿ ಎಲ್ಲ ಪ್ರಾಪಂಚಿಕ ವಸ್ತುಗಳನ್ನೂ ನೀವು ತ್ಯಾಗ ಮಾಡಲೇಬೇಕು.

**49. ಆತ್ಮವು ಸ್ವತಸ್ಸಿದ್ಧವಾದದ್ದು, ಅದಕ್ಕಾಗಿ ಯಾವ ಪ್ರಯತ್ನವೂ ಬೇಕಿಲ್ಲ.**

ನ ದೂರಂ ನ ಚ ಸಂಕೋಚಾತ್ ಲಬ್ಧಮೇವಾತ್ಮನಃ ಪದಂ ।
ನಿರ್ವಿಕಲ್ಪಂ ನಿರಾಯಾಸಂ ನಿರ್ವಿಕಾರಂ ನಿರಂಜನಂ ॥ (XVIII-5)

ಆತ್ಮವು ಬಹುದೂರವೂ ಇಲ್ಲ, ತೀರ ಹತ್ತಿರವೂ ಇಲ್ಲ. ಅದು ನಿಮ್ಮೊಡನೆಯೇ ಇದೆ. ಅದು ಆಗಲೇ ನಿಮಗೆ ಲಬ್ಧವಾಗಿದೆ. ಅದು ನಿಮ್ಮಿಂದ ಬೇರೆಯಲ್ಲ, ಶ್ರಮಸಾಧ್ಯವಲ್ಲ, ವಿಕಾರರಹಿತ, ಕಳಂಕರಹಿತ.



ತನ್ನಿಂದ ಬೇರೆಯಾದ ಒಂದು ವಸ್ತುವನ್ನು ಪಡೆಯಲು ಖಂಡಿತ ವಾಗಿಯೂ ಸ್ವಲ್ಪ ಪ್ರಯತ್ನ ಅಗತ್ಯ. ನೀವೇ ಆಗಿರುವ ನಿಮ್ಮ ಆತ್ಮವನ್ನು ಹೊಂದಲು ಪ್ರಯತ್ನದ ಪ್ರಶ್ನೆಯಾದರೂ ಎಲ್ಲಿ? ಎಲ್ಲ ದೇಹಗಳಲ್ಲಿಯೂ ಇರುವುದು ಒಂದೇ ಆತ್ಮ. ಒಂದೇ ಜನರೇಟರ್‌ನಿಂದ ಹೊಮ್ಮುವ ವಿದ್ಯುತ್ತು ಎಲ್ಲ ಬಲ್ಬುಗಳಲ್ಲೂ ಇರುವ ಹಾಗೆ. ಹೀಗೆಯೇ ಆತ್ಮವು ಸರ್ವವ್ಯಾಪಿಯಾಗಿರುವಾಗ, ಯಾವ ಪ್ರತ್ಯೇಕತೆಯೂ ಇಲ್ಲ. ಶತ್ರುವೂ ಇಲ್ಲ, ಮಿತ್ರನೂ ಇಲ್ಲ. ಎಲ್ಲವೂ ಆತ್ಮವೇ. ಆತ್ಮದಿಂದ ಬೇರೆಯಾದ ಯಾವ ವಸ್ತುವೂ ಇಲ್ಲವೆಂದ ಮೇಲೆ, ಅದು ಬೇರೊಂದು ವಸ್ತುವಿನ ಗುಣಲಕ್ಷಣಗಳನ್ನು ಒಳಗೊಳ್ಳುವ ಪ್ರಶ್ನೆಯೇ ಇಲ್ಲ. ಒಂದು ಜಾಡಿಯಲ್ಲಿ ಇಂಗನ್ನು ಇರಿಸಿದ್ದರೆ, ಜಾಡಿಯು ಅದರ ವಾಸನೆಯಿಂದ ಲಿಪ್ತವಾಗುತ್ತದೆ. ಇಂಗನ್ನು ಹೊರತೆಗೆದ ಬಹುಕಾಲದ ಮೇಲೂ ಆ ವಾಸನೆ ಹೋಗುವುದಿಲ್ಲ. ಆದರೆ ಆತ್ಮವು ಸದಾ ಅಲಿಪ್ತ.

**50. ಆತ್ಮವೊಂದಲ್ಲದೆ ಬೇರೆ ಎಲ್ಲವೂ ಕಾಲ್ಪನಿಕ.**

ಸಮಸ್ತಂ ಕಲ್ಪನಾ ಮಾತ್ರಂ ಆತ್ಮಾ ಮುಕ್ತಃ ಸನಾತನಃ ।
ಇತಿ ವಿಜ್ಞಾಯ ಧೀರೋ ಹಿ ಕಿಮಭ್ಯಸ್ಯತಿ ಬಾಲವತ್ ॥ (XVIII-7)

ಆತ್ಮವನ್ನು ಹೊರತುಪಡಿಸಿ, ಉಳಿದೆಲ್ಲವೂ ಕೇವಲ ಕಲ್ಪನೆ. ಆತ್ಮವು ಸದಾ ಸ್ವತಂತ್ರ ಹಾಗೂ ಶಾಶ್ವತ ಧೀರನು ಇದನ್ನು ಅರಿತಾಗ, ಅವನು ಸಾಧನೆಯನ್ನು ಮತ್ತೆ ಮತ್ತೆ ಬಾಲಕನಂತೆ ಮಾಡುವುದಾದರೂ ಏಕೆ? ಸಾಧನೆ ಮಾಡುವುದು ಏನನ್ನಾದರೂ ಗಳಿಸುವುದಕ್ಕೆ-ಅದು ನಮ್ಮಲ್ಲಿ ಇಲ್ಲ ಎಂಬುದಕ್ಕಾಗಿ ಅಥವಾ ನಮಗೆ ಲಭಿಸುವ ಯಾವುದಾದರೂ ವಸ್ತುವನ್ನು ತಡೆಯುವುದಕ್ಕಾಗಿ (ನಿರಾಕರಿಸುವುದಕ್ಕಾಗಿ). ಆತ್ಮವಾದರೋ ನಮಗೆ ಆಗಲೇ ಲಬ್ಧವಾದದ್ದು, ನಮ್ಮೊಡನೇ ಇರುವಂತಹುದು, ಸಾಧನೆ ಮಾಡುವ ಪ್ರಶ್ನೆಯಾದರೂ ಎಲ್ಲಿ? ಒಂದು ಮಗು (ಬಾಲ)ವಾದರೆ ಉದ್ದೇಶರಹಿತವಾದ ಕೆಲಸವನ್ನು ಮತ್ತೆ ಮತ್ತೆ ಮಾಡುತ್ತಲೇ ಇರುತ್ತದೆ. ವಯಸ್ಕನು ಹಾಗೆ ಮಾಡುವುದಿಲ್ಲ. ರಸ್ತೆಯಲ್ಲಿ ಬಿದ್ದಿರುವುದು ಹಗ್ಗ ಮಾತ್ರ-ಹಾವಲ್ಲ ಎಂದು ಒಮ್ಮೆ ಅರಿವಾಗುತ್ತಿದ್ದಂತಯೇ ಆ ಭ್ರಮೆಯ ಹಾವನ್ನು ಓಡಿಸಲು ಅಥವಾ ಹಗ್ಗವನ್ನೇ ಹಿಡಿದುಕೊಳ್ಳಲು ಮತ್ತೆ ಏನಾದರೂ ಮಾಡುತ್ತಾನೆಯೆ? ಅಲ್ಲಿ ಹಗ್ಗ ಮೊದಲೇ ಇದ್ದದ್ದು, ಅದು ಈಗ ಅವನಿಗೆ ತಿಳಿದಿದೆ. ಜ್ಞಾನಿಯು ಪೂರ್ಣ ಹಾಗೂ ಕುಶಲಿ. ಅವನು

ಆತ್ಮಸಂತುಷ್ಟನಾಗಿಯೇ ಇದ್ದಾನೆ. ಅವನ ದೃಷ್ಟಿಯಲ್ಲಿ ಅವನಿಗೆ ಬೇಕಾದುದು ಏನೂ ಇಲ್ಲ. ತನ್ನ ಸ್ವರೂಪದಲ್ಲಿಯೇ ಸ್ಥಿರವಾಗಿದ್ದಾನೆ. ಸಮಸ್ತ ಪ್ರಪಂಚವೂ ತನ್ನದೇ ಆದ ಸ್ವತಂತ್ರ ಅಸ್ತಿತ್ವವನ್ನು ಹೊಂದಿಯೇ ಇಲ್ಲ, ಅದು ತನ್ನ ಕಲ್ಪನೆಯ ಒಂದು ಭಾವವಷ್ಟೇ ಎಂಬುದನ್ನು ನಿಸ್ಸಂದೇಹವಾಗಿ ಅರಿತ ಮೇಲೆ ಅವನು ಒಬ್ಬ ಬಾಲಕನಂತೆ ಏನನ್ನೋ ಪಡೆಯಲು ಯಾವುದಾದರೂ ಕ್ರಿಯೆಯನ್ನು ಮಾಡುತ್ತಾನೆಯೆ? ಅಂತಹ ವಸ್ತುವೂ, ಜಗತ್ತೂ ಸ್ವಪ್ನ ಮಾತ್ರವೇ. (ಮೋಕ್ಷವೂ ಆಗಲೇ ಇದ್ದೇ ಇರುವಂತಹುದು-ಗಳಿಸುವಂತಹುದಲ್ಲ).

## 51. ಆತ್ಮವು ಬ್ರಹ್ಮವೇ ಆಗಿದೆ- ಉಳಿದುದೆಲ್ಲ ಕಾಲ್ಪನಿಕ.

ಆತ್ಮಾ ಬ್ರಹ್ಮೇತಿ ನಿಶ್ಚಿತ್ಯ ಭಾವಾಭಾವೌ ಚ ಕಲ್ಪಿತೌ ।
ನಿಷ್ಕಾಮಃ ಕಿಂ ವಿಜಾನಾತಿ ಕಿಂ ಬ್ರೂತೇ ಚ ಕರೋತಿ ಕಿಂ? ॥
(XVIII-8)

ಶಾಸ್ತ್ರ ವ್ಯಾಸಂಗ, ಗುರೂಪದೇಶ ಹಾಗೂ ಸಾಧನ ಇವುಗಳಿಂದ, ಆತ್ಮವು (ಜೀವಾತ್ಮ-ದೇಹವನ್ನು ಕ್ರಿಯಾಶೀಲವಾಗಿ ಮಾಡುವ ಶಕ್ತಿ) ಬ್ರಹ್ಮವಲ್ಲದೆ (ಪರಮಾತ್ಮ) ಬೇರೆಯಲ್ಲ ಎಂಬುದು ಒಬ್ಬನಿಗೆ ನಿಶ್ಚಿತವಾದ, ನಿಶ್ಚಯವಾಗುತ್ತದೆ. ಅದು ಒಂದು ನೀರಿನ ಶೀಷೆಯಲ್ಲಿ ತುಂಬಿ ತಂದ ಗಂಗಾಜಲವು ಹರಿದ್ವಾರ ಅಥವಾ ಕಾಶಿ (ವಾರಾಣಸಿ)ಯಲ್ಲಿ ಹರಿಯುವ ಗಂಗೆಯೇ ಎಂದು ಹೇಳಿದಂತೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಒಂದು ನೀರಿನ ಶೀಷೆಯಲ್ಲಿ ತುಂಬಿರುವ ನೀರು, ಹರಿಯುತ್ತಿರುವ ಗಂಗಾನದಿಯ ನೀರಿನಷ್ಟೇ ಪವಿತ್ರವಾದದ್ದು. ಬ್ರಹ್ಮನ್ ಅಥವಾ ಆತ್ಮನ್ ಎರಡೂ ಒಂದೇ, ಯಾವಾಗಲೂ ಇದ್ದದ್ದು, ಅದು ಅವಿನಾಶಿ. ಇನ್ನೂ ಒಳ್ಳೆಯ ಉದಾಹರಣೆಯೆಂದರೆ, ಜನರೇಟರ್‌ನಿಂದ-ನಿಮ್ಮ ಮನೆಯಲ್ಲಿ ಬೆಳಗುವ 20 ಬಲ್ಬುಗಳಲ್ಲಿ ಪ್ರವಹಿಸುತ್ತಿರುವ ವಿದ್ಯುತ್ತೇ ಆಗಿದೆ. ಆತ್ಮನಿಂದ ಬೇರೆಯಾದ ಪ್ರತಿಯೊಂದು ವಸ್ತುವೂ ಕೇವಲ ಸ್ವಪ್ನ ವಸ್ತುಗಳು ಅಥವಾ ಕಾಲ್ಪನಿಕ ವಸ್ತುಗಳು. ಸ್ವಲ್ಪಕಾಲ ಅವು ಇದ್ದುಕೊಂಡು ಅನಂತರ ಇಲ್ಲವಾಗುವಂತಹವು. ಒಂದು ಹೂಜಿಯು ಇವತ್ತು ಇರುತ್ತದೆ, ನಾಳೆ ಅದು ಒಡೆದು ಹೋಗಬಹುದು. ಅದನ್ನು ಎಸೆದುಬಿಡಬಹುದು. ಅದರ ಅಸ್ತಿತ್ವ ಇಲ್ಲವಾಗುತ್ತದೆ. ಈ ಎಲ್ಲ ವಸ್ತುಗಳೂ, ಈ ಜಗತ್ತೂ ಸಹ, ನಿದ್ರೆಯಲ್ಲಿ ನಾವು ಕಲ್ಪಿಸಿಕೊಂಡ ಸ್ವಪ್ನ



ಪ್ರಪಂಚವೇ. ಅವು ಸ್ವಪ್ನವನ್ನು ಕಾಣುತ್ತಿರುವವನ ಮೇಲೆ ಅಧ್ಯಾರೋಪಗೊಂಡದ್ದು. ಅವನೂ ಸಹ ಸಾಪೇಕ್ಷ ಸತ್ಯವಷ್ಟೆ! ಕತ್ತಲಲ್ಲಿ ಹಗ್ಗವನ್ನು ಹಾವೆಂದು ಕಲ್ಪಿಸಿಕೊಂಡಂತೆ ಸತ್ಯ ವಸ್ತುವಿನ ಮೇಲೆ ಅಧ್ಯಾರೋಪಿತವಾದದ್ದು. ನೀವು ನೋಡಿ ಉದ್ದ-ಅಗಲದ ಹಾವು ಹಗ್ಗವಲ್ಲದೆ ಬೇರೆಯಲ್ಲ. ಹಗ್ಗವಿಲ್ಲದೆ ಹಾವು ಹೇಗೆ ಇಲ್ಲವೋ, ಆತ್ಮನಿಂದ ಹೊರತಾದ ಬೇರೆ ಪ್ರಪಂಚವೂ ಇಲ್ಲ. ಸದಾ ಸರ್ವದಾ ಆತ್ಮವೇ ಆಗಿರುವ ಜೀವನ್ಮುಕ್ತನು ಏನು ತಾನೇ ಹೇಳಬಲ್ಲ ಅಥವಾ ಮಾಡಬಲ್ಲ, ಏಕೆಂದರೆ ಮಾತನಾಡುವುದು ಯಾರೊಡನೆ? ಅಥವಾ ಯಾವುದರ ಬಗ್ಗೆ? ಅರ್ಥಮಾಡಿಕೊಳ್ಳಬೇಕಾದುದೇನೆಂದರೆ -

**"ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಆತ್ಮಾ ಬ್ರಹ್ಮೈವ ಕೇವಲಂ ।"**
**(ಬ್ರಹ್ಮವೊಂದೇ ಸತ್ಯ. ಸಮಸ್ತ ಪ್ರಪಂಚವೂ ಮಿಥ್ಯೆ. ಆತ್ಮವು ಬ್ರಹ್ಮವೇ ಆಗಿದೆ).**

ಸಮಸ್ತ ಜಗತ್ತೂ ಕೇವಲ ಕಾಲ್ಪನಿಕ ಎಂದೂ, ಆತ್ಮನಲ್ಲಿ ಅಧ್ಯಾರೋಪಿತ ಮಾತ್ರ, ತಾತ್ಕಾಲಿಕ, ಎಂದು ಅರಿತುಕೊಂಡವನು ತಿಳಿಯಬೇಕಾದದ್ದು ಬೇರೆ ಏನೂ ಇಲ್ಲ. ಜೀವನ್ಮುಕ್ತನು ಎಲ್ಲ ಪ್ರಾಪಂಚಿಕ ವಾಸನಾಗಳನ್ನೂ ಎಲ್ಲ ಕಾಲಕ್ಕೂ ಕಳೆದುಕೊಂಡುಬಿಟ್ಟಿರುತ್ತಾನೆ.

## 52. ಜೀವನ್ಮುಕ್ತನು ತಾನು ರಾಜನಾಗಿರಲಿ, ಭಿಕ್ಷುಕನಾಗಿರಲಿ, ಆ ಬಗ್ಗೆ ಅನಾಸಕ್ತನೇ ಆಗಿರುತ್ತಾನೆ.

ಸ್ವಾರಾಜ್ಯೇ ಭೈಕ್ಷವೃತ್ತೌ ಚ ಲಾಭಾ ಲಾಭೇ ಜನೇ ವನೇ ।
ನಿರ್ವಿಕಲ್ಪ ಸ್ವಭಾವಸ್ಯ ನ ವಿಶೇಷೋಸ್ತಿ ಯೋಗಿನಃ ॥
(XVIII -11)

ಒಬ್ಬ ಯೋಗಿಯು ತಾನು ರಾಜನಾಗಿರಲಿ, ಭಿಕ್ಷುಕನೇ ಆಗಿರಲಿ, ಯಾವ ವ್ಯತ್ಯಾಸವನ್ನೂ ಕಾಣುವುದಿಲ್ಲ. ತಾನು ಕಾಡಿನಲ್ಲಿರಲಿ, ನಾಡಿನಲ್ಲಿ ಜನಗಳ ಮಧ್ಯದಲ್ಲಿರಲಿ, ಲಾಭವಾಗಲಿ, ನಷ್ಟವಾಗಲಿ, ಯಾವ ವಿಶೇಷತೆಯನ್ನೂ ಕಾಣುವುದಿಲ್ಲ. ಇದು ಹೇಗೆ ಎಂದರೆ, ಸ್ವಭಾವತಃ ಒಂದನ್ನು ಮತ್ತೊಂದರಿಂದ ಬೇರೆಯಾಗಿ ಗುರುತಿಸುವುದೇ ಇಲ್ಲ.

ಜ್ಞಾನಿಯು, ಸಮಸ್ತ ಪ್ರಪಂಚವೂ ಜಾಗೃತ ಬದುಕಿನಲ್ಲಿಯೂ ಅದು ಕನಸಿನಂತೆ ಕಾಲ್ಪನಿಕ ಸೃಷ್ಟಿ ಎಂದು ತಿಳಿದಿರುತ್ತಾನೆ. ಆದರೆ

ಅದನ್ನು ಸತ್ಯ ಎಂದು ಭಾವಿಸಿಬಿಟ್ಟಿರುವುದರಿಂದ, ಪೈಪೋಟಿಯಿಂದ ಹಣ, ಅಧಿಕಾರ ಇತ್ಯಾದಿಗಳಿಗಾಗಿ ಹಂಬಲಿಸುತ್ತೇವೆ. ನೀವು ಕನಸಿನಲ್ಲಿ ಒಂದು ಬೃಹತ್‌ರಾಷ್ಟ್ರದ ಅಧ್ಯಕ್ಷರಾದಂತೆ ಅಥವಾ ಹಾದಿಬೀದಿಯಲ್ಲಿ ಜನಗಳ ಎದುರು ಕೈಚಾಚಿ ಭಿಕ್ಷೆ ಬೇಡುವಂತೆ ಓಡಾಡುತ್ತಿದ್ದರೆ, ಅದರಿಂದ ಏನಾದ ಹಾಗಾಯಿತು? ಒಂದು ಮತ್ತೊಂದರಷ್ಟೇ ಸತ್ಯವಷ್ಟೇ? ಎರಡೂ ಮಿಥ್ಯೆಯೇ, ಆದುದರಿಂದ ಕನಸಿನಲ್ಲಿ ನೀವು ಏನೇ ಆದರೂ ಅದರಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲ. ಹಾಗೆಯೇ ಒಮ್ಮೆ ನೀವು ಜೀವನ್ಮುಕ್ತರಾದಿರಿ ಎಂದರೆ ಎಲ್ಲ ಬದುಕೂ, ಎಲ್ಲ ಪ್ರಪಂಚವೂ ಕನಸಿನಂತೆಯೇ ಎಂದು ಚೆನ್ನಾಗಿ ತಿಳಿದಿರುತ್ತೀರಿ. ಆದುದರಿಂದ ಒಂದು ವಸ್ತುವನ್ನು ಮತ್ತೊಂದರಿಂದ ಬೇರೆಯಾಗಿ ಕಾಣುವುದೇ ಇಲ್ಲ. ಏಕೆಂದರೆ ಅವೆಲ್ಲವೂ ಕನಸಿನ ವಸ್ತುಗಳೇ. ಇಂತಹ ಸ್ಥಿತಿಯಲ್ಲಿ ನೀವು ಸಮಸ್ತ ರಾಜ್ಯವನ್ನೇಗಳಿಸಿರಲಿ ಅಥವಾ ಬಡಭಿಕ್ಷುಕನಾಗಿರಲಿ, ಯಾವ ವ್ಯತ್ಯಾಸವೂ ನಿಮಗೆ ಕಾಣುವುದಿಲ್ಲ. ಹಾಗೆಯೇ ಲಾಟರಿಯಲ್ಲಿ ಭಾರೀ ಮೊತ್ತದ ಹಣ ದೊರೆಯಲಿ ಅಥವಾ ನೀವು ದಿವಾಳಿಯಾಗಿರಲಿ, ಬ್ಯಾಂಕಿನಲ್ಲಿರಿಸಿದ್ದ ಹಣ ಕಳ್ಳತನವಾಗಿರಲಿ (ಬ್ಯಾಂಕೇ ಪಾಪರ್ ಆಗಿ) ಅದು ಯಾವ ಆಸಕ್ತಿಯನ್ನಾಗಲೀ, ಆತಂಕವನ್ನಾಗಲೀ ಉಂಟುಮಾಡುವುದಿಲ್ಲ. ನೀವು ಜನಗಳ ಮಧ್ಯೆ ಇರಲಿ ಕಾಡಿನಲ್ಲಿ ಏಕಾಂತದಲ್ಲಿರಲಿ, ಯಾವ ವ್ಯತ್ಯಾಸವೂ ತೋರುವುದಿಲ್ಲ. ಆತ್ಮವಾಗಿ ನೀವು ಸದಾ ಏಕಾಂಗಿಯೇ, ಕಾಡು-ಜನಸಮುದಾಯ ಎರಡೂ ಬರಿಯ ಭ್ರಮೆಯೇ.

ಜ್ಞಾನಿಯು ತನ್ನದೇ ನಿಜಸ್ವರೂಪವಾದ ಪರಿಶುದ್ಧ ಆತ್ಮವನ್ನು ಸಾಕ್ಷಾತ್ಕರಿಸಿಕೊಂಡನೆಂದರೆ, ಅವನು ಪೂರ್ಣನೇ ಆಗಿಬಿಡುತ್ತಾನೆ. ಯಾವ ಕೊರತೆಯೂ ಅವನಿಗಿರುವುದಿಲ್ಲ. ಆತ್ಮನಿಷ್ಠನಾಗಿರುವುದಕ್ಕಿಂತ ಅತಿಶಯವಾದ ಆನಂದ ಯಾವುದೂ ಇಲ್ಲ ಎಂದು ಶಾಸ್ತ್ರಗಳು ದೃಢವಾಗಿ ಸಾರುತ್ತವೆ. ತೈತ್ತರೀಯ ಉಪನಿಷತ್ತಿನಲ್ಲಿ ತರುಣ, ದೈಹಿಕವಾಗಿಯೂ, ಬಲಿಷ್ಠನಾದ ಒಳ್ಳೆಯವ, ಸಂಪದ್ಯುಕ್ತವಾದ ಸಮಸ್ತ ಭೂಮಂಡಲದ ಚಕ್ರವರ್ತಿ ಈ ಎಲ್ಲರನ್ನು ಒಂದು ಮೂಲಮಾನವಾಗಿ ಮನುಷ್ಯನ ಗರಿಷ್ಠ ಆನಂದವಾಗಿ ಪರಿಗಣಿಸಿ ಅದನ್ನು 100ರಷ್ಟು ಹೆಚ್ಚಿಸುತ್ತಲೇ ಹೋದರೆ, ಅಂತಿಮ ಬ್ರಹ್ಮಾನಂದವನ್ನು ತಲುಪುತ್ತಾನೆ ಅಥವಾ ಆತ್ಮನಿಷ್ಠನ ಆನಂದವನ್ನು ಅನುಭವಿಸುತ್ತಾನೆ. ಆದುದರಿಂದ ಮುಕ್ತಿಯ ಸ್ಥಿತಿ ಎಷ್ಟು ಎತ್ತರವಾದುದೆಂದರೆ, ಸಮಸ್ತ ಭೂಮಂಡಲದ ಒಡೆತನವು ನೀಡುವ ಆನಂದವನ್ನು ಅದಕ್ಕೆ ಹೋಲಿಸಲಾಗುವುದಿಲ್ಲ.



ಜೀವನ್ಮುಕ್ತಿಯು ನಮ್ಮ ಪರಿಕಲ್ಪನೆ ಅಥವಾ ಗ್ರಹಿಕೆಗೆ ಮೀರಿದ ಪೂರ್ಣತೆಯ ಸ್ಥಿತಿ.

## 53. ಅದ್ವೈತದಲ್ಲಿ ಸ್ಥಿರನಾದ ವ್ಯಕ್ತಿಗೆ, ಬ್ರಹ್ಮವನ್ನು ಕುರಿತ ಚಿಂತನೆಯೂ ಅನಗತ್ಯ

ಯೇನ ದೃಷ್ಟಂ ಪರಂ ಬ್ರಹ್ಮ ಸೋऽಹಂ ಬ್ರಹ್ಮೇತಿ ಚಿಂತಯೇತ್ ।
ಕಿಂ ಚಿಂತಯತಿ ನಿಶ್ಚಿಂತೋ ದ್ವಿತೀಯಂ ಯೋ ನ ಪಶ್ಯತಿ ॥
(XVIII-16)

ಪರಬ್ರಹ್ಮದಲ್ಲಿ ನೆಲೆನಿಂತ ವ್ಯಕ್ತಿಯು 'ಸೋऽಹಂ ಬ್ರಹ್ಮಾಸ್ಮಿ' ಎಂದೇ ಧ್ಯಾನಿಸಲಿ, ಅದ್ವೈತದಲ್ಲಿ ಸ್ಥಿರನಾದವನಿಗಾದರೋ-ಆತ್ಮವಲ್ಲದೇ ಬೇರಾವ ವಸ್ತುವಾಗಲಿ, ವ್ಯಕ್ತಿಯಾಗಲೀ ಕಾಣುವುದೇ ಇಲ್ಲ, ಎಂದರೆ ಯಾವುದನ್ನು ಅವನು ಧ್ಯಾನಿಸಬೇಕು?

ಧ್ಯಾನದ ಅತಿ ಎತ್ತರದ ಸ್ಥಿತಿಯ ಸಾಧನೆಯ ಒಂದು ಪ್ರಮುಖ ಮಾರ್ಗವೆಂದರೆ (ವಿಧಾನ) 'ಸೋऽಹಂ ಬ್ರಹ್ಮಾಸ್ಮಿ'- ನಾನು ಆ ಬ್ರಹ್ಮವೇ ಎಂದು ಧ್ಯಾನಿಸುತ್ತಾ ಹೋಗುವುದು. ನಮ್ಮ ಅಧಿಕೃತ ಶಾಸ್ತ್ರ ಗ್ರಂಥಗಳಲ್ಲಿ ವಿಶ್ಲೇಷಣೆಗೆ ನಿರೂಪಿಸಿದ ಒಂದು ಉದಾಹರಣೆ ಎಂದರೆ "ಸೋಯಂ ದೇವದತ್ತಃ"। ಇದು ಆ ದೇವದತ್ತನೇ ಹೌದು ಎಂಬುದು. ಹಲವಾರು ವರ್ಷಗಳಿಂದ ಈ ದೇವದತ್ತ ಹೌದು ಎಂಬುದು. ಹಲವಾರು ವರ್ಷಗಳಿಂದ ಈ ದೇವದತ್ತ ನಿಮಗೆ ಪರಿಚಿತ, ಆತ ಉದ್ಯೋಗದಲ್ಲಿ ನಿಮ್ಮ ಜೊತೆಗಾರ. ಆಗ ಅವನಿಗೆ ತಲೆ ತುಂಬ ಕಪ್ಪುಕೂದಲು. ಕಪ್ಪು ಮೀಸೆ ಬೇರೆ. ಯಾವಾಗಲೂ ಪೂರಾ ಸೂಟ್‌ಧಾರಿ, ಜೊತೆಗೆ ಟೈ ಸಹ. ಆದರೆ ಈಗ ಅವನನ್ನು ಕಾಷಾಯ ವಸ್ತ್ರಧಾರಿ ಸಂನ್ಯಾಸಿಯಂತೆ ನೋಡುತ್ತಿದ್ದೀರಿ. ಬೋಳುತಲೆ, ಮೀಸೆಯೂ ಬೆಳ್ಳಗಾಗಿದೆ, ಗಡ್ಡ ಸಹ ಬಿಳಿ, ಮುಪ್ಪು ಅಡರಿದೆ. ದೇಹವೂ ಕೃಶವಾಗಿದೆ. ಅವನನ್ನು ಕಂಡು ನೀವು-ಓಹ್! ಇವನು ಅದೇ ದೇವದತ್ತ ಎನ್ನುತ್ತೀರಿ. ಅವನನ್ನು ಹೇಗೆ ಗುರುತಿಸಿದಿರಿ? ಮೀಸೆ ಮುಂತಾದ ಎಲ್ಲ ಬಾಹ್ಯ ಉಪಾಧಿಗಳನ್ನೂ ಬಿಟ್ಟು ಎರಡೂ ಸ್ಥಿತಿಯಲ್ಲಿ (ಅಂದಿನ-ಇಂದಿನ) ಅವುಗಳನ್ನು ಗುರುತಿಸುತ್ತಾ-ಅಲ್ಲವೇ? ಹಾಗೆಯೇ ವ್ಯಕ್ತಿಯ ಮುಖ್ಯ ಚಹರೆಗಳನ್ನು ಗುರುತಿಸುತ್ತಾ ಬ್ರಹ್ಮದೊಡನೆ ತುಲನೆ ಮಾಡುತ್ತಾ ನಾವು ಆ ಬ್ರಹ್ಮವಸ್ತುವೇ ಎಂಬ ತೀರ್ಮಾನಕ್ಕೆ ಬಂದೆವು. "ಆ ದೇವದತ್ತನೇ" ಎಂದು ನೀವು

ಹೇಳಿದಾಗ ಹಲವು ವರ್ಷಗಳ ಮೊದಲು ನೀವು ನೋಡಿದ್ದವನೇ ಎಂಬ ಅರ್ಥದಲ್ಲಿ ನುಡಿದಿರಿ. ಹಾಗೆಯೇ ನಾನು ಬ್ರಹ್ಮವೇ. ಈ ಮೊದಲು ಬ್ರಹ್ಮವನ್ನು ಕಂಡಿದ್ದೆ ಎಂದೇ ಅರ್ಥ. ಆದರೆ ಯಾರೂ ಬ್ರಹ್ಮವನ್ನು ಕಂಡಿರಲಾರರು. ವ್ಯತ್ಯಾಸವಿರದಂತಹ, ರೂಪರಹಿತವಾದ ಅ–ವ್ಯಕ್ತಿತ್ವದ ಪರಮಾತ್ಮ. ಆತನ ಇಚ್ಛೆಯಂತೆಯೇ ದೇವತೆಗಳು (ಈಶ್ವರರು) ಬ್ರಹ್ಮ ವಿಷ್ಣು ಶಿವಬ್ರಹ್ಮ ಮುಂತಾದವರು ಕಾರ್ಯತತ್ಪರರಾಗಿದ್ದಾರೆ. ಉಳಿದ ಎಲ್ಲರೂ, ಜೀವರುಗಳನ್ನು ಹೋಲುತ್ತಾರೆ. ಅಂತಿಮ ಸ್ಥಿತಿಯಲ್ಲಿ ಬ್ರಹ್ಮನೊಬ್ಬನೇ ಉಳಿಯುತ್ತಾನೆ. ಬ್ರಹ್ಮನನ್ನು ಯಾರೂ ನೋಡಿಯೇ ಇಲ್ಲವಾದುದರಿಂದ, ಆ ಬ್ರಹ್ಮನನ್ನು ಕುರಿತು ನೀವು ಹೇಗಾದರೂ ಧ್ಯಾನ ಮಾಡುತ್ತೀರಿ? ಬ್ರಹ್ಮನನ್ನು ನೋಡಲು ಯಾರಿಗೂ ಸಾಧ್ಯವಿಲ್ಲ. ಏಕೆಂದರೆ "ನೋಡುವುದು ಎಂದರೆ ನೋಟಕನಿಂದ ಬೇರೆಯಾದ ಒಂದು ವಸ್ತುವಿರಬೇಕು. ಬ್ರಹ್ಮನ್‌ವೊಂದೇ ಇರುವಾಗ ಅವನೊಬ್ಬನೇ ಆಗುತ್ತಾನೆ. ಅವನೇ ನೋಟಕ – ನೋಟ ಎಂಬುದು ಬೇರೆಯಿಲ್ಲ (ವಿಷಯ ಎಂಬುದಿಲ್ಲ) ಆದುದರಿಂದ ಬ್ರಹ್ಮನನ್ನು ನೋಡುವುದು ಸಾಧ್ಯವೇ ಇಲ್ಲ. ಅಷ್ಟಾವಕ್ರರು ಹೇಳುವುದೇನೆಂದರೆ, ಬ್ರಹ್ಮನನ್ನು ನೋಡಿದವನು ಯಾರಾದರೂ ಇದ್ದರೆ ಅಗತ್ಯವಾಗಿ ಅವನು ಧ್ಯಾನ ಮಾಡಲಿ ! "ಅಹಂಬ್ರಹ್ಮಾಸ್ಮಿ" ಎಂದು ಜೀವನ್ಮುಕ್ತನಾದರೋ ಆತ್ಮವಾಗಿ ಮಾತ್ರ ಇರುತ್ತಾನೆ. ಆಲೋಚಿಸಲು ಬೇರೆ ಯಾವ ವಸ್ತುವೂ ಇಲ್ಲ. ಅವನ ಮನಸ್ಸು 'ಅಮನಸ್' ಆಗಿ ಬಿಟ್ಟಿದೆ. ಬ್ರಹ್ಮನನ್ನು ಕುರಿತು ಅವನು ಹೇಗೆ ತಾನೇ ಯೋಚಿಸಬಲ್ಲ? ಅಹಂ ತದ್ ಬ್ರಹ್ಮ ಎಂದು ಹೇಳಬಲ್ಲ? ಅಷ್ಟಾವಕ್ರರ ಮಾರ್ಗ ಸಹಜಮಾರ್ಗ– ಅದರಲ್ಲಿ ಸಾಗಲು ಬೇರೆ ಯಾವ ಶಕ್ತಿಯೂ ಅಗತ್ಯವಿಲ್ಲ.

**54. ಜ್ಞಾನಿಯು ಬೇರೆ ಎಲ್ಲರಂತೆಯೇ ಜೀವಿಸುತ್ತಾನೆ. ಆದರೆ ಅಂತರಂಗದಲ್ಲಿ ಅವನು ವಿಚಲಿತನೂ ಆಗುವುದಿಲ್ಲ–ಸ್ಥಿಮಿತ ಚಿತ್ತನೂ ಆಗುವುದಿಲ್ಲ.**

ಧೀರೋ ಲೋಕವಿಪರ್ಯಸ್ತೋ ವರ್ತಮಾನೋಪಿ ಲೋಕವತ್ ।
ನ ಸಮಾಧಿಂ ನ ವಿಕ್ಷೇಪಂ ನ ಲೇಪಂ ಸ್ವಸ್ಯ ಪಶ್ಯತಿ ॥ (XVIII -18)

ಜ್ಞಾನಿಯ ವರ್ತನೆ ಹಾಗೂ ಗುಣಲಕ್ಷಣಗಳು, ಪ್ರಪಂಚದಲ್ಲಿ ವಾಸಿಸುತ್ತಿರುವಾಗ ಸಾಮಾನ್ಯ ಮನುಷ್ಯನಂತೆಯೇ ತೋರಿದರೂ,



ಸಾಮಾನ್ಯ ಮನುಷ್ಯನ ವರ್ತನೆ, ಗುಣಸ್ವಭಾವಕ್ಕೆ ವಿರುದ್ಧವೇ ಆಗಿರುತ್ತದೆ. ಅವನು ಸಮಾಧಿ ಸ್ಥಿತಿಯಲ್ಲಿ ಶಾಂತನಾಗಿ ಕುಳಿತಿರುವುದೂ ಇಲ್ಲ. ಮನಸ್ಸು ವಿಚಲಿತವಾಗಿಯೂ ಇರುವುದಿಲ್ಲ, ಬೇರೆಯವರ ಗುಣ ಸ್ವಭಾವಗಳನ್ನು ಅನುಕರಿಸುವುದೂ ಇಲ್ಲ.

ಕಾಲ್ಪನಿಕ ಪ್ರಪಂಚದಿಂದ ಅವನು ಪಡೆಯಬೇಕಾದುದು ಏನೂ ಇಲ್ಲದಿರುವು ದರಿಂದ, ಜ್ಞಾನಿಯು ಯಾವ ಕೆಲಸ ಮಾಡಲೂ ಆಸಕ್ತನಾಗಿರುವುದಿಲ್ಲ. ಅವನಿಂದ ಬೇರೆಯಾದ ಯಾವ ವಸ್ತುವೂ ಇಲ್ಲದುದರಿಂದ, ಅವುಗಳ ಬಗೆಗೆ ಅವನಲ್ಲಿ ಯಾವ ಆಲೋಚನೆಯೂ ಇರುವುದಿಲ್ಲ. ಆದುದರಿಂದ ಅವನ ಮನಸ್ಸು ಯಾವ ಉದ್ವೇಗ, ಆತಂಕಕ್ಕೂ ಒಳಗಾಗುವುದಿಲ್ಲ. ಸಾಮಾನ್ಯ ಮನಷ್ಯನು ಇದಕ್ಕೆ ತೀರ ವಿರುದ್ಧವಾಗಿಯೇ ಇರುತ್ತಾನೆ. ಅವನು ಯಾವಾಗಲೂ ಆಲೋಚನೆ ಗಳಿಂದ ವಿಚಲಿತನಾಗುತ್ತಾನೆ, ಏನಾದರೊಂದು ಕೆಲಸದಲ್ಲಿ ತೊಡಗಿಕೊಂಡೇ ಇರುತ್ತಾನೆ. ಪ್ರಪಂಚದಲ್ಲಿ ಜೀವಿಸುತ್ತಿರುವಾಗ ಜೀವನ್ಮುಕ್ತನೂ ಸಾಮಾನ್ಯ ಮನುಷ್ಯನಂತೆಯೇ ವರ್ತಿಸುತ್ತಾನೆ. ಜನರೊಡನೆ ತಮಾಷೆ ಮಾಡುತ್ತಾನೆ, ಬೇರೆಯವರ ಚಟುವಟಿಕೆಗಳಲ್ಲಿ ಪಾಲು ಗೊಳ್ಳುತ್ತಾನೆ. ಯಾವುದೇ ಸಾಮಾನ್ಯ ಮನುಷ್ಯನಂತೆಯೇ ವ್ಯವಹರಿಸುತ್ತಾನೆ. ಆದುದರಿಂದ ಜನಗಳಿಗೆ ಜ್ಞಾನಿಗೂ, ಅಜ್ಞಾನಿಗೂ ಯಾವ ವ್ಯತ್ಯಾಸವೂ ಇಲ್ಲ ಎಂಬಂತೆಯೇ ತೋರುತ್ತದೆ.

ಒಮ್ಮೆ ರಮಣ ಮಹರ್ಷಿಗಳನ್ನು ನೋಡಲೆಂದು ಒಬ್ಬ ಸಂದರ್ಶಕನು ವಿರೂಪಾಕ್ಷ ಗುಹೆಯ ಬಳಿಗೆ ಹೋದ. ಆತನು ಮಹರ್ಷಿಗಳ ಬಗ್ಗೆ ಬಹಳವಾಗಿ ಕೇಳಿದ್ದ. ಆ ಹೊತ್ತಿನಲ್ಲಿ ಭಗವಾನ್ ರಮಣರು ಯಾವುದೋ ಉದ್ಯಾನದ ಕೆಲಸ ಮಾಡುತ್ತಿದ್ದರು. ಕೇವಲ ಕೌಪೀನಧಾರಿಯಾಗಿದ್ದರು. ರಮಣ ಮಹರ್ಷಿಗಳನ್ನು ಕಾಣುವ ತನ್ನ ಆಭಿಲಾಷೆಯನ್ನು ಆ ಸಂದರ್ಶಕ ಅವರ ಮುಂದೆಯೇ ಹೇಳಿಕೊಂಡನು! ಸ್ವಲ್ಪ ಕಾಯುವಂತೆ ಅವನಿಗೆ ಹೇಳಿ, ಮಹರ್ಷಿ ಗುಹೆಯ ಒಳಗೆ ಹೋದರು. ಸೊಂಟದ ಸುತ್ತ ಒಂದು ಟವಲ್ ಸುತ್ತಿಕೊಂಡು ಹೊರಗೆ ಬಂದು ತಾವೇ ರಮಣ ಎಂದು ಪರಿಚಯಿಸಿಕೊಂಡರು! ಅಂತಹ ಮಹಾಜ್ಞಾನಿ ಹೀಗೆ ಸಾಮಾನ್ಯನಂತೆ ಕಾಣುತ್ತಾರೆ. ತೋಟದ ಕೆಲಸವನ್ನೂ ಮಾಡುತ್ತಾರೆ ಎಂದು ಸಂದರ್ಶಕ ನಂಬಲಾರದೆ ಹೋದ.

ನಾನು ಮತ್ತೊಂದು ಕಥೆಯನ್ನೂ ಕೇಳಿದ್ದೇನೆ. ಒಬ್ಬ ದೊಡ್ಡ ಮಹಾತ್ಮ (ಸಂತ) ಒಂದು ದೇವಸ್ಥಾನದಲ್ಲಿ ಕೆಲವು ಶಿಷ್ಯರಿಗೆ ಅಧ್ಯಾತ್ಮ ವಿಷಯದಲ್ಲಿ ಉಪದೇಶ ಮಾಡುತ್ತಿದ್ದರು. ಯಾರೋ ಒಬ್ಬನು ಬಂದು ಹಲವರು ಕುದುರೆ ಸವಾರಿಯಲ್ಲಿ ದರೋಡೆಕೋರರು ಯಾವ ಕ್ಷಣದಲ್ಲಾದರೂ ಬರುವ ಸಂಭವವಿದೆ ಎಂಬ ಸುದ್ದಿಯನ್ನು ತಂದನು. ಅವರು ಗ್ರಾಮದ ಜನರನ್ನು ಕೊಲ್ಲಬಹುದು, ಲೂಟಿ ಮಾಡಲೂಬಹುದು ಎಂದನು. ಈ ಸುದ್ದಿಯನ್ನು ಕೇಳುತ್ತಿದ್ದಂತೆಯೇ ವೇದಾಂತ ಶ್ರವಣ ಮಾಡುತ್ತಿದ್ದ ಶಿಷ್ಯರು ಅಕ್ಕ-ಪಕ್ಕದ ಕಾಡುಗಳಲ್ಲಿ, ಬಚ್ಚಿಟ್ಟುಕೊಳ್ಳಲು ಓಡಿಯೇ ಹೋದರು! ಅವರೊಡನೆ ಆ ಸಂತನೂ ಬಚ್ಚಿಟ್ಟುಕೊಳ್ಳಲು ದೌಡಾಯಿಸಿದರು. ಡಕಾಯಿತರು ಗ್ರಾಮವನ್ನು ಲೂಟಿ ಮಾಡಿ ಹೊರಟಹೋದ ಮೇಲೆ ಈ ಎಲ್ಲರೂ ದೇವಾಲಯಕ್ಕೆ ಹಿಂತಿರುಗಿದರು. ಶಿಷ್ಯರು ಗುರೂಜಿಯನ್ನು ಪ್ರಶ್ನಿಸಿದರು-"ಸ್ವಾಮಿ, ತಾವು ಯಾವಾಗಲೂ ನಮ್ಮ ಕಿವಿಯೊಳಗೆ ಅ-ದ್ವೈತದಲ್ಲಿರುವ ಜ್ಞಾನಿಯು, ಯಾರನ್ನು ಕಂಡು ಹೆದರುವುದಿಲ್ಲ, ಏಕೆಂದರೆ ಅವನ ಆತ್ಮದಿಂದ ಬೇರೆಯಾದ ಯಾವುದೂ ಇಲ್ಲ ಎಂಬ ವೇದಾಂತವನ್ನು ಸುರಿಯುತ್ತಲೇ ಇದ್ದೀರಿ. ಆದರೆ ತಾವು ನಮ್ಮ ಹಾಗೆಯೇ ಡಕಾಯಿತರಿಗೆ ಹೆದರಿ ಯಾಕೆ ಓಡಿದಿರಿ ?"

ಗುರೂಜಿ, ಯಾವ ಗಲಿಬಿಲಿಯ ಭಾವನೆಯೂ ಇಲ್ಲದೆ ಉತ್ತರಿಸಿದರು-"ನಾನು ಒಬ್ಬ ಹೇಡಿ, ಕಪಟಿ ಎಂಬ ಅಪಮಾನವನ್ನಾದರೂ ಸಹಿಸುತ್ತೇನೆ, ಆದರೆ "ನೋಡಿ ನಾನು ಎಂತಹ ಶೂರ, ಎಲ್ಲರೂ ಭಯದಿಂದ ಓಡಿಹೋದರೂ, ನಾನು ಇಲ್ಲಿಯೇ ಸ್ಥಿರವಾಗಿ ಇದ್ದುಬಿಟ್ಟೆ. ಡಕಾಯಿತರನ್ನು ನಿರ್ಭೀತಿಯಿಂದ ಎದುರಿಸಿದೆ!" ಎಂದು ನನ್ನ ಅಹಂ ಹಲ್ಲುಕಿರಿಯುತ್ತಾ ಪ್ರಕಟಿಸುವುದನ್ನು ಎದುರಿಸಲಾರದೆ ಹಾಗೆ ಮಾಡಿದೆ." ಜ್ಞಾನಿಯನ್ನು ಕಂಡು ಹಿಡಿಯುವುದು ಕಷ್ಟದ ಕೆಲಸ. ಶಾರದಾಮಾತೆ ಒಮ್ಮೆ ಹೇಳಿದರಂತೆ- "ಜ್ಞಾನಿ ಅಥವಾ ಜೀವನ್ಮುಕ್ತನಿಗೆ ತಲೆಯ ಮೇಲೆ ಎರಡು ಕೊಂಬುಗಳಿರುವುದೂ ಇಲ್ಲ. ಇದ್ದಿದ್ದರೆ ಬೇರೆಯವರು ಅವನನ್ನು ಗುರುತಿಸಬಹುದಿತ್ತು!".

ಸಾಮಾನ್ಯ ಮನುಷ್ಯನು ಚಟುವಟಿಕೆಗಳಲ್ಲಿ ತೊಡಗಿಕೊಂಡಾಗ, ಕ್ರೋಧ, ವ್ಯಾಮೋಹ, ಮಾತ್ಸರ್ಯ ಇತ್ಯಾದಿಗಳನ್ನು ತನ್ನ ಸಂಪರ್ಕಕ್ಕೆ ಬಂದವರ ಬಗ್ಗೆ ಹೊಂದಿರುತ್ತಾನೆ. ಅವನ ಮನಸ್ಸು ಗೊಂದಲಗೊಂಡಿರುತ್ತದೆ. ತನ್ನ ಉದ್ದೇಶಗಳು ಫಲಿಸದೆ ಹೋದಾಗ ಹತಾಶನೂ



ಆಗುತ್ತಾನೆ. ಜ್ಞಾನಿಗಾದರೋ ಮಾಡುವ ಕರ್ಮಗಳೆಲ್ಲ ಅಕರ್ಮವೇ ಆಗಿರುತ್ತದೆ. ಏಕೆಂದರೆ ಅವನು ಗಳಿಸಬೇಕಾದ ಸ್ವಾರ್ಥಫಲವೇ ಅವನಿಗಿರುವುದಿಲ್ಲ. ಅವನು ಯಾವ ಗೊಂದಲಕ್ಕೂ ಒಳಗಾಗುವುದಿಲ್ಲ. ಹಾಗೆಂದರೆ ಏನನ್ನೂ ಮಾಡದೆ ಸಮಾಧಿಯಲ್ಲಿ ಕುಳಿತುಬಿಡುತ್ತಾನೆ ಎಂದಲ್ಲ.

ಅಂದಹಾಗೇ ಬಹಳ ಜನ ಜ್ಞಾನಿಯು ತನ್ನ ಜೀವನದ ಅಂತ್ಯದವರೆಗೂ ಸಮಾಧಿಯಲ್ಲೇ ಇರುತ್ತಾನೆ, ಜನಗಳೊಡನೆ ಮಾತುಕತೆಯಾಡುವುದಿಲ್ಲ, ಹಾಸ್ಯದ ಚಟಾಕಿಗಳನ್ನು ಸಿಡಿಸುವುದಿಲ್ಲ, ಯಾವ ಕೆಲಸವನ್ನೂ ಮಾಡುವುದಿಲ್ಲ ಎಂದು ನಿರೀಕ್ಷಿಸುತ್ತಾರೆ. ಹೀಗಾಗಿ ಜ್ಞಾನಿಯು ಜನರ ಹಿತಕ್ಕಾಗಿ ಯಾವುದೇ ಕೆಲಸ ಮಾಡಿದರೂ, ಅವನು ಜ್ಞಾನಿ ಅಥವಾ ಸಂತನಿರಬಹುದು ಎಂದು ನಂಬದೇ ಹೋಗುತ್ತಾರೆ.

ಬಿಹಾರದ ಪುಟ್ಟ ರಾಜ್ಯವೊಂದರ ದೊರೆ. ಒಬ್ಬ ಮಹಾತ್ಮನ ವೈರಾಗ್ಯದಿಂದ ತುಂಬ ಪ್ರಭಾವಿತನಾಗಿದ್ದ. ಅವನು ಬೇಟೆಗಾಗಿ ಕಾಡಿಗೆ ಹೋದಾಗಲೆಲ್ಲ ಆ ಸಂತನು ವರ್ಷವೆಲ್ಲ ಒಂದು ಬಯಲಿನಲ್ಲಿ ಮೌನವಾಗಿ ಕುಳಿತೇ ಇದ್ದುದನ್ನು, ಮಳೆಗಾಲದಲ್ಲಿ ಮಳೆಯಲ್ಲಿ ನೆನೆದು ತೊಪ್ಪೆಯಾಗುವುದನ್ನೂ, ಬೇಸಿಗೆಯಲ್ಲಿ, ಸುಡು ಬೇಸಿಗೆಯಲ್ಲಿ ಒಣಗುತ್ತಿರುವುದನ್ನು ಕಂಡ. ಕೆಲವು ದಿನಗಳಾದರೂ ನನ್ನ ಅರಮನೆಯಲ್ಲಿ ಬಂದು ಇರಿ ಸ್ವಾಮಿ ಎಂದು ಆಹ್ವಾನಿಸಿದ. ಸಂತನು ಕೂಡಲೇ ಸಮ್ಮತಿಸಿದ. ಆತನನ್ನು ರಾಜನು ತನ್ನ ಅರಮನೆಯಲ್ಲಿ ವಿ.ಐ.ಪಿ.ಗಳಿಗಾಗಿ ಮೀಸಲಿದ್ದ ಅತಿಥಿ ಗೃಹದಲ್ಲೇ ಇರಿಸಿದ. ಸಂನ್ಯಾಸಿಯು ಸಂತೋಷದಿಂದಲೇ ರಾಜವೈಭವವನ್ನು ಅನುಭವಿಸುತ್ತಾ ಇದ್ದುಬಿಟ್ಟ. ವೃತ್ತಪ್ರತಿಕೆಗಳನ್ನೂ, ರಾಜ್ಯಶಾಸ್ತ್ರ, ವಿಜ್ಞಾನ ಮುಂತಾದ ಲೌಕಿಕ ವಿಷಯಗಳಿಂದ ತುಂಬಿದ ನಿಯತಕಾಲಿಕಗಳನ್ನೂ ಓದತೊಡಗಿದ. ಬೆಳಗಿನ ಉಪಹಾರ, ಮಧ್ಯಾಹ್ನದ ಊಟ, ಕುರುಕುಲುಗಳು, ಹಣ್ಣಿನರಸ, ಊಟಗಳ ನಡುವೆ ಸೇವನೆಗೆ ಎಲ್ಲವನ್ನೂ ಖುಷಿಯಾಗಿ ಕಬಳಿಸುತ್ತಾ ಆರಾಮವಾಗಿದ್ದ. ಒಮ್ಮೆಯೂ ಧರ್ಮ-ವೇದಾಂತ ಮುಂತಾದ ವ್ಯಾಸಂಗ-ಪ್ರವಚನಗಳಲ್ಲಿದ್ದುದನ್ನು ರಾಜನು ಕಾಣಲಿಲ್ಲ. ಒಂದು ದಿನ ರಾಜನು ನೇರವಾಗಿ ಸಂತನನ್ನು ಕೇಳಿಯೇಬಿಟ್ಟ- "ಸ್ವಾಮೀಜಿ, ತಮಗೂ ನನಗೂ ಯಾವ ವ್ಯತ್ಯಾಸವನ್ನೂ ನಾನು ಕಾಣಲಿಲ್ಲ. ನಾನು ಸ್ವಲ್ಪವಾದರೂ ರಾಜ್ಯದ ಕೆಲಸವನ್ನು ಮಾಡುತ್ತೇನೆ, ನೀವಾದರೂ

ಆಲಸಿಗಳಾಗಿಯೇ ಇದ್ದೀರಿ. ಇಲ್ಲಿಗೆ ತಾವು ಬಂದು ತಿಂಗಳುಗಳೇ ಕಳೆದವು. ಈ ಸ್ಥಳವನ್ನು ಬಿಟ್ಟು ಬೇರೆಲ್ಲಿಗಾದರೂ ಹೋಗುವ ಅಪೇಕ್ಷೆಯನ್ನೂ ತಾವು ವ್ಯಕ್ತಪಡಿಸಿದ್ದಿಲ್ಲ. ಇದನ್ನು ದಯಮಾಡಿ ವಿವರಿಸುವಿರಾ?" ಸ್ವಾಮೀಜಿ ನಕ್ಕು ಹೇಳಿದರು. "ಈಗಲೇ ನಾವಿಬ್ಬರೂ ವಾಯುಸೇವನೆಗೆ ಹೋಗೋಣ. ಈ ವಿಷಯವನ್ನು ಸ್ವಲ್ಪ ಹೊತ್ತಾದ ಮೇಲೆ ನಿನ್ನೊಡನೆ ಚರ್ಚಿಸುತ್ತೇನೆ." ಆಗ ಸಂಜೆ 4 ಗಂಟೆ. ರಾಜನೂ, ಸಂತನೂ ಕಾಡಿನ ದಾರಿಯಲ್ಲಿ ಬಹುದೂರ ನಡೆದುಹೋದರು. ಸುಮಾರು 3 ಗಂಟೆಗಳಾದವು. ಕತ್ತಲಾಗುತ್ತ ಬಂದಿತು. ಅವರ ಬಳಿ ಟಾರ್ಚ್‌ಗಳಾಗಲೀ, ಮೇಣದ ಬತ್ತಿಗಳಾಗಲೀ, ಕಡೆಗೆ ಒಂದು ಕಡ್ಡಿ ಪೊಟ್ಟಣವಾಗಲೀ ಇರಲಿಲ್ಲ. ರಾಜನಿಗೆ ತುಂಬ ಆಯಾಸ ವಾಯಿತು. "ಗುರೂಜಿ ನನ್ನ ಬದುಕಿನಲ್ಲಿ ಒಮ್ಮೆಯೂ, ನಾನು ಇಷ್ಟು ದೂರ ನಡೆದದ್ದೇ ಇಲ್ಲ. ಅರಮನೆಗೆ ಹಿಂತಿರುಗಿ ಹೋಗೋಣ ಬನ್ನಿ." ಸ್ವಾಮೀಜಿ ಹೇಳಿದರು – "ಛೇ, ಇಲ್ಲ ಇಲ್ಲ ನಾನು ಕನ್ಯಾಕುಮಾರಿಗೆ ಹೋಗಬೇಕು. ಅದು ಹಲವಾರು ತಿಂಗಳುಗಳ ನಡಿಗೆ, ಚಿಂತೆಯಿಲ್ಲ, ಮುಂದುವರೆಯೋಣ." ರಾಜನು ಆಶ್ಚರ್ಯ ಚಕಿತನಾಗಿ ಕೂಗಿ ಹೇಳಿದ. "ಸ್ವಾಮೀಜಿ, ಸಾಧ್ಯವೇ ಇಲ್ಲ. ನನ್ನ ಪತ್ನಿಗಾಗಲೀ, ಸಚಿವರಿಗಾಗಲೀ, ನಾನು ಹೇಳಿಬಂದಿಲ್ಲ. ನನ್ನ ಅನುಪಸ್ಥಿತಿಯಲ್ಲಿ ರಾಜಕಾರ್ಯಗಳನ್ನು ನಡೆಸಿಕೊಡುವ ಯಾವ ಏರ್ಪಾಟನ್ನೂ ಮಾಡಿಲ್ಲ. ಹಣವನ್ನಾಗಲೀ, ಪದಾರ್ಥಗಳನ್ನಾಗಲೀ ನಮ್ಮೊಡನೆ ತಂದೂ ಇಲ್ಲ. ಕನ್ಯಾಕುಮಾರಿ ಇಲ್ಲಿಂದ ಸಾವಿರಾರು ಮೈಲಿ ದೂರ. ನನ್ನ ರಾಜ್ಯವನ್ನು ಇದ್ದಕ್ಕಿದ್ದಂತೆ ಬಿಟ್ಟು ಬರುವುದು ಹೇಗೆ ಸಾಧ್ಯ? ಅಷ್ಟು ದೂರ ನಡೆಯುವುದಾದರೂ ಹೇಗೆ? ಏತಕ್ಕಾಗಿ?" ಗುರೂಜಿ ನಗುತ್ತಾ ರಾಜನನ್ನು ಕುರಿತು ಹೇಳಿದರು– "ನೀನು ಬೆಳಗ್ಗೆ ಕೇಳಿದ ಪ್ರಶ್ನೆಗೆ ಇದೇ ಉತ್ತರ. ನಾನು ನಿನ್ನ ಹಾಗೆ ಸುಖಭೋಗದಲ್ಲಿ ಇರಬಲ್ಲೆ, ಒಂದು ಕ್ಷಣದಲ್ಲಿ ಅದೆಲ್ಲವನ್ನೂ ತೊರೆಯಲೂ ಬಲ್ಲೆ. ಕನ್ಯಾಕುಮಾರಿಗೆ ನಡೆದು ಹೋಗುವ ಯೋಚನೆಯಿಂದಲೇ ನೀನು ಇಷ್ಟು ಗಾಬರಿಯಾದೆ. ನನಗೆ ಅದು ಲೆಕ್ಕಕ್ಕೆ ಇಲ್ಲ. ನನ್ನ ಕಾರ್ಯಗಳಿಗೆ ಯಾವ ಕಾರಣವೂ ಇಲ್ಲ. ನಾನು ಪಡೆಯುವಂತಹುದು ಯಾವುದೂ ಇಲ್ಲ. ಈಗ ನಿನಗೆ ಅರ್ಥವಾಗಿರಬಹುದು ಎಂದುಕೊಳ್ಳುತ್ತೇನೆ. ನಾನು ನಿನ್ನ ಶ್ರದ್ಧೆ, ಭಕ್ತಿ, ಪ್ರಾಮಾಣಿಕತೆಯನ್ನು ಪರೀಕ್ಷೆಗೆ ಒಡ್ಡಲು ಬಯಸಿದೆ. ಹೋಗಿ ಬಾ." ಸ್ವಾಮೀಜಿ ಒಮ್ಮೆಯೂ ಹಿಂತಿರುಗಿ ನೋಡದಂತೆ, ಕತ್ತಲಲ್ಲಿ ನಡೆದೇಬಿಟ್ಟರು.



ಜೀವನ್ಮುಕ್ತನನ್ನು ಯಾರೂ ಅರ್ಥ ಮಾಡಿಕೊಳ್ಳಲಾರರು. ಅತ್ಯಂತ ಪ್ರಾಮಾಣಿಕ ಭಕ್ತರೂ, ಕೆಲವೊಮ್ಮೆ ತೀವ್ರವಾಗಿ ವಿಚಲಿತವಾಗಿ ಬಿಡುತ್ತಾರೆ– ಜರ್ಝರಿತರಾಗಿ ಬಿಡುತ್ತಾರೆ.

**55. ಜೀವನ್ಮುಕ್ತನು ಎಲ್ಲ ಬಂಧನಗಳಿಂದಲೂ ಮುಕ್ತನೇ ಆಗಿರುತ್ತಾನೆ. ಯಾವುದೇ ಕಾರ್ಯಗಳನ್ನು ಅವನು ಮಾಡಲೇಬೇಕೆಂದಿಲ್ಲ.**

ನಿರ್ವಾಸನೋ ನಿರಾಲಂಬಃ ಸ್ವಚ್ಛಂದೋ ಮುಕ್ತಬಂಧನಃ ।
ಕ್ಷಿಪ್ತಃ ಸಂಸಾರವಾತೇನ ಚೇಷ್ಟತೇ ಶುಷ್ಕಪರ್ಣವತ್ ॥ (XVIII -21)

ಎಲ್ಲ ಪೂರ್ವವಾಸನಾ ಮುಕ್ತನಾಗಿರುವುದರಿಂದ, ಯಾವುದರ ಮೇಲೂ ಅವಲಂಬಿಸದೆ ಇರುವುದರಿಂದ, ಅಜ್ಞಾನದಿಂದ ಮುಕ್ತನಾದ ಎಲ್ಲ ಬಂಧನಗಳನ್ನೂ ಕಳಚಿಕೊಂಡವನು ತನ್ನ ಇಚ್ಛೆ ಬಂದಂತೆ ಕಾರ್ಯಗಳನ್ನು ಕೈಗೊಳ್ಳಬಹುದು. ಆದರೆ ಕೆಲವೊಮ್ಮೆ ಬಿರುಗಾಳಿಗೆ ಸಿಲುಕಿದ ತರಗೆಲೆಯಂತೆ ಕರ್ಮವನ್ನು ಮಾಡಲೇ ಬೇಕಾಗುವುದು. (ದೇಹದ ಪ್ರಾರಬ್ಧಕರ್ಮಗಳಿಗೆ ಅನುಸಾರವಾಗಿ).

ಒಬ್ಬ ಸಾಮಾನ್ಯ ಮನುಷ್ಯನು ಪೂರ್ವಜನ್ಮದ ವಾಸನೆಗಳಿಂದ, ಅವುಗಳನ್ನೆಲ್ಲ ತೊಡೆದು ಹಾಕಿಬಿಡುವ ಸಾಮರ್ಥ್ಯ ಇದ್ದರೂ ಆ ವಾಸನೆಗಳ ಪ್ರಾಬಲ್ಯದಿಂದ, ಅವುಗಳಿಗೆ ತಕ್ಕಂತೆಯೇ ಕರ್ಮಗಳನ್ನು ಮಾಡುವ ಒತ್ತಡಕ್ಕೆ ಸಿಲುಕಬಹುದು. ಹೀಗೆ ವಾಸನಾಪ್ರೇರಿತನಾಗಿ ಅಥವಾ ಸ್ವ ಇಚ್ಛೆಯಂತೆ ಮಾಡಿದ ಕ್ರಿಯೆಗಳೆಲ್ಲ ಹೊಸ ಕರ್ಮಗಳೇ ಆಗಿ ಅನಿವಾರ್ಯವಾದ ಹಾಗೂ ಕಡ್ಡಾಯವಾದ ಪ್ರಾರಬ್ಧಗಳೇ ಆಗಿ ಮುಂದಿನ ಜನ್ಮದಲ್ಲಿ ಪರಿಣಮಿಸುತ್ತವೆ. (ಬಹುಮಾನ ಅಥವಾ ಶಿಕ್ಷೆ)

ವಾಸನೆಗಳೇ ಒಳ್ಳೆಯ ಅಥವಾ ಕೆಟ್ಟ ಕರ್ಮಗಳಲ್ಲಿ ಪರ್ಯವಸಾನ ವಾಗುವ ಆಲೋಚನೆಗಳಿಗೆ ಕಾರಣವಾಗುತ್ತವೆ. ವಾಸನೆಗಳು ಸಮಾಲೋಚನದಂತೆ–ಅವುಗಳ ಸಲಹೆ ಸೂಚನೆಗಳೇನೂ ಕಡ್ಡಾಯವಾಗಿ ಪಾಲಿಸಬೇಕೆಂದಿಲ್ಲ. ಆದರೆ ಹಿಂದಿನ ಜನ್ಮಗಳಲ್ಲಿ ಪುನಃ ಪುನಃ ಮಾಡಿ ಅಭ್ಯಾಸವಾಗಿ ಬಿಟ್ಟಿರುವುದರ ಪರಿಣಾಮವಾಗಿ ಪ್ರಬಲವಾದ ವಾಸನೆಗಳನ್ನು, ಅವುಗಳ ಅಣತಿಯನ್ನು ಪರಿಪಾಲಿಸಲೇ ಬೇಕಾಗುತ್ತದೆ. ಜೀವನ್ಮುಕ್ತನಾದರೋ ಆತ್ಮದಿಂದ ಬೇರೆಯಾದ ಉದ್ದೇಶಗಳು ಯಾವುವೂ ಇರುವುದಿಲ್ಲ ಎಂದು ಚೆನ್ನಾಗಿ ತಿಳಿದಿರುವುದರಿಂದ, ಏನನ್ನೋ

ಪಡೆಯುವುದಕ್ಕಾಗಿ ಯಾವುದೇ ಕ್ರಿಯೆಗಳನ್ನು ಕೈಗೊಳ್ಳುವ ಇಚ್ಛೆಯೇ ಅವನಿಗಿರುವುದಿಲ್ಲ. ಅವನಲ್ಲಿ ವಾಸನಾಕ್ಷಯವೇ ಆಗಿರುತ್ತದೆ.

ಸಾಧನೆ ಮಾಡುವ ಉದ್ದೇಶದಿಂದ ಮನಸ್ಸು ಯಾವುದಾದರೂ ಮಂತ್ರವನ್ನು ಹಿಡಿದುಕೊಳ್ಳುತ್ತದೆ ಅಥವಾ ದೇವರನಾಮವನ್ನು ತೆಗೆದುಕೊಳ್ಳುತ್ತದೆ. ಹೀಗಾಗಿ ನಾವು ಅವುಗಳನ್ನು ಅವಲಂಬಿಸುತ್ತೇವೆ. ಆತ್ಮನಿಷ್ಠನಾದ ಜೀವನ್ಮುಕ್ತನು, ಯಾವ ಗುರು, ಮಂತ್ರ ಅಥವಾ ನಾಮದ ಮೇಲೆ ಅವಲಂಬಿತನಾಗಿರುವುದಿಲ್ಲ. ಅವನ ಮನಸ್ಸು ಎಲ್ಲ ಆಲೋಚನೆಗಳಿಂದಲೂ ಮುಕ್ತವಾಗಿರುತ್ತದೆ (ಶೂನ್ಯವಾಗಿರುತ್ತದೆ).

ಪರಮಜ್ಞಾನದಿಂದ ತನ್ನೆಲ್ಲ ಅಜ್ಞಾನವನ್ನೂ ತೊಡೆದು ಹಾಕಿರುವುದರಿಂದ, ಜೀವನ್ಮುಕ್ತನು, ಸರ್ವವ್ಯಾಪಿಯಾದ ಆತ್ಮವೇ ತಾನು, ಅದು ಸರ್ವವ್ಯಾಪಿಯಾದ ಏಕಮಾತ್ರ ಸತ್ಯ ಎಂಬುದು ಅವನಿಗೆ ತಿಳಿದಿರುತ್ತದೆ. ಆದುದರಿಂದ ಅವನು ಇನ್ನೆಂದೂ ಕಾಲ, ದೇಶ, ವಸ್ತು ವಿಷಯಗಳಿಗೆ ಬದ್ಧನಲ್ಲ. ತನ್ನ ಇಚ್ಛೆಯಂತೆ ಕಾರ್ಯ ಮಾಡಲು ಅವನು ಸ್ವತಂತ್ರ. ಆದರೂ ಅವನು ತರಗೆಲೆಯಂತೆ ಕರ್ಮ ಮಾಡುತ್ತಾನಷ್ಟೆ.

ಮರದಿಂದ ಕೆಳಗೆ ಬಿದ್ದ ಒಂದು ಎಲೆಯನ್ನು ಕುರಿತು ಚಿಂತಿಸೋಣ. ಅದು ಸಂಪೂರ್ಣವಾಗಿ ಒಣಗಿ ಹೋಗಿದೆ. ಅದು ಮುದುಡುವ ಅಥವಾ ಚಲಿಸುವಂತೆ ಮಾಡುವ ನೀರಿನ ಅಂಶ ಸ್ವಲ್ಪವೂ ಅದರಲ್ಲಿಲ್ಲ. ಇಷ್ಟಾದರೂ ಬಿರುಗಾಳಿ ಬೀಸಿದಾಗ ಅದರೊಡನೆ ಈ ತರಗೆಲೆಯೂ ಸ್ವಲ್ಪ ದೂರ ಚಲಿಸುತ್ತದೆ. ಅದು ಅಕಸ್ಮಾತ್ ಒಂದು ಹುಳದ ಮೇಲೆ ಬೀಳಬಹುದು, ಭಯಂಕರ ಬಿಸಿಲಿನಿಂದ ಬಸವಳಿಯುತ್ತಿರುವ ಆ ಹುಳಕ್ಕೆ ನೆರಳಾಗಬಹುದು. ಅದನ್ನು ಕಂಡವನು, ಒಬ್ಬ ಸಂತನಂತೆ ವಾಸನೆಗಳ ಎಲ್ಲ ದ್ರವವನ್ನೂ ಕಳೆದುಕೊಂಡಿದ್ದರೂ, ಈ ತರಗೆಲೆಯು ಕೇವಲ ಅನುಕಂಪದಿಂದ ಆ ಹುಳಕ್ಕೆ ನೆರಳು ನೀಡುತ್ತಿದೆ ಎಂದೇ ಆಲೋಚಿಸಬಹುದು! ಇದೇ ರೀತಿಯಲ್ಲಿ ಜೀವನ್ಮುಕ್ತನ ದೇಹವು ಕ್ರಿಯೆಗೆ ಪ್ರಚೋದಿತನಾಗಿರಬಹುದು-ಅದನ್ನು ಸಾಮಾನ್ಯ ಮನುಷ್ಯನು ಅನುಕಂಪ ಅಥವಾ ದಯೆಯಿಂದಲೇ ಆದದ್ದು ಎಂದು ವ್ಯಾಖ್ಯಾನಿಸಬಹುದು! ಜೀವನ್ಮುಕ್ತನು ಅ-ದ್ವಯದಲ್ಲಿ ದೃಢವಾಗಿ ನೆಲೆ ನಿಂತಿರುವುದರಿಂದ, ಅವನಿಂದ ಬೇರೆಯಾದ ಯಾವ ವಸ್ತು ವಿಷಯ ಅಥವಾ ವ್ಯಕ್ತಿ ಇಲ್ಲವೇ ಇಲ್ಲವಾದುದರಿಂದ, ನೆರವು ನೀಡುವ ಅಥವಾ ಅನುಕಂಪ ತೋರುವ ಸಂಭವವೇ ಇಲ್ಲ. ಆದುದರಿಂದಲೇ ಈ ಮೊದಲು ಅಷ್ಟಾವಕ್ರರು ಸ್ಪಷ್ಟಪಡಿಸಿದ್ದು ಜೀವನ್ಮುಕ್ತನಿಗೆ ಅನುಕಂಪವಾಗಲೀ ಕಾರುಣ್ಯವಾಗಲೀ ಇಲ್ಲ ಎಂದು. (ಅಧ್ಯಾಯ 17. ಶ್ಲೋಕ 16).



**56. ಜೀವನ್ಮುಕ್ತನು ಯಾವುದೇ ಕ್ರಿಯೆಯನ್ನು ಮಾಡಿದರೂ ಅದು ಅಕರ್ಮವೇ!**

ಕೃತಂ ದೇಹೇನ ಕರ್ಮೇದಂ ನ ಮಯಾ ಶುದ್ಧ ರೂಪಿಣಾ।
ಇತಿ ಚಿಂತಾನುರೋಧೀ ಯಃ ಕುರ್ವನ್ನಪಿ ಕರೋತಿ ನ॥

(XVIII-25)

ಜೀವನ್ಮುಕ್ತನು ಯಾವುದೇ ಕರ್ಮವನ್ನು ಮಾಡಿದರೂ, "ಈ ಕರ್ಮವು ನನ್ನ ದೇಹದಿಂದ ಮಾಡಲ್ಪಟ್ಟಿದೆ, ಪರಿಶುದ್ಧವಾದ ಆತ್ಮ ಸ್ವರೂಪನೇ ಆದ ನನ್ನಿಂದ ಅಲ್ಲ" ಎಂದೇ ಯೋಚಿಸುತ್ತಾನೆ. ಅಂತಹ ಮನುಷ್ಯನು ಯಾವುದೇ ಕರ್ಮವನ್ನು ಮಾಡಿದರೂ ಅದು ಅಕರ್ಮವೆಂದೇ ತಿಳಿಯಲ್ಪಡುತ್ತದೆ.

ಈ ಹಿಂದಿನ ಕ್ರಮ ಸಂಖ್ಯೆಯಲ್ಲಿ ವಿವರಿಸಿದಂತೆ, ಕೆಲವೊಮ್ಮೆ ಜೀವನ್ಮುಕ್ತನು ಕೆಲವು ಕರ್ಮಗಳನ್ನು ಮಾಡುವ ಒತ್ತಡಕ್ಕೆ ಸಿಲುಕಿರಬಹುದು. ಅಂಥ ಸಂದರ್ಭದಲ್ಲಿಯೂ ಅವನ ದೃಷ್ಟಿ ಏನಿರುತ್ತದೆ ಎಂದರೆ, "ನಾನು ಕರ್ಮಿಯಲ್ಲ. ದೇಹವು ಈ ಕರ್ಮವನ್ನು ಮಾಡುವುದಕ್ಕೆ ಪ್ರಚೋದಿತವಾಗಿದೆ-ಅದಕ್ಕೆ ಕೆಲವು ದೈವಿಕ ಕಾರಣಗಳೂ ಇರಬಹುದು. ನಾನು ದೇಹವಲ್ಲ, ದೇಹವು ದೇಹವಲ್ಲ. ನಾನು ಪರಿಶುದ್ಧ ಹಾಗೂ ಪೂರ್ಣ. ನನಗೆ ಯಾವುದೂ ಬೇಕಿಲ್ಲ. ನಾನು ಆತ್ಮವೇ ಆಗಿದ್ದೇನೆ. ಉಳಿದ "ಎಲ್ಲವೂ ಬೃಹತ್ ನಾಟಕ-ನಿಜವಾದ ಸತ್ಯ ಅದರಲ್ಲಿ ಏನೂ ಇಲ್ಲ" ಇಂತಹ ನಿಶ್ಚಯ ಉಳ್ಳವನಿಗೆ, ಕರ್ತೃತ್ವ ಭಾವವೇ ಇಲ್ಲವಾದುದರಿಂದ, ಕ್ರಿಯೆಗಳನ್ನು ಮಾಡುವುದು ವ್ಯಕ್ತಿತ್ವವೇ ಇಲ್ಲದ ಒಟ್ಟಂದದಲ್ಲಿ ಮಾತ್ರ. ಜಗನ್ನಾಟಕದಲ್ಲಿನ ಅಭಿನಯ ಹಾಗೂ ಅದು ಅಕರ್ಮವೇ ಆಗುತ್ತದೆ. ಫಲಿತಾಂಶವಿಲ್ಲ, ಗೆಲವು ಸೋಲು ಇಲ್ಲ, ಜೀವನ್ಮುಕ್ತನಿಗೆ ಯಾವುದೂ ಲೇಪವಿಲ್ಲ.

**57. ಜೀವನ್ಮುಕ್ತನ ಮನಸ್ಸು ಪರಿಶುದ್ಧ-ಉಜ್ವಲವಾಗಿ ಪ್ರಕಾಶಿಸುತ್ತದೆ.**

ನೋದ್ವಿಗ್ನಂ ನ ಚ ಸಂತುಷ್ಟಂ ಅಕರ್ತೃ ಸ್ಪಂದವರ್ಜಿತಂ ।
ನಿರಾಶಂ ಗತ ಸಂದೇಹಂ ಚಿತ್ತಂ ಮುಕ್ತಸ್ಯ ರಾಜತೇ ॥ (XVIII-30)

ಜೀವನ್ಮುಕ್ತನ ಮನಸ್ಸಿನಲ್ಲಿ ಉದ್ವಿಗ್ನತೆಯಿಲ್ಲ, ಸಂತೃಪ್ತಿಯೂ ಇಲ್ಲ. ಕರ್ತೃತ್ವ ಭಾವದಿಂದ ಅಥವಾ ಸಂಚಲನದಿಂದ ಅದು ಮುಕ್ತ. ಅದಕ್ಕೆ ಯಾವ ನಿರೀಕ್ಷೆಗಳೂ ಇಲ್ಲ. ಯಾವ ಸಂದೇಹವೂ ಉಳಿದಿಲ್ಲ. ಎಲ್ಲ ಇಷ್ಟಾನಿಷ್ಟಗಳೂ ಬಿಟ್ಟುಹೋಗಿವೆ. ಯಾವುದೇ ಪ್ರಾಪಂಚಿಕ ಸಾಂದರ್ಭಿಕ ಪರಿಸರದಲ್ಲೂ ಅವನು ನಿಶ್ಚಲನಾಗಿರುತ್ತಾನೆ. ಜೀವನ್ಮುಕ್ತನ ಪರಿಶುದ್ಧ ಮನಸ್ಸು ಉಜ್ವಲವಾಗಿ ಬೆಳಗುತ್ತದೆ. ಈ ಶ್ಲೋಕವು ಜೀವನ್ಮುಕ್ತನ ಸ್ವರೂಪವು ಎಷ್ಟು ಸಂತೋಷವಾಗಿರುತ್ತದೆ ಎಂಬುದನ್ನು ಸೂಚಿಸುತ್ತದೆ. ಅವನು ನಿಷ್ಪಕ್ಷಪಾತ ಸ್ಥಿತಿಯಲ್ಲೇ ಇದ್ದು ಸಂತಸದಲ್ಲೂ ಸಮಚಿತ್ತದಲ್ಲಿರುತ್ತಾನೆ. ಬಾಹ್ಯ ಒತ್ತಡಗಳಿಂದ ಅವನು ಯಾವುದಾದರೂ ಕ್ರಿಯೆಗಳಲ್ಲಿ ತೊಡಗಿಕೊಳ್ಳಬೇಕಾದಲ್ಲೂ ಅವನಿಗೆ ಕರ್ತೃತ್ವವೇ ಇರುವುದಿಲ್ಲ. ಅವನು ಗಳಿಸಬೇಕಾದ ಯಾವುದೂ ಇಲ್ಲ. ಸಾಧಾರಣವಾಗಿ ಅವನು ಎಲ್ಲ ಬಗೆಯ ಚಟುವಟಿಕೆಗಳಿಂದ ವಿಮುಖನಾಗಿಯೇ ಇರುತ್ತಾನೆ – ಎಲ್ಲ ಓಡಾಟಗಳಿಂದಲೂ ಅವನು ದೂರ. ಪಡೆಯ ಬೇಕಾದುದು ಏನೂ ಇಲ್ಲ – ಏಕೆಂದರೆ ಅವನಿಗೆ ಆಸೆಗಳೇ ಇಲ್ಲ. ಗುರುವಿನ ಉಪದೇಶದಲ್ಲಿ ಹಾಗೂ ಶಾಸ್ತ್ರ ಗ್ರಂಥಗಳಲ್ಲಿ ಸಂಪೂರ್ಣ ವಿಶ್ವಾಸವಿದ್ದಲ್ಲದೇ (ಈ ವಿಶ್ವಾಸವೇ ಶ್ರದ್ಧಾ ಎಂದು ಕರೆಯಲ್ಪಟ್ಟಿದೆ) ಅಧ್ಯಾತ್ಮ ಪಥದಲ್ಲಿ ಯಾರೊಬ್ಬರೂ ಯಾವ ಪ್ರಗತಿಯನ್ನೂ ಸಾಧಿಸಲಾರ. ಅದು ಅಧ್ಯಾತ್ಮ ಪಥದಲ್ಲಿ ಅಡಿಯಿಡುವವನಿಗೆ ಅಗತ್ಯವಾದ ಷಟ್ ಸಂಪತ್ತಿಗಳಲ್ಲಿ ಒಂದು. ಶ್ರದ್ಧಾವಂತನು ಮಾತ್ರ ಪರಮ ಜ್ಞಾನವನ್ನು ಹೊಂದಲು ಸಾಧ್ಯ. (ಶ್ರದ್ಧಾವಾನ್ ಲಭತೇ ಜ್ಞಾನಂ – ಭಗವದ್ಗೀತೆ 4–39) ವಿಶ್ವಾಸವೇ ಇಲ್ಲದವನು, ಎಲ್ಲವನ್ನೂ ಶಂಕಿಸತೊಡಗುತ್ತಾನೆ. ಎಲ್ಲ ಸಂಶಯಗಳೂ ಪರಮತತ್ತ್ವದ ಎದುರು ನಿಂತಾಗ ಹೇಳಹೆಸರಿಲ್ಲದಂತಾಗುತ್ತದೆ. (ಮುಂಡಕೋಪನಿಷತ್ತು–11–2–8). ಆ ಸಮಯದವರೆಗೂ ದೃಢವಾದ ಶ್ರದ್ಧೆಯಿಂದಲೇ ಮುಂದುವರೆಯಬೇಕಾಗುತ್ತದೆ. ಜನರು ಅದನ್ನು ಅಂಧಶ್ರದ್ಧೆ ಎಂದೇ ಕರೆಯಬಹುದು. ಶ್ರದ್ಧೆ ಎಂಬುದೂ ಕುರುಡಾದುದೇ! ಸ್ವಾನುಭವ ಅಥವಾ ಯಾವುದಾದರೂ ನಿರ್ದಿಷ್ಟ ಸಾಕ್ಷಿ ದೊರೆತರೆ ಮಾತ್ರ ಅದು ಸತ್ಯ ಎನಿಸುತ್ತದೆ. ಆಗ ವಿಶ್ವಾಸ ಅಥವಾ ನಂಬಿಕೆಯ ಅಗತ್ಯವೇ ಇರುವುದಿಲ್ಲ. ಅಂತಹ ಸ್ಥಿತಿಯಲ್ಲಿ ಜೀವನ್ಮುಕ್ತನ ಮನಸ್ಸು ಸಂಪೂರ್ಣವಾಗಿ ಪರಿಶುದ್ಧವಾಗಿರುತ್ತದೆ ಮತ್ತು ಉಜ್ವಲವಾಗಿ ಪ್ರಕಾಶಿಸುತ್ತದೆ.

### 58. ಸತ್ಯವನ್ನು ಕೇಳಿದಾಗ ಮಂದ ಬುದ್ಧಿಯವನು ಗೊಂದಲಕ್ಕೆ ಈಡಾಗುತ್ತಾನೆ– ವಿವೇಕಿಯು ಅಂತರ್ಮುಖಿಯಾಗುತ್ತಾನೆ.



ತತ್ತ್ವಂ ಯಥಾರ್ಥಮಾಕರ್ಣ್ಯ ಮಂದಃ ಪ್ರಾಪ್ನೋತಿ ಮೂಢತಾಂ ।
ಅಥವಾಽಯಾತಿ ಸಂಕೋಚಂ ಅಮೂಢಃ ಕೋಪಿ ಮೂಢವತ್ ॥
(XVIII-32)

ಪರಮ ಸತ್ಯವೆಂದರೆ ಬ್ರಹ್ಮನ್ ಮಾತ್ರ ಏಕಮೇವ ತತ್ತ್ವ, ಜಗತ್ತು ಮಿಥ್ಯೆ, ಜೀವನು ಬ್ರಹ್ಮವಲ್ಲದೆ ಬೇರೆಯಲ್ಲ. ಇದನ್ನು ಒಬ್ಬನು ಕೇವಲ ಬೌದ್ಧಿಕವಾಗಿ ಅರಿತರೆ ಸಾಲದು – ತನ್ನೆಲ್ಲ ಪೂರ್ಣ ವ್ಯಕ್ತಿತ್ವದಿಂದ, ಸ್ವಾನುಭವವನ್ನು ಪಡೆದಾಗ ಮಾತ್ರ ಅದು ನಿಜ. ಮೋಕ್ಷ ಅಥವಾ ಮುಕ್ತಿ ಕೇವಲ ಜ್ಞಾನದಿಂದ ಪಡೆಯ ಬಹುದಾದದ್ದು. (ಜ್ಞಾನಾದೇವತು ಕೈವಲ್ಯಂ). ಮೂಢನು ಅದನ್ನು ಕೇಳಿದಾಗ, ಮತ್ತಷ್ಟು ಗೊಂದಲಕ್ಕೆ ಈಡಾಗುತ್ತಾನೆ. ಅಪರೂಪಕ್ಕೊಮ್ಮೆ ಮೂಢನೂ ಮನಸ್ಸನ್ನು ಒಳಮುಖವಾಗಿಸಿ, ಅಂತರ್ಮುಖಿಯಾಗಿ ಆತ್ಮ ವಿಚಾರವನ್ನು ಪ್ರಾರಂಭಿಸುತ್ತಾನೆ. ಅದಕ್ಕೆ ಕಾರಣ, ಪೂರ್ವ ಜನ್ಮದಲ್ಲಿ ದೊರಕಿದ ಮನೋ ಸಂಸ್ಕಾರಗಳಿರಬಹುದು. ಕೆಲವೊಮ್ಮೆ ತನ್ನದೇ ಕಾರಣಗಳಿಂದ ಮೋಕ್ಷದ ಅಭಿಲಾಷೆಯೂ ಸೇರಿದಂತೆ ಎಲ್ಲ ವಾಸನೆಗಳಿಂದಲೂ ಮುಕ್ತನಾದ ಜ್ಞಾನಿಯೂ ದಡ್ಡಾತಿದಡ್ಡನಂತೆ ವರ್ತಿಸಬಹುದು! ಏಕೆಂದರೆ ಇಬ್ಬರೂ ಬಹಿರಂಗದಲ್ಲಿ ಹಾಗೆಯೇ ವರ್ತಿಸಬಹುದು.

### 59. ಜ್ಞಾನಿಯು ಸದಾ ಸಹಜ ಸಮಾಧಿಯಲ್ಲಿರುತ್ತಾನೆ – ಮೂಢರು ಮಾತ್ರ ಸಾಧನೆಗೆ ತೊಡಗುತ್ತಾರೆ.

ಏಕಾಗ್ರತಾ ನಿರೋಧೋ ವಾ ಮೂಢೈರಭ್ಯಸ್ಯತೇ ಭೃಶಂ।
ಧೀರಾಃ ಕೃತ್ಯಂ ನ ಪಶ್ಯಂತಿ ಸುಪ್ತವತ್ ಸ್ವಪದೇ ಸ್ಥಿತಾಃ॥
(XVIII-33)

ಏಕಾಗ್ರತೆ ಅಥವಾ ಚಿತ್ತನಿರೋಧ ಮೂಢರು ಬಹುವಾಗಿ ಮಾಡುವ ಸಾಧನೆ. ಜ್ಞಾನಿಗಳಾದರೋ ತಮ್ಮ ಆತ್ಮದಲ್ಲಿ ಸದಾ ಯಾವುದನ್ನೂ ಕಾಣದೆ, ಚಿಂತಿಸದೆ, ಚಲಿಸದೆ, ನಿದ್ರಾವಶನಾದವನಂತೆ ಸ್ಥಿರವಾಗಿ ಇದ್ದುಬಿಡುತ್ತಾರೆ. ಸಾಧನೆಗಳನ್ನು ಮಾಡಬೇಕಾದ ಕ್ರಿಯೆಗಳೆಂದು ಅವರು ಭಾವಿಸುವುದೇ ಇಲ್ಲ.

ಎಲ್ಲವೂ ಆತ್ಮವೇ ಆಗಿರುವಾಗ ನಾವು ಅದನ್ನು ಸ್ಪಷ್ಟವಾಗಿ ಕಾಣಲು ಏಕೆ ಅಸಮರ್ಥರಾಗಿದ್ದೇವೆ? ಏಕೆಂದರೆ ಒಂದು ಕಾಲ್ಪನಿಕ ಪ್ರಪಂಚವನ್ನು ಅದರ ಮೇಲೆ ಅಧ್ಯಾರೋಪ ಮಾಡಲಾಗಿದೆ. ಪ್ರಪಂಚದ ಆಕರ್ಷಣೆ,

ವಿಕರ್ಷಣೆಗಳು ಸತ್ಯವಾಗಿ ತೋರುತ್ತಾ ನಮ್ಮ ಆಲೋಚನೆಗಳಲ್ಲಿ ತುಂಬಿಕೊಳ್ಳುತ್ತವೆ. ನಮ್ಮ ಸತ್ಯ ಸ್ವರೂಪವನ್ನು ತಿಳಿಯಲು ಈ ಯಾವುದಾದರೂ ವಿಧಾನಗಳನ್ನು ಮೊರೆಹೋಗುತ್ತೇವೆ. ಎಲ್ಲ ಆಲೋಚನೆಗಳಿಂದ ದೂರವಾಗುವುದು (ನಿರೋಧ) ಅಥವಾ ಯಾವುದಾದರೂ ಒಂದು ಆಲೋಚನೆಯಲ್ಲಿ ಏಕಾಗ್ರಚಿತ್ತರಾಗುವುದು, ಮಂತ್ರ, ದೇವರ ಆಕೃತಿ ಅಥವಾ ನಾಮ. ಬಹುಕಾಲ ಈ ಎಲ್ಲ ಸಾಧನೆಗಳನ್ನು ಮಾಡಿದ ಮೇಲೆಯೂ ಸಾಧಕನು ಆತ್ಮಸಾಕ್ಷಾತ್ಕಾರವನ್ನು ಪಡೆಯುವುದಿಲ್ಲ. ಜ್ಞಾನಿಯಾದರೋ ಧ್ಯಾನವೇ ಅಲ್ಲದ ಧ್ಯಾನದಲ್ಲಿ ಅತಿ ಸಹಜವಾಗಿ ಲೀನವಾಗಿಬಿಡುತ್ತಾನೆ. ತನ್ನ ಸಹಜ ಸ್ವರೂಪದಲ್ಲಿ ನೆಲೆ ನಿಂತು ಬಿಡುತ್ತಾನೆ–ನಿದ್ರಾವಶನಾದವನಂತೆ. ಅವನು ಹೀಗೆ ಸಹಜವಾಗಿಯೇ ಆನಂದ ಸ್ಥಿತಿಯಲ್ಲಿ ನಿಂತಿರುವುದರಿಂದ ಇತರ ಸಾಧನೆಗಳು ಆವಶ್ಯಕ ಎಂದು ಭಾವಿಸುವುದೇ ಇಲ್ಲ. ಇರುವುದು ನೀವು ಮಾತ್ರ, ಬೇರೆ ಯಾವುದೂ ಅಲ್ಲ. ಯಾವಾಗ ನೀವು ಈ ವ್ಯತ್ಯಾಸಗಳೇ ಇಲ್ಲ, ಅ-ದ್ವಿತೀಯ ಸಹಜಸ್ಥಿತಿಯಲ್ಲಿ ಎಚ್ಚರಗೊಂಡಾಗಲೂ ಮುಂದುವರೆಯಲು ಸಾಧ್ಯವಾದರೆ, ನೀವು ಗಾಢ ನಿದ್ರೆಯಲ್ಲಿ ಇದ್ದಂತೆಯೇ. ನಿದ್ರೆಯಲ್ಲಿ ಅಂತಹ ಯಾವ ವ್ಯತ್ಯಾಸಗಳೂ ಇರುವುದಿಲ್ಲ. ನೀವು ಏನನ್ನೂ ಮಾಡುವುದೂ ಇಲ್ಲವಷ್ಟೆ?

### 60. ಸಾಧನೆಗಳನ್ನು ಮಾಡುತ್ತಿರುವವರು ತಮ್ಮ ಸದಾಸರ್ವದಾ ಪ್ರಕಾಶಿಸುತ್ತಿರುವ, ಆಗಲೇ ಪಡೆದುಕೊಂಡಿರುವ, ಆತ್ಮನ ಅರಿವೇ ಇಲ್ಲದವರಾಗಿದ್ದಾರೆ.

ಶುದ್ಧಂ ಬುದ್ಧಂ ಪ್ರಿಯಂ, ಪೂರ್ಣಂ, ನಿಷ್ಪ್ರಪಂಚಂ, ನಿರಾಮಯಂ ।
ಆತ್ಮಾನಂ ತಂ ನ ಜಾನಾತಿ ತತ್ರಾಭ್ಯಾಸ ಪರಾ ಜನಾಃ ॥ (XVIII-35)

ಸಾಧನೆಗಳಲ್ಲಿ ತೊಡಗಿಕೊಂಡ ಮನುಷ್ಯರು ಸದಾ ಶಾಶ್ವತವಾಗಿರುವ ಪರಿಶುದ್ಧವಾದ, ಎಚ್ಚರಗೊಂಡ, ಪ್ರಿಯವಾದ, ಸಮೃದ್ಧವಾದ, ಪ್ರಾಪಂಚಿಕತೆಯಿಂದ ಮುಕ್ತವಾದ, ದುಃಖಲೇಪವೇ ಇಲ್ಲದ ಆತ್ಮನನ್ನು ಅರಿಯದವರೇ ಆಗಿದ್ದಾರೆ.

ಇಲ್ಲಿ ಶಬ್ದಗಳು ವಿವರಿಸಲು ಸಾಧ್ಯವಾದಷ್ಟು, ಆತ್ಮನ ಸುಂದರವಾದ ವರ್ಣನೆಯಿದೆ. ಆತ್ಮವು ಎಲ್ಲ ವಾಸನೆಗಳಿಂದ ಕಳಂಕಿತವಾಗದ, ಯಾವ ಅಪೇಕ್ಷೆಗಳೂ ಇಲ್ಲದ ಪರಿಶುದ್ಧ ಸ್ವರೂಪ. ಅದು ಯಾವಾಗಲೂ ಆತ್ಮದ



ಎಚ್ಚರದಲ್ಲೇ ಇರುವಂತಹುದು. ಪ್ರತಿಯೊಬ್ಬರಿಂದಲೂ ಆಗಲೇ ಸಾಕ್ಷಾತ್ಕರಿಸಿಕೊಳ್ಳಲ್ಪಟ್ಟಿರುವಂತಹುದು. ಆತ್ಮವು ಸದಾ ನಿಮ್ಮ ಪ್ರೀತಿಯ ವಿಷಯ (subject), ನೀವು ಅದನ್ನು ತಿಳಿಯದವರಂತೆ ತೋರಿಕೊಂಡರೂ ಅದನ್ನೇ ಪ್ರೀತಿಸುತ್ತಿದ್ದೀರಿ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯರು– "ನೀವು ನಿಮ್ಮ ಪತ್ನಿಯನ್ನು, ಪುತ್ರನನ್ನು, ಪ್ರೀತಿಸುವುದು ಅವರೆಲ್ಲ ನಿಮ್ಮ ಆತ್ಮವೇ ಆಗಿರುವುದರಿಂದ, ಅದು ಸರ್ವವ್ಯಾಪಿಯಾಗಿರುವುದರಿಂದ. ಅವರಲ್ಲಿನ (ಪತ್ನೀ, ಪುತ್ರ) ಯಾವ ಅರ್ಹತೆಯಿಂದಲ್ಲ. ಆತ್ಮವೇ ಎಲ್ಲವೂ ಆಗಿದೆ. ಅದಕ್ಕೆ ಯಾವ ಕೊರತೆಯೂ ಇಲ್ಲ – ಅದು ದೇಹದಂತಲ್ಲ. ಆತ್ಮನು ರೋಗಗ್ರಸ್ತವಾಗಲಾರದು, ಆದುದರಿಂದ ಸಂಕಟಗಳಿಂದ ತುಂಬಿರದು. ಆತ್ಮವು ನೀವು–ನೀವೇ ಆಗಿರುವುದರಿಂದ, ಅದು ಸದಾ ನಿಮ್ಮೊಡನೇ ಇರುತ್ತದೆ. ಅದನ್ನು ಹೊಂದಲು ಯಾವ ಸಾಧನೆಯ ಅವಶ್ಯಕತೆಯೂ ಇಲ್ಲ. ಯಾರು ಸಾಧನೆಗಳಲ್ಲಿ ತೊಡಗಿಕೊಂಡಿದ್ದಾರೋ, ಅವರಿಗೆ ತಾವೇ ಆ ಆತ್ಮವೆಂಬುದೂ, ಬೇರೆಲ್ಲಿಂದಲೋ ಅದನ್ನು ಪಡೆಯಲು ಸಾಧನೆ ಮಾಡಬೇಕಾದುದಿಲ್ಲ ಎಂದೂ ತಿಳಿದೇ ಇಲ್ಲ.

### 61. ಪರಬ್ರಹ್ಮವಾಗಿ ಇದ್ದುಬಿಡಿ – ಹಾಗೆ ಆಗಲು ಯತ್ನಿಸಬೇಡಿ!

ಮೂಢೋ ನಾಪ್ನೋತಿ ತದ್ ಬ್ರಹ್ಮ ಯತೋ ಭವಿತುಮಿಚ್ಛತಿ ।
ಅನಿಚ್ಛನ್ನಪಿ ಧೀರೋ ಹಿ ಪರಬ್ರಹ್ಮ ಸ್ವರೂಪಭಾಕ್ ॥ (XVIII-37)

ಮೋಕ್ಷವನ್ನು ಪಡೆಯಲು ತೀವ್ರವಾಗಿ ಇಚ್ಛಿಸುವ ಮೂಢನು, ಬ್ರಹ್ಮನ್ ಆಗಿಬಿಡಲು ಹಂಬಲಿಸುವವನು, ಎಂದೆಂದೂ ಅದನ್ನು ಪಡೆಯುವುದಿಲ್ಲ. ಇದಕ್ಕೆ ಪ್ರತಿಯಾಗಿ, ವಿವೇಕಿಯಾದ ಸಾಧಕನು ಮೋಕ್ಷದ ಅಪೇಕ್ಷೆಯನ್ನೇ ಹೊಂದಿರದಿದ್ದರೂ, ಅದನ್ನು ಪಡೆಯುತ್ತಾನೆ. ಏಕೆಂದರೆ ಅವನು ಆಗಲೇ ಪರಬ್ರಹ್ಮ ಸ್ವರೂಪಿಯೇ ಆಗಿದ್ದಾನೆ.

ವಿವೇಕ ಚೂಡಾಮಣಿಯಿಂದ ನಾವು ತಿಳಿಯುವುದೇನೆಂದರೆ, ಒಬ್ಬ ಹೊಸ ಶಿಷ್ಯನು ಮಾರ್ಗದರ್ಶನಕ್ಕಾಗಿ ಗುರುವಿನ ಬಳಿ ಸಾರಿದಾಗ, ಆತ್ಮಾನಾತ್ಮ ವಿವೇಕದ ಅರ್ಹತೆಯನ್ನು ಹೊಂದಿರಬೇಕು ವೈರಾಗ್ಯ ಪರನಾಗಿರಬೇಕು, ಮುಕ್ತನಾಗಲು ತೀವ್ರ ಹಂಬಲವನ್ನು ಹೊಂದಿರಬೇಕು (ಮುಮುಕ್ಷುತ್ವ), ಷಟ್ಸಂಪತ್ತಿ ಎಂಬ ಆರು ಗುಣಗಳನ್ನು ಪಡೆದಿರಬೇಕು. ಮೋಕ್ಷದ ಅಭಿಲಾಷೆ ಅತ್ಯಂತ ತೀವ್ರವಾಗಿಲ್ಲದಿದ್ದರೆ, ನಿಮ್ಮನ್ನು

ಆಕರ್ಷಿಸುತ್ತಿರುವ ಪ್ರಪಂಚವನ್ನು ತೊರೆದು, ಅಧ್ಯಾತ್ಮ ಮಾರ್ಗವನ್ನು ಹಿಡಿಯಲು ಆಸಕ್ತರಾಗುವುದಿಲ್ಲ. ಆದುದರಿಂದಲೇ ಇದು ಸಾಧನೆಗೆ ಪೂರ್ವಭಾವಿಯಾದ ನಾಲ್ಕು ಅಗತ್ಯತೆಗಳಲ್ಲಿ ಒಂದು. (ಸಾಧನ ಚತುಷ್ಟಯಂ). ಶಿಷ್ಯನ ಶಿಕ್ಷಣದ ಒಂದು ಹಂತದಲ್ಲಿ ಮೋಕ್ಷದ ಬಯಕೆಯೂ ಸೇರಿದಂತೆ ಎಲ್ಲ ಆಸೆಯನ್ನೂ ತೊರೆಯುವಂತೆ ಉಪದೇಶಿಸಲಾಗುತ್ತದೆ. ಏಕೆಂದರೆ ಈ ಮೋಕ್ಷದ ಅಭಿಲಾಷೆಯೇ ಆತ್ಮಸಾಕ್ಷಾತ್ಕಾರಕ್ಕೆ ಒಂದು ತಡೆ ಆಗಿಬಿಡಬಹುದು. ಈ ಒಂದು ವಿಶಿಷ್ಟ ಮಾರ್ಗವನ್ನೇ ಆರೋಪ ಮತ್ತು ಅಪವಾದ ಎಂದು ಕರೆಯಲಾಗಿದೆ. (ಅಧ್ಯಾರೋಪ ಮಾಡುವುದು-ನಂತರ ಅದನ್ನೇ ಇಲ್ಲವಾಗಿಸುವುದು). ಪ್ರಾಥಮಿಕ ತರಗತಿಯಲ್ಲಿ ಅಣು (ಆಟಂ) ವನ್ನು ಅತಿ ಸಣ್ಣ ವಸ್ತುವೆಂದೂ ಅದನ್ನು ವಿಭಜಿಸಲಾಗದೆಂದೂ ಬಾಲಕನಿಗೆ ಹೇಳಿಕೊಡ ಲಾಗುತ್ತದೆ. ಆದರೆ ಮುಂದಿನ ತರಗತಿಗಳಲ್ಲಿ ಇದನ್ನೆ (ಅವಿಭಾಜ್ಯ ಅಣು) ತಿರಸ್ಕರಿಸಿ ಅಣುವನ್ನು ಮತ್ತೂ ವಿಭಜಿಸುತ್ತಾ ಎಲೆಕ್ಟ್ರಾನ್, ಪ್ರೋಟಾನ್ ಇತ್ಯಾದಿಯಾದ ಕಣಗಳಾಗಿಸಬಹುದು ಎಂದು ಬೋಧಿಸ ಲಾಗುತ್ತದೆ. ಧರ್ಮ (ಮತ) ಗಳಲ್ಲೂ ಪೂಜಾ ಕಾರ್ಯದಲ್ಲಿ ಮೊದಲು ಆವಾಹನೆಯಿಂದ ಸುಪ್ತ ಶಕ್ತಿಯನ್ನು ಉದ್ದೀಪಿಸಿ, ಇಷ್ಟದೇವತೆಯನ್ನು ಎಚ್ಚರಿಸಲಾಗುತ್ತದೆ. (ಚಿಕ್ಕ ವಿಗ್ರಹವೇ ಆಗಿರಬಹುದು) ಪೂಜೆಯ ಅಂತ್ಯದಲ್ಲಿ ಅದನ್ನು ಹಿಂತೆಗೆದುಕೊಂಡು ಸ್ವಸ್ಥಾನದಲ್ಲಿ ಇರಿಸಲಾಗುತ್ತದೆ. ಪುನಃ ಆಗಮಿಸುವಂತೆ ಪ್ರಾರ್ಥಿಸಲಾಗುತ್ತದೆ. (ಪುನರಾಗಮನಾಯಚ). ಇದೇ ಅಧ್ಯಾರೋಪ ಮತ್ತು ಅಪವಾದ. ವಿದ್ಯುತ್ತು ವಾಹಕ ತಂತಿಗಳಲ್ಲೂ ಸುಪ್ತವಾಗಿರುವಂತೆ, ಭಗವಂತನು ಸರ್ವವ್ಯಾಪಿಯಾಗಿದ್ದಾನೆ. ನಮಗೆ ಅವಶ್ಯಕವಾದಾಗ, ಒಬ್ಬ ಎಲೆಕ್ಟ್ರೀಷಿಯನ್‌ನನ್ನು ಕರೆದು, ಅವನು ತಂತಿಯ ಯಾವುದೋ ಒಂದು ಪಾಯಿಂಟ್‌ನಲ್ಲಿ ತಂತಿಯನ್ನು ಹೊರತೆಗೆದು ಬಲ್ಬನ್ನು ಅಳವಡಿಸುತ್ತಾನೆ. ಇದೇ ಆವಾಹನೆಯ ಪ್ರಕ್ರಿಯೆ!

ನೀವು ಆತ್ಮವೇ ಆಗಿದ್ದೀರಿ ಎಂಬ ಅಂತಿಮ ಸತ್ಯ ದೃಢವಾದಾಗ, (ಪ್ರತಿಯೊಂದು ಬಲ್ಬಿನಲ್ಲೂ ಪ್ರವಹಿಸುವ ವಿದ್ಯುತ್ತು-ದೇಹವೆಂದು ಕರೆಯಲ್ಪಟ್ಟರೆ-ಅಂತಿಮವಾಗಿ ಬ್ರಹ್ಮವೇ ಆಗಿದೆ. (ಜನರೇಟರ್‌ನಿಂದ ಬರುವ ವಿದ್ಯುತ್ತು). ನೀವು ಬ್ರಹ್ಮವೇ ಆಗಿದ್ದೀರಿ ಎಂಬುದನ್ನು ಅರಿಯಬೇಕಷ್ಟೆ. ನಿಮ್ಮ ಕುತ್ತಿಗೆಯಲ್ಲಿ ಒಂದು ಸರವನ್ನು ಧರಿಸಿರುವವರೆಗೆ, ಎಲ್ಲೆಲ್ಲೂ ಅದನ್ನು ಹುಡುಕುತ್ತಾ ಹೋದರೆ ಅದು ಸಿಕ್ಕೀತೆ? ಹಾಗೆಯೇ



ನಿಮ್ಮೆಲ್ಲ ಆಸೆ ಆಕಾಂಕ್ಷೆಗಳನ್ನೂ-ಮೋಕ್ಷದ ಆಸೆಯೂ ಸೇರಿದಂತೆ-ತೊರೆದುಬಿಡುವ ಒಂದು ಹಂತ ಬಂದೇಬರುತ್ತದೆ. ನೀವೇ ಬ್ರಹ್ಮವಾಗಿರುವಾಗ, ಬ್ರಹ್ಮವಾಗುವುದು ಎಲ್ಲಿ ಬಂತು? ಎಲ್ಲ ವಾಸನೆಗಳೂ ಆಸೆಗಳೂ ತೊರೆಯಲ್ಪಟ್ಟು, ನಿಷ್ಕ್ರಿಯವಾಗಿ ನೀವು ತಟಸ್ಥರಾದಿರೆಂದರೆ, ಬ್ರಹ್ಮ ಸಾಕ್ಷಾತ್ಕಾರದಲ್ಲಿ ಸಹಜವಾಗಿಯೇ ನುಸುಳುತ್ತೀರಿ. ಅಂಥವನು ಬ್ರಹ್ಮವಾಗಿಯೇ ಇದ್ದುಬಿಡುತ್ತಾನೆ. ಅವನಿಗೆ ಬ್ರಹ್ಮವಾಗುವ ಆಸೆಯೇ ಇಲ್ಲದಿದ್ದರೂ, ಬ್ರಹ್ಮವಾಗುವ ಅಪೇಕ್ಷೆಯೂ ಸೇರಿದಂತೆ ಎಲ್ಲ ವಾಸನಾಕ್ಷಯವಾದಾಗ, ಅವು ಮೋಕ್ಷ ಅಥವಾ ಮುಕ್ತಿಯನ್ನು ಪಡೆಯುತ್ತಾನೆ, ಎಲ್ಲ ಬಗೆಯ ಬಂಧನಗಳಿಂದಲೂ ಮುಕ್ತನಾಗುತ್ತಾನೆ. ಇಲ್ಲಿ ಒಂದು ಎಚ್ಚರಿಕೆಯ ಸಂದೇಶ : "ನೀವು ಹೇಗಿದ್ದೀರೋ ಹಾಗೆಯೇ ಇದ್ದು ಬಿಡುವುದು-ಆಗುವುದಲ್ಲ" ಎಂಬುದನ್ನು ಅನೇಕ ತುಚ್ಛ ಜನರು – ತಮ್ಮ ಎಲ್ಲ ಕಾಮುಕ ಕ್ರೀಡೆಗಳು, ಪಬ್‌ಗಳಲ್ಲಿ ಮಧುಪಾನ, ಅಲ್ಲಿಯ ಸ್ವಚ್ಛಂದ ಚಟುವಟಿಕೆಗಳು, ಎಲ್ಲವನ್ನೂ ಮುಂದುವರೆಸುತ್ತಲೇ ಬ್ರಹ್ಮವನ್ನು ಪಡೆಯಬಹುದು" ಎಂದು ಅರ್ಥೈಸಬಹುದು. ಇದು ಸಂಪೂರ್ಣ ತಪ್ಪುಗ್ರಹಿಕೆ. ಈ ಯಾವ ಪ್ರವೃತ್ತಿಯೂ ಮಾನವನ ಅಂತರ್ಗತ ಸ್ವರೂಪವಲ್ಲ. ಪರಿಸ್ಥಿತಿಯ ಪರಿಣಾಮ ಮೂಲತಃ ಮನುಷ್ಯನಾದವನು ಪೂರ್ಣವಾಗಿ ದೈವಿಕನೇ, ಇದಕ್ಕೆ ವಿರುದ್ಧವಾದ ಬೇರೆಲ್ಲ ಗುಣಗಳೂ ಪರಿಸರ-ಪರಿಸ್ಥಿತಿಯಿಂದ ಪಡೆದವು-ವಾಸನಾ ಪ್ರೇರಿತವಾದವುಗಳು.

ಪ್ರಾಪಂಚಿಕತೆಯಲ್ಲಿ ಒಬ್ಬನು ಮುಳುಗಿರುವವರೆಗೂ, ಅವನು ಉದ್ವೇಗ, ಆತಂಕ, ಕಾಳಜಿಗಳಿಂದ ತುಂಬಿರುತ್ತಾನೆ. ಸಂಪತ್ತು, ಭೋಗ, ತನ್ನ ಚಟುವಟಿಕೆಗಳು, ವ್ಯಾಪಾರ, ಉದ್ಯೋಗ ಮುಂತಾದವುಗಳಲ್ಲೇ ತೊಳಲುತ್ತಿರುತ್ತಾನೆ. ತಾನು ಅಧ್ಯಾತ್ಮಿಕನಾದೆ ಎಂದು ಯೋಚಿಸಿದರೆ ಈ ಎಲ್ಲ ಚಟುವಟಿಕೆಗಳನ್ನೂ ಮೋಕ್ಷದ ಅಪೇಕ್ಷೆಯ ಕಡೆಗೆ ವರ್ಗಾಯಿಸುತ್ತಾನೆ. ಆತನ ಸಾಧನೆಯ ವಿಧಾನ ಒಂದೇ ಆಗಿರುತ್ತದೆ. ಯಾವುದು ಪ್ರಪಂಚಕ್ಕಾಗಿದ್ದಿತೋ ಅದೇ ವಿಧಾನ ಈಗ ಮೋಕ್ಷ ಸಾಧನೆಗೆ. ಅದು ಒಂದು ಅಪೇಕ್ಷೆಯನ್ನು ಮತ್ತೊಂದರೊಡನೆ ವಿನಿಮಯ ಅಷ್ಟೇ. ಆದುದರಿಂದ ಎಲ್ಲ ಅಪೇಕ್ಷೆಗಳನ್ನೂ ತೊರೆದುಬಿಡಬೇಕು.

### 62. ಮನೋನಿಯಂತ್ರಣ ಒತ್ತಾಯಕ್ಕಾಗಿ ಒಳಗಾಗಿ ಇರಬಾರದು – ಸಹಜವಾಗಿರಬೇಕು :

ಕ್ವ ನಿರೋಧೋ ವಿಮೂಢಸ್ಯ ಯೋ ನಿರ್ಬಂಧಂ ಕರೋತಿ ವೈ।
ಸ್ವಾರಾಮಸ್ಯೈವ ಧೀರಸ್ಯ ಸರ್ವದಾಽಸಾವಕೃತ್ರಿಮಃ ॥ (XVIII-41)

ಮೂಢನು ಒತ್ತಾಯ ಅಥವಾ ನಿರ್ಬಂಧದಿಂದ ಮನಸ್ಸನ್ನು ನಿಯಂತ್ರಿಸಲು ಯತ್ನಿಸಿದರೆ ಹೇಗೆ ಸಫಲನಾಗುತ್ತಾನೆ? ತನ್ನ ಆತ್ಮದಲ್ಲೇ ಆನಂದದಿಂದಿರುವ ಜ್ಞಾನಿಯು ಆ ಸ್ಥಿತಿಗೆ ಸದಾ ಸಹಜವಾಗಿಯೇ ನುಸುಳುತ್ತಾನೆ.

ಪ್ರಾಪಂಚಿಕ ವಿಷಯಗಳನ್ನು ಕುರಿತ ಆಲೋಚನೆಗಳೇ ಸದಾ ಮನಸ್ಸಿನಲ್ಲಿ ತುಂಬಿಕೊಂಡಿರುತ್ತದೆ – ಸಂಪತ್ತು, ಪತಿ, ಪತ್ನಿ, ಧನ, ಸುತ–ಸುತೆಯರು, ಇತ್ಯಾದಿ. ಈ ಆಲೋಚನೆಗಳು ನಮ್ಮನ್ನು, ನಮ್ಮ ನಿಜ ಸ್ವರೂಪವನ್ನು ಅರಿಯಲು ಬಿಡುವುದೇ ಇಲ್ಲ. ಆದುದರಿಂದ ಪತಂಜಲಿಯ ಯೋಗಸೂತ್ರದಂತೆ, ಈ ಆಲೋಚನೆಗಳನ್ನು ನಿಯಂತ್ರಿಸಲು ಯತ್ನಿಸಬೇಕು. ಅವುಗಳನ್ನು ಸ್ಥಗಿತಗೊಳಿಸಬೇಕು. ಅ–ಮನಸ್ಥಿತಿಯಲ್ಲಿ ಮಾತ್ರ ಮೋಕ್ಷ ಅಥವಾ ಮುಕ್ತಿ ಸಾಧ್ಯ. ಪ್ರಪಂಚ, ಅದರ ಸುಖ ದುಃಖ ಎಲ್ಲವೂ ಕೇವಲ ಆಲೋಚನೆಗಳಷ್ಟೆ ! ಈ ಮನೋನಿಯಂತ್ರಣ ಹಾಗೂ ಎಲ್ಲ ಆಲೋಚನೆಗಳನ್ನು ಸ್ಥಗಿತಗೊಳಿಸುವುದನ್ನೇ 'ನಿರೋಧ' ಎಂದು ಕರೆಯಲಾಗಿದೆ – ಅದು ಪರಮ ತತ್ತ್ವದಲ್ಲಿ ಸಂಯೋಗದ ಕಡೆಗೆ ಕರೆದೊಯ್ಯುತ್ತದೆ. "ಯೋಗಃ ಚಿತ್ತವೃದ್ಧಿ ನಿರೋಧಃ" ಮನಸ್ಸನ್ನು ಅದರ ಚಟುವಟಿಕೆಗಳಿಂದ ಬಲವಂತವಾಗಿ ನಿಯಂತ್ರಿಸುವುದರಿಂದ ಯಾವ ಪ್ರಯೋಜನವಿಲ್ಲ. ಜನ್ಮ ಜನ್ಮಗಳಲ್ಲಿ ನಾವು ವ್ಯಾಮೋಹ, ದ್ವೇಷ, ಅಸೂಯೆ ಮುಂತಾದ ಅಸಂಖ್ಯಾತ ಸಂಬಂಧಗಳ ಸಾಲನ್ನೇ ಹಾದು ಬಂದಿದ್ದೇವೆ. ಈ ವಾಸನೆಗಳು ನಮ್ಮನ್ನು 'ನಿರೋಧ'ದ ಯಶಸ್ಸಿಗೆ ಬಿಡುವುದೇ ಇಲ್ಲ. ಅದಕ್ಕೆ ಪ್ರಯತ್ನ ಪಡುವುದೇ ಅತಿ ಆಯಾಸಕರ. ಇದರ ಅರ್ಥವೆಂದರೆ ನೇರವಾಗಿ ಮನಸ್ಸನ್ನು ನಿಯಂತ್ರಿಸುವುದಕ್ಕೇ ಪ್ರಯತ್ನಿಸಬಾರದು. ಬದಲಾಗಿ ಈ ಆಲೋಚನೆಗಳ ಬೇರನ್ನೇ ಕತ್ತರಿಸಿ ಹಾಕಬೇಕು. ನಾವು ಎಲ್ಲರನ್ನೂ ಸಮದೃಷ್ಟಿಯಿಂದ ಕಾಣುತ್ತಾ ಇಷ್ಟ–ಅನಿಷ್ಟಗಳು, ರಾಗ–ದ್ವೇಷಗಳು ಮುಂತಾದ ದ್ವಂದ್ವಗಳಿಲ್ಲದ ಮನಸ್ಥಿತಿಯನ್ನು ಪಡೆವ ಅಭ್ಯಾಸ ಮಾಡಿಕೊಂಡಾಗ, ಇವುಗಳಲ್ಲಿ ನಮ್ಮ ತೊಡಗುವಿಕೆಯೇ ಇಲ್ಲವಾದಾಗ, ಆಲೋಚನೆಗಳು ತಮಗೆ ತಾವೇ ಇಲ್ಲವಾಗುತ್ತದೆ. ನಿರೋಧವು ಅದರ ಸ್ಥಾನವನ್ನು ಸಹಜವಾಗಿಯೇ ಹೊಂದುತ್ತದೆ.

ಜೀವನ್ಮುಕ್ತನು ತನ್ನಿಂದ ಬೇರೆಯಾದ ಯಾರನ್ನೂ ಕಾಣುವುದೇ ಇಲ್ಲ, ಬ್ರಹ್ಮವಾಗಿ ಇದ್ದುಬಿಡುತ್ತಾರೆ. ಪ್ರಪಂಚವಾಗಲಿ, ಅದರಲ್ಲಿ



ತೊಡಗಿಕೊಳ್ಳುವುದಾಗಲೀ ಇರುವುದಿಲ್ಲ. ಆದುದರಿಂದ ಅವನು ಯಾವ ಆಲೋಚನೆಯನ್ನೂ ಹೊಂದಿರುವುದು ಸಾಧ್ಯವೇ ಆಗುವುದಿಲ್ಲ. ಇದೇ ಸಹಜ ಸ್ವರೂಪದ ನಿರೋಧ.

**63. ಮನಸ್ಸು ಯಾವುದಾದರೂ ಅವಲಂಬನೆಗೆ ಜೋತು ಬೀಳಬಾರದು.**

ಮುಮುಕ್ಷೋ ಬುದ್ಧಿರಾಲಂಬಮನ್ತರೇಣ ನ ವಿದ್ಯತೇ ॥
ನಿರಾಲಂಬೈವ ನಿಷ್ಕಾಮಾ ಬುದ್ಧಿರ್ಮುಕ್ತಸ್ಯ ಸರ್ವದಾ ॥ (XVIII-44)

ಮುಕ್ತಿಯನ್ನು ಅಪೇಕ್ಷಿಸುವ ಸಾಧಕನ ಬುದ್ಧಿಯು ಯಾವುದಾದರೂ ಅವಲಂಬನೆಗೆ ಜೋತು ಬೀಳುವುದಿಲ್ಲ. ಜೀವನ್ಮುಕ್ತನ ಬುದ್ಧಿಯು ಎಲ್ಲ ಅಪೇಕ್ಷೆಗಳಿಂದ ದೂರವಾಗಿದ್ದು ಯಾವ ಅವಲಂಬನೆಯ ಅವಶ್ಯತೆಯನ್ನೂ ಹೊಂದಿರುವುದಿಲ್ಲ.

ಮುಕ್ತಿಯ ಸಾಧಕನು ಯಾವಾಗಲೂ ತನ್ನ ಬುದ್ಧಿಯೊಡನೆ ಯಾವುದಾದರೂ ಮಂತ್ರ ಅಥವಾ ಪೂಜೆ, ಧ್ಯಾನ ಇತ್ಯಾದಿಗಳಿಗೆ ಜೋತುಬಿದ್ದಿರುತ್ತಾನೆ. ಏಕೆಂದರೆ ಉಳಿದೆಲ್ಲ ಆಸೆಗಳೂ ತೊರೆಯಲ್ಪಟ್ಟರೂ ಮುಕ್ತಿಯ ಆಸೆಯು ಇನ್ನೂ ಉಳಿದುಕೊಂಡಿರುತ್ತದೆ. ಈ ಮೊದಲಿನ ಶ್ಲೋಕಗಳಲ್ಲಿ ಹೇಳಿದಂತೆ, ಆತನು ಬ್ರಹ್ಮವೆಂಬುದು ಎಲ್ಲಿಯೋ–ಎಲ್ಲಿಂದಲೋ ಪಡೆಯಬೇಕಾದದ್ದು ಎಂದೇ ಭಾವಿಸಿರುವುದರಿಂದ ತನ್ನ ಮನಸ್ಸಿಗೆ ಯಾವುದಾದರೂ ಅವಲಂಬನವನ್ನು ಹಿಡಿದುಕೊಂಡು, ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿರುತ್ತಾನೆ. ಈ ಅವಲಂಬನೆಗಳೇ ವಾಸನೆಗಳಾಗಿ ಬಿಡುತ್ತವೆ, ಅವುಗಳನ್ನು ತೊರೆಯುವುದು ಅವನಿಗೆ ಸಾಧ್ಯವೇ ಆಗುವುದಿಲ್ಲ.

ಮನಸ್ಸು ಮೋಕ್ಷವೂ ಸೇರಿದಂತೆ ಎಲ್ಲ ವಾಸನೆಗಳಿಂದಲೂ ಒಮ್ಮೆ ಮುಕ್ತವಾಯಿ ತೆಂದರೆ, ಒಬ್ಬನು ತನಗೆ ತಾನೇ ಜೀವನ್ಮುಕ್ತನಾಗಿ ಬಿಡುತ್ತಾನೆ ಮತ್ತು ಆತ್ಮನಿಂದ ಬೇರೆಯಾದ ಏನೊಂದೂ ಇಲ್ಲವೆಂದು ಅವನು ತಿಳಿದಿರುವುದರಿಂದ, ಅಸತ್ಯವೇ ಆದ ಯಾವ ಬಾಹ್ಯ ಅವಲಂಬನಕ್ಕೂ ಅವನು ಜೋತುಬೀಳುವುದಿಲ್ಲ. ಎಲ್ಲ ಬಂಧನಗಳಿಂದಲೂ ಮುಕ್ತರಾಗುವುದಕ್ಕೇ ನಾವು ಪ್ರಯತ್ನಿಸುತ್ತಿರುವಾಗ, ಮತ್ತಷ್ಟು ಬಂಧನವನ್ನುಂಟುಮಾಡುವ ವಿಷಯಗಳನ್ನು ಏಕೆ ಬಳಸಬೇಕು? ನಿರಾಲಂಬ ಉಪನಿಷತ್ತಿನಲ್ಲಿ ಎಲ್ಲ ವಿಧಿ–ನಿಷೇಧಗಳ, ಧ್ಯಾನ–ಸಮಾಧಿಗಳೂ ಸೇರಿದಂತೆ ಸಾಧನೆಗಳೂ ಪತಂಜಲಿ ಯೋಗ ಸೂತ್ರಗಳಲ್ಲಿ ಹೇಳಿರುವಂತೆ "ಯಮಾದಿ ಅಷ್ಟಾಂಗ ಯೋಗ ಸಂಕಲ್ಪೋ ಬಂಧಃ"

**64. ಪರಿಶುದ್ಧವಾದ ಮನಸ್ಸು ಪರಮ ಸತ್ಯವನ್ನು ತಕ್ಷಣವೇ ಗ್ರಹಿಸುತ್ತದೆ.**

ವಸ್ತು ಶ್ರವಣ ಮಾತ್ರೇಣ ಶುದ್ಧ ಬುದ್ಧಿರ್ನಿರಾಕುಲಃ ।
ನೈವಾಚಾರಂ ಅನಾಚಾರಂ ಔದಾಸ್ಯಂ ವಾ ಪ್ರಪಶ್ಯತಿ ॥ (XVIII-48)

ನಿರ್ಮಲವಾದ ಮನಸ್ಸುಳ್ಳವನು, ಶಾಂತನಾಗುತ್ತಾನೆ – ಪರಮ ಸತ್ಯದ ಬಗೆಗೆ ಕೇಳುವ ಮಾತ್ರದಿಂದ ಎಲ್ಲ ಆತಂಕ-ಉದ್ವೇಗಗಳಿಂದ ಮುಕ್ತನಾಗುತ್ತಾನೆ. ಅನಂತರ ಅವನು ಆಚಾರ-ಅನಾಚಾರ ಉದಾಸೀನತೆ ಇತ್ಯಾದಿ ಯಾವುದರ ಬಗೆಗೂ ತಲೆಕೆಡಿಸಿಕೊಳ್ಳುವುದಿಲ್ಲ.

ನಿರ್ಮಲವಾದ ಮನಸ್ಸು ಎಂದರೆ ಎಲ್ಲ ವಾಸನೆಗಳಿಂದಲೂ, ಆಸೆಗಳಿಂದಲೂ (ಪೂರ್ವ ಕರ್ಮಗಳ ಫಲವಾದ ವಾಸನೆಗಳು) ಕಳಚಿಕೊಂಡದ್ದು. ಒಬ್ಬನು ವಿರಕ್ತಿಯನ್ನು ಬೆಳೆಸಿಕೊಂಡಾಗಲೇ, ಎಲ್ಲ ವಸ್ತುಗಳ ಬಗೆಗೂ ಔದಾಸೀನ್ಯವನ್ನು ತಾಳಿದಾಗಲೇ ವಾಸನೆಗಳು ಅಳಿಸಿಹೋಗುತ್ತವೆ. ಹೀಗಾಗಿ ಎಲ್ಲಿ ಇಷ್ಟ ಅನಿಷ್ಟಗಳೂ ತೊರೆಯಲ್ಪಟ್ಟು ಸರ್ವ ಸಮದೃಷ್ಟಿಯನ್ನು ಪಡೆದಿರುತ್ತಾನೆ. ಸಾಮಾನ್ಯ ಮನುಷ್ಯನಾದರೋ ಚಿಂತೆಗಳು, ಆತಂಕಗಳು, ಆಸೆಗಳು, ವಾಸನೆಗಳು, ಇವುಗಳಿಂದ ತುಂಬಿದ ಮನಸ್ಸಿನಿಂದ ಆತಂಕ, ಉದ್ವೇಗಗಳಿಗೆ ಒಳಗಾಗಿರುತ್ತಾನೆ. ಪರಿಶುದ್ಧ ಮನಸ್ಸಿನಿಂದ ಕೂಡಿರುವವನು ಪರಮ ಸತ್ಯವನ್ನು ಕೇಳಿದ ಕ್ಷಣದಲ್ಲೇ ಎಲ್ಲ ವಸ್ತು ವಿಷಯಗಳೂ ಕೇವಲ ಕಲ್ಪನೆಗಳಿಂದ ಹೆಣೆಯಲ್ಪಟ್ಟವುಗಳು ಎಂಬ ದೃಢ ನಿಶ್ಚಯವನ್ನು ತಾಳಿ ಬಿಡುತ್ತಾನೆ. ಅವನ ಎಲ್ಲ ತಳಮಳಗಳೂ ಮಾಯವಾಗುತ್ತವೆ. ಯಾವುದೇ ದುರಂತಗಳಿಂದಲೂ ಗಲಿಬಿಲಿಗೊಳ್ಳದೆ ಶಾಂತವಾಗಿರುತ್ತಾನೆ. ಅವನು ಹೊಂದಬೇಕಾದ ಯಾವ ಗುರಿಯೂ ಇಲ್ಲದಿರುವುದರಿಂದ, ತನ್ನ ಬಗ್ಗೆ ಇತರರ ಯಾವ ಅಭಿಪ್ರಾಯಗಳ ಬಗೆಗೂ ಚಿಂತಿಸುವುದಿಲ್ಲ. ಸಮಾಜದಲ್ಲಿ ತನಗೆ ಇಚ್ಛೆ ಬಂದ ರೀತಿಯಲ್ಲಿ ವರ್ತಿಸುತ್ತಾನೆ. ತಾನು ಸಾಂಪ್ರದಾಯಕ ಶಿಸ್ತಿಗೆ ಅನುಗುಣವಾಗಿ ವರ್ತಿಸುತ್ತಿದ್ದೇನೆಯೆ ಅಥವಾ ತನ್ನ ವರ್ತನೆ ಶಾಸ್ತ್ರಗಳಿಗೆ ವಿರುದ್ಧವಾಗಿದೆಯೆ ಅಥವಾ ಸಾಮಾಜಿಕ ಅಳತೆಗೋಲಿಗೆ ಪ್ರತಿಯಾಗಿದೆಯೆ ಎಂಬುದರ ಬಗೆಗೂ ಅವನು ತಲೆಕೆಡಿಸಿಕೊಳ್ಳುವುದಿಲ್ಲ. ಅಥವಾ ಅವನು ಉದ್ದೇಶಪೂರ್ವಕವಾಗಿಯೇ ಹೀಗೆ ಇದ್ದಾನೆ ಎಂದೂ ಹೇಳಲಾಗದು. ಒಂದು ಶಿಶುವಿನಂತೆ (ಮುಗ್ಧ ಮಗು) ಅವನು ನಡೆದುಕೊಳ್ಳುತ್ತಾನೆ.



**65. ಕೃರ್ತೃತ್ವ ಬುದ್ಧಿಯನ್ನು ತೊರೆದುಬಿಡು-ಕ್ರಿಯೆಗಳ ಫಲಿತಾಂಶದ ಬಗ್ಗೆ ಅಧಿಕಾರವನ್ನು ಅಪೇಕ್ಷಿಸಬೇಡ.**

ಅಕರ್ತೃತ್ವಂ ಅಭೋಕ್ತೃತ್ವಂ ಸ್ವಾತ್ಮನೋ ಮನ್ಯತೇ ಯದಾ ।
ತದಾ ಕ್ಷೀಣಾ ಭವಂತ್ಯೇವ ಸಮಸ್ತಾ ಚಿತ್ತ ವೃತ್ತಯಃ ॥ (XVIII-51)

ಸಾಧಕನು, ತನ್ನ ಆತ್ಮವು ಎಲ್ಲ ಕ್ರಿಯೆಗಳಿಗೂ ಸಾಕ್ಷಿ ಮಾತ್ರ. ಅವು ತನ್ನ ಇಂದ್ರಿಯಗಳ ಮೂಲಕ ನಡೆಯುತ್ತಿವೆ, ಆತ್ಮವು ಕರ್ತೃವೂ ಅಲ್ಲ ಅಥವಾ ಕರ್ಮದ ಫಲವನ್ನು ಅನುಭವಿಸುವ ಭೋಕ್ತೃವೂ ಅಲ್ಲ ಇದನ್ನು ಎಂದು ತಿಳಿಯಲು ಪ್ರಾರಂಭಿಸುತ್ತಾನೋ ಆಗ ಬಗೆಬಗೆಯ ವಸ್ತುಗಳ ರೂಪವನ್ನು ತಾಳುವ ಆಲೋಚನೆಗಳು ಮಾಯವಾಗುತ್ತವೆ.

ಒಂದು ಜನರೇಟರ್, ವಿದ್ಯುತ್ತನ್ನು ಹಲವಾರು ಬಲ್ಬುಗಳ ಮೂಲಕ ಹಾಯಿಸುವಾಗ, ಬಲ್ಬುಗಳು ತಮ್ಮ ಬೆಳಗುತ್ತಿರುವ ವಿದ್ಯುತ್ತಿಗೆ (ಬೆಳಕು) ಕರ್ತೃಗಳು ಅಲ್ಲ, ಅದರ ಫಲವನ್ನು ಅನುಭವಿಸುವ ಭೋಕ್ತೃಗಳೂ ಅಲ್ಲ ಹಾಗೆ ಅನುಭವಿಸಲು ತಮ್ಮ ಹಕ್ಕನ್ನು ಚಲಾಯಿಸುವ ಅರ್ಹತೆಯೂ ಅವುಗಳಿಗಿಲ್ಲ. ಅವು ಕೇವಲ ಸಾಕ್ಷಿಗಳಷ್ಟೆ. ವಿದ್ಯುತ್ತಿನ ಬೆಳಕು ಬಲ್ಬಿನ ಒಂದೊಂದರಲ್ಲಿ ಪ್ರತ್ಯೇಕವಾಗಿರುವುದೂ ಇಲ್ಲ. ಬದಲಾಗಿ ಒಟ್ಟು ವಿದ್ಯುತ್ತಿನ ಕ್ರಿಯೆ ಅಷ್ಟೇ. ಅದೇ ರೀತಿಯಲ್ಲಿ ನಮ್ಮ ದೇಹದ ಹಲವಾರು ಇಂದ್ರಿಯಗಳು ನೋಡುವುದು, ಮೂಸುವುದು, ಕೇಳುವುದು, ನಡೆಯುವುದು, ಇತ್ಯಾದಿಗಳನ್ನು ತಮಗೆ ತಾವೇ ಮಾಡುವುದಿಲ್ಲ – ಬದಲಾಗಿ ದೇಹದ ಒಳಗಿನ ಶಕ್ತಿಯಿಂದ ಅದು ಸಾಧ್ಯವಾಗುತ್ತದೆ. ಹಾಗೆಯೇ ವ್ಯಕ್ತಿಗಳಾಗಿ ನಾವು ಏನನ್ನೂ ಮಾಡುತ್ತಿಲ್ಲ, ನಾವು ಮಾಡುತ್ತಿಲ್ಲ ಎಂದ ಮೇಲೆ ಆ ಕಾರ್ಯಗಳ ಫಲವಾದ ಪುಣ್ಯ-ಪಾಪ ಯಾವುದೇ ಇರಲಿ ಅವುಗಳಿಗೂ ನಾವು ಬಾಧ್ಯರಲ್ಲ. ಸಮುದ್ರದ ಪ್ರತಿಯೊಂದು ಅಲೆಯೂ ಮೇಲೆ ಬಹು ಎತ್ತರಕ್ಕೆ ಚಿಮ್ಮುವುದು ತನ್ನ ಶಕ್ತಿಯಿಂದಲೇ ಎಂದು ಭ್ರಮಿಸುತ್ತದೆ. ಸಮುದ್ರದ ಒಟ್ಟು ಶಕ್ತಿಯೇ ಪ್ರತಿ ಅಲೆಯೂ ಮೇಲೆ ಚಿಮ್ಮುವಂತೆ ಮಾಡುತ್ತದೆ. ನಾವು ಕರ್ತೃಗಳೂ ಅಲ್ಲ ಅಥವಾ ಕ್ರಿಯೆಗಳ ಅನುಭವಿಗಳೂ ಅಲ್ಲ, ಕೇವಲ ಸಾಕ್ಷಿಗಳು ಮಾತ್ರ ಎಂದು ಒಮ್ಮೆ ನಾವು ಅರಿತೆವೆಂದರೆ ನಮ್ಮನ್ನು ಕ್ರಿಯೆಗೆ ಪ್ರಚೋದಿಸುವ ವಾಸನೆಗಳಾಗಲಿ, ಆಸೆಗಳಾಗಲೀ ಉದ್ಭವಿಸುವುದೇ ಇಲ್ಲ. ನಾವು ಏನನ್ನೂ ಮಾಡುತ್ತಿಲ್ಲ, ಎಲ್ಲ ಕ್ರಿಯೆಗಳೂ ಉನ್ನತ ಸ್ತರದಲ್ಲಿ

ನಡೆಸಲ್ಪಡುತ್ತಿವೆ ಎಂಬುದನ್ನು ನಾವು ಅರಿತಾಗ, ಎಲ್ಲ ಕ್ರಿಯೆಗಳಿಂದಲೂ ನಾವು ದೂರವಾಗುತ್ತೇವೆ. ವಾಸನೆಗಳು, ಅಪೇಕ್ಷೆಗಳು ನಮ್ಮನ್ನು ಕ್ರಿಯೆಗೆ ಪ್ರಚೋದಿಸದೆ ನಿಷ್ಕ್ರಿಯವಾಗುತ್ತವೆ. ವಾಸನಾಕ್ಷಯಕ್ಕೆ ಇದು ಬಹು ಮುಖ್ಯವಾದ ವಿಧಾನ. ಈ ಮೊದಲೂ ಸಹ, ಇದು ಅಷ್ಟಾವಕ್ರರು ನೀಡಿದ, ಒಂದು ತಕ್ಷಣದ ಪರಿಣಾಮದ ಮೋಕ್ಷದ ಕ್ಯಾಪ್ಸೂಲ್ ಆಗಿದೆ. (1–6)

**66. ಜೀವನ್ಮುಕ್ತನೂ ಸಹ ಗೌರವ, ಆದರಗಳನ್ನು ಕೊಡಬೇಕಾದಲ್ಲಿ ಕೊಟ್ಟೇಕೊಡುತ್ತಾನೆ.**

ಶ್ರೋತ್ರಿಯಂ ದೇವತಾಂ ತೀರ್ಥಂ ಅಂಗನಾಂ ಭೂಪತಿಂ ಪ್ರಿಯಂ ।
ದೃಷ್ಟ್ವಾ ಸಂಪೂಜ್ಯ ಧೀರಸ್ಯ ನ ಕಾಪಿ ಹೃದಿ ವಾಸನಾ ॥
(XVIII-54)

ಜೀವನ್ಮುಕ್ತನು, ವೇದ ವಿದ್ವಾಂಸ, ದೇವತೆ, ಪವಿತ್ರ ನದಿ, ಸ್ತ್ರೀ, ದೊರೆ ಅಥವಾ ಯಾರೇ ಪ್ರಿಯ ವ್ಯಕ್ತಿಗೆ ಬಾಗಿ ನಮಿಸುವುದರ ಮೂಲಕ ತೋರಬೇಕಾದ ಗೌರವ, ಆದರಗಳನ್ನು ವ್ಯಕ್ತಪಡಿಸುತ್ತಾನೆ. ಇದು ಭವಿಷ್ಯಕ್ಕಾಗಿ ಯಾವುದೇ ವಾಸನೆ ಅಥವಾ ವೃತ್ತಿಯಾಗಿ ಬಿಡುವುದಿಲ್ಲ.

ಸಾಮಾನ್ಯವಾಗಿ ಜನರು ಒಬ್ಬ ವೇದ ವಿದ್ವಾಂಸನಿಗೆ, ದೇವತೆಗೆ ಮಣಿದು ಅವರ ಆಶೀರ್ವಾದ ಅನುಗ್ರಹವನ್ನು ಬೇಡುತ್ತಾರೆ. ಇದು ಒಂದು ವಾಸನೆಯಾಗಿ ಪರಿಣಮಿಸಿ ಅಂತಹ ಅನುಗ್ರಹವನ್ನು ಮತ್ತೆ ಮತ್ತೆ ಬೇಡುವಂತೆ ಅವರನ್ನು ಪ್ರಚೋದಿಸುತ್ತದೆ. ಸಾಮಾನ್ಯ ಮನುಷ್ಯನು ರಾಜನಿಗೆ ಗೌರವವನ್ನು ತೋರುವುದು ಭಯ ಭಕ್ತಿಯಿಂದ, ಅಥವಾ ಬಹುಮಾನ, ಪ್ರಶಸ್ತಿಗಳನ್ನು ಪಡೆಯುವ ನಿರೀಕ್ಷೆಯಿಂದ.

ಒಬ್ಬನು ತನ್ನ ಆಪ್ತಬಂಧುಗಳಿಗೆ ಅಥವಾ ಮಹಿಳೆಗೆ ಗೌರವ ತೋರುವುದು ಅವರಿಂದ ಆಕರ್ಷಿತನಾಗಿ ಮುಂದೆ ಅವರ ಪ್ರಿಯ ಸಾನ್ನಿಧ್ಯ, ಸನ್ಮಾನಗಳು ದೊರೆಯಬಹುದು ಎಂಬ ಆಸೆಯಿಂದ. ಹೀಗೆ ವಾಸನೆಗಳು ಸಂಸ್ಕಾರಗಳು ಪುನಃ ಪುನಃ ಅಭಿಲಾಷೆಗಳನ್ನು ಸೃಷ್ಟಿಸುತ್ತಾ ಹೋಗುತ್ತದೆ.

ಜೀವನ್ಮುಕ್ತನ ವಿಷಯದಲ್ಲಾದರೋ, ತನ್ನ ಆತ್ಮನಿಂದ ಬೇರೆಯಾದ ಏನನ್ನೂ ಕಾಣುವುದೇ ಇಲ್ಲ. ಎಲ್ಲರನ್ನೂ ಒಂದೇ ರೀತಿಯಾಗಿ



ಕಾಣುತ್ತಾನೆ. ಯಾವ ವಾಸನೆ ಅಥವಾ ಆಸೆಗಳು, ಅವುಗಳ ಕಾರಣದಿಂದ ಉಂಟಾಗುವ ಉಪಕಾರ–ಅನುಗ್ರಹದ ಆಸೆಗಳು ಅವನ ಮನಸ್ಸಿನಲ್ಲಿ ಏಳುವುದೇ ಇಲ್ಲ. ಅವನು ಯಾವುದಾದರೂ ಉದ್ದೇಶದಿಂದ ಗೌರವವನ್ನು ತೋರಿದರೂ ವಾಸನೆಗಳು ಮೇಲೇಳಲು ಆಸ್ಪದವಾಗುತ್ತದೆ. ಆದರೆ ಅದರಿಂದ ಅವನಿಗೆ ಅಂಥ ವಿಶೇಷ ತೃಪ್ತಿ ಏನೂ ಉಂಟಾಗುವುದಿಲ್ಲ. ಅಥವಾ ಈ ಕಾರ್ಯದಿಂದ ಯಾವ ಸಂಭ್ರಮ–ಸಂತೋಷಗಳೂ ಲಭಿಸುವುದಿಲ್ಲ. ಆದುದರಿಂದ ಈ ಬಗೆಯ ಕಾರ್ಯಗಳು ಅವನಲ್ಲಿ ಯಾವ ವ್ಯತ್ಯಾಸವನ್ನೂ ಉಂಟು ಮಾಡುವುದಿಲ್ಲ. ತಾನು ಬೇರೆಯವರಂತೆ ಜನಕ್ಕೆ ತೋರುವುದೂ ಅವನಿಗೆ ಇಷ್ಟವಿಲ್ಲದುದರಿಂದ ಈ ರೀತಿಯಲ್ಲಿ ಅವನು ವ್ಯವಹರಿಸುತ್ತಿರಬಹುದು ಅಥವಾ ಈ ಕಾರ್ಯಗಳನ್ನು ಮಾಡುವುದು, ಶಾಸ್ತ್ರ ವಿಧಿಗಳನ್ನು ಪಾಲಿಸುವುದು ಎಷ್ಟು ಮುಖ್ಯ ಎಂದು ಬೇರೆಯವರಿಗೆ ಮಾದರಿಯಾಗಿ ತೋರುವುದಕ್ಕೆಂದೇ ಇರಬಹುದು. ಭಗವದ್ಗೀತೆಯು ಹೇಳುವಂತೆ

"ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ ।
ಸ ಯತ್ ಪ್ರಮಾಣಂ ಕುರುತೇ ಲೋಕಃ ತತ್ ಅನುವರ್ತತೆ ॥"
(ಭ.ಗೀ. 3-21)

ಶ್ರೇಷ್ಠನಾದವನು ಹೇಗೆ ವರ್ತಿಸುತ್ತಾನೋ, ಉಳಿದವರೂ ಹಾಗೆಯೇ ಮಾಡುತ್ತಾರೆ. ಅವನು ಮಾಡಿದುದೆಲ್ಲ ಜನಗಳು ಪರಿಪಾಲಿಸಲು ಯೋಗ್ಯವಾದ ಅಧಿಕೃತ ಕಾರ್ಯಗಳು ಎಂದೇ ಭಾವಿಸಲ್ಪಡುತ್ತವೆ.

**67. ಮಾನಾಪಮಾನಗಳು ಯಾವ ಪ್ರಭಾವವನ್ನೂ ಬೀರುವುದಿಲ್ಲ.**

ಭೃತ್ಯೈಃ ಪುತ್ರೈಃ ಕಲತ್ರೈಶ್ಚ ದೌಹಿತ್ರೈಶ್ಚಾಪಿ ಗೋತ್ರಜೈಃ ।
ವಿಹಸ್ಯ ಧಿಕ್ಕೃತೋ ಯೋಗೀ ನ ಯಾತಿ ವಿಕೃತಿಂ ಮನಾಕ್ ॥
(XVIII-55)

ಈ ಮೊದಲಿನ ಶ್ಲೋಕದಲ್ಲಿ ಜೀವನ್ಮುಕ್ತನು ಬೇರೆಯವರಿಗೆ ಕೊಡಬೇಕಾದ ಗೌರವವನ್ನು ಕೊಟ್ಟೇಕೊಡುವುದನ್ನು ಮರೆಯುವುದಿಲ್ಲ ಎಂದು ಹೇಳಲಾಯಿತು. ಪ್ರಕೃತ ಶ್ಲೋಕದಲ್ಲಿ ಅವನು ಯಾವುದೇ ಅಪಹಾಸ್ಯ ಅಥವಾ ಅಪಮಾನಗಳಿಂದಲೂ ವಿಚಲಿತನಾಗುವುದಿಲ್ಲ ಎಂದು ಹೇಳಲಾಗಿದೆ. ಅದು ಆದರ್ಶ ಸ್ಥಿತಿ. ವಿಷ್ಣು ಸಹಸ್ರನಾಮದಲ್ಲಿ ಭಗವಂತನನ್ನು ಕುರಿತು "ಅಮಾನೀ ಮಾನದೋ ಮಾನ್ಯೋ" ಎಂಬ

ಮೂರು ವಿಶೇಷಣಗಳನ್ನು ಹೇಳಲಾಗಿದೆ–ಯಾವ ಅಹಂಭಾವವಿಲ್ಲದವನು, ಉಳಿದವರಿಗೆ ಸೂಕ್ತ ಗೌರವವನ್ನು ನೀಡುವವನು, ಎಲ್ಲರಿಂದಲೂ ಗೌರವಿಸಲ್ಪಡುವವನು ಎಂದು.

ಜೀವನ್ಮುಕ್ತನು ತನ್ನ ಆತ್ಮನಿಂದ ಬೇರೆಯಾದ ಯೊವ್ವೊಬ್ಬನನ್ನೂ ನೋಡುವುದೇ ಇಲ್ಲವಾದುದರಿಂದ, ತನ್ನನ್ನು ಅಪಮಾನಿಸುವ ಬೇರೆಯವನು ಇರುವುದೇ ಇಲ್ಲ ! ಒಮ್ಮೆ ಯಾರೋ ಒಬ್ಬನು ಓರ್ವ ಸಂತನನ್ನು ಕೆಟ್ಟದಾಗಿ ನಿಂದಿಸಿದ. ಸಂತನು ಆತನನ್ನು ಒಂದು ಪ್ರಶ್ನೆ ಕೇಳಿದ – “ಸ್ವಾಮಿ, ನನ್ನಲ್ಲಿ ಎರಡು ಭಾಗಗಳಿವೆ – ದೇಹ ಮತ್ತು ಆತ್ಮ ಎಂದು. ಈ ಎರಡರಲ್ಲಿ ತಾವು ಯಾವುದನ್ನು ನಿಂದಿಸುತ್ತೀರಿ? ತಾವು ನನ್ನ ಆತ್ಮವನ್ನು ನಿಂದಿಸಿದಿರಿ ಎಂದರೆ, ಎಲ್ಲರಲ್ಲೂ ಇರುವುದೂ ಒಂದೇ ಆತ್ಮ. ಪರಿಣಾಮವಾಗಿ ನಿಮ್ಮನ್ನೇ ನೀವು ನಿಂದಿಸಿಕೊಳ್ಳು ತ್ತಿದ್ದೀರಿ. ತಾವು ನನ್ನ ದೇಹದ ಮೇಲೆ ಬಯ್ಗಳ ಸುರಿಮಳೆ ಕರೆಯುತ್ತಿದ್ದೀರಿ ಎಂದಾದರೆ, ನಾನು ತುಂಬ ಹೃತ್ಪೂರ್ವಕವಾಗಿ ನಿಮ್ಮೊಡನೆ ಸೇರುತ್ತೇನೆ. ಈ ದೇಹವೇ ಎಲ್ಲ ಸಮಸ್ಯೆಗಳನ್ನು ನನಗೆ ಉಂಟುಮಾಡಿದೆ. ಅದನ್ನು ಎಷ್ಟು ಬಯ್ದರೂ ಸಾಲದು!”

ಜೀವನ್ಮುಕ್ತನು ತನ್ನ ದೇಹದೊಡನೆ ಎಲ್ಲ ಸಂಬಂಧಗಳನ್ನೂ ಕಳಚಿಕೊಂಡಿರುವುದರಿಂದ, ದೇಹಾತ್ಮ ಭಾವವನ್ನೇ ವರ್ಜಿಸಿರುವಾಗ, ಅವನ ದೇಹದೊಡನೆ ಸಂಬಂಧವಿರಿಸಿಕೊಂಡಿರುವವರೊಡನೆ ಅವನಿಗೆ ಯಾವ ನಂಟೂ ಈಗ ಉಳಿದಿಲ್ಲ. ಆದುದರಿಂದ ಅವನ ಕಡೆಯಿಂದ ಮಗ, ಹೆಂಡತಿ, ಮೊಮ್ಮಕ್ಕಳು, ಸೇವಕರು ಎಂಬ ಯಾವ ಸಂಬಂಧವನ್ನು ಅವನು ಗುರುತಿಸಲಾರ.

ಸಾಮಾನ್ಯ ಮನುಷ್ಯನು, ಯಾರಾದರೂ ತನ್ನನ್ನು ಅಪಮಾನಿಸಿದಾಗ ಅಥವಾ ಅಗೌರವಿಸಿದಾಗ ತೀವ್ರವಾಗಿ ನೊಂದುಕೊಳ್ಳುತ್ತಾನೆ. ಅವನ ಅಹಂಗೆ ಪೆಟ್ಟು ಬೀಳುತ್ತದೆ. ತುಂಬ ಉದ್ವಿಗ್ನನಾಗುತ್ತಾನೆ. ಮನಶ್ಶಾಂತಿಯನ್ನು ಕಳೆದುಕೊಳ್ಳುತ್ತಾನೆ. ಅಂಥವರೊಡನೆ ಅವನ ಸಂಬಂಧ ಬಿಗಡಾಯಿಸುತ್ತದೆ. ಅವರ ಬಗೆಗೆ ಪ್ರತೀಕಾರ ಸಾಧಿಸುವುದನ್ನೂ ಯೋಚಿಸುತ್ತಾನೆ. ವರ್ಷಾನುಗಟ್ಟಲೆ ತಾನು ಅನುಭವಿಸಿದ ಅಪಮಾನ, ಅಗೌರವದ ನೆನಪು ಮರುಕಳಿಸುತ್ತಲೇ ಇರುತ್ತದೆ. ಅವನ ಮನಸ್ಸನ್ನು ಕ್ಷೋಭೆಗೊಳಿಸುವುದಿಲ್ಲ. ಜೀವನ್ಮುಕ್ತನು ಪ್ರರಬ್ರಹ್ಮವಾಗಿ ಇದ್ದು ಬಿಡುವುದರಿಂದ, ಅವನಿಂದ



ಬೇರೆಯಾದ ಪ್ರಪಂಚವೇ ಇಲ್ಲದುದರಿಂದ ಗೌರವ–ಅಗೌರವ, ಪ್ರಶಂಸೆ, ತೆಗಳಿಕೆ, ಯಾವುದೂ ಅವನಲ್ಲಿ ಯಾವ ಬದಲಾವಣೆಯನ್ನೂ ಉಂಟುಮಾಡುವುದಿಲ್ಲ – ಅವನ ಮನಸ್ಸಿನಲ್ಲಿ ಯಾವ ಅಲೆಗಳೂ ಏಳುವುದಿಲ್ಲ.

**68. ಜೀವನ್ಮುಕ್ತನು ಪ್ರತಿಯೊಂದು ದಿನನಿತ್ಯದ ಮಾಮೂಲು ಚಟುವಟಿಕೆಯನ್ನೂ ಹರ್ಷದಿಂದಲೇ ಕೈಗೊಳ್ಳುತ್ತಾನೆ.**

ಸುಖಮಾಸ್ತೇ ಸುಖಂ ಶೇತೇ ಸುಖಮಾಯಾತಿ ಯಾತಿ ಚ ।
ಸುಖಂ ವಕ್ತಿ ಸುಖಂ ಭುಂಕ್ತೇ ವ್ಯವಹಾರೋಽಪಿ ಶಾಂತಧೀಃ ॥
(XVIII-59)

ಜ್ಞಾನಿಯು ತನ್ನ ದೈನಂದಿನ ಎಲ್ಲ ಮಾಮೂಲು ಕಾರ್ಯಗಳಲ್ಲೂ ಶಾಂತಮನಸ್ಕನಾಗಿದ್ದು, ಸಂತೋಷವಾಗಿ ಕುಳಿತುಕೊಳ್ಳುತ್ತಾನೆ. ಸಂತೋಷವಾಗಿ ನಿದ್ರಿಸುತ್ತಾನೆ, ಸಂತೋಷವಾಗಿ ನಡೆದಾಡುತ್ತಾನೆ. ಸಂತೋಷವಾಗಿ ಮಾತನಾಡುತ್ತಾನೆ, ಸಂತೋಷವಾಗಿ ತಿನ್ನುತ್ತಾನೆ. ಸಾಮಾನ್ಯ ಮನುಷ್ಯನು ಒಂದಲ್ಲ ಒಂದು ವಿಷಯದಲ್ಲಿ ಯಾವಾಗಲೂ ಚಡಪಡಿಸುತ್ತಿರುತ್ತಾನೆ. ಎಷ್ಟೋ ಮಂದಿ ಯುವಕರು, ಯುವತಿಯರು ಒಂದೆರಡು ನಿದ್ರೆಯ ಗುಳಿಗೆಗಳನ್ನು ಸೇವಿಸಿದಲ್ಲದೆ ನಿದ್ರೆ ಹೋಗುವುದೇ ಇಲ್ಲದುದನ್ನು ನಾನೇ ನೋಡಿದ್ದೇನೆ. ಒಬ್ಬ ಸಾಮಾನ್ಯ ಮನುಷ್ಯನು ಊಟ ಮಾಡುವಾಗಲೂ ತನ್ನ ಆಫೀಸಿನ ಸಮಸ್ಯೆಗಳನ್ನು ಕುರಿತು ಚಿಂತಿಸುತ್ತಿರುತ್ತಾನೆ. ಯಾವ ಪದಾರ್ಥವನ್ನು ಎಷ್ಟು ಬಾರಿ ಬಡಿಸಿದರು ಎಂಬುದರ ಕಡೆಗೂ ಅವನ ಗಮನವಿರುವುದಿಲ್ಲ. ಮಕ್ಕಳೊಡನೆ ಉದ್ಯಾನವನದಲ್ಲಿ ಓಡಾಡುತ್ತಿರುವಾಗಲೂ ತನ್ನ ಕಛೇರಿಯ ಅಥವಾ ಮನೆಯ ಸಮಸ್ಯೆಗಳನ್ನು ಕುರಿತು ಚಿಂತಿಸುತ್ತಿರುತ್ತಾನೆ. ಅವನ ಮನಸ್ಸು ನಿರಂತರವಾಗಿ ಕ್ಷೋಭೆಗೊಂಡಿರುತ್ತದೆ. ಮಾತನಾಡುತ್ತಿರುವಾಗಲೂ ಏನು ಮಾತನಾಡಿದೆ ಎಂಬುದೇ ಅವನಿಗೆ ಮರೆತುಹೋಗಿರುತ್ತದೆ – ಏಕೆಂದರೆ ಅವನು ಹಲವಾರು ಇತರ ವಿಷಯಗಳನ್ನು ಕುರಿತೇ ಆಲೋಚಿಸುತ್ತಿರುತ್ತಾನೆ.

ಆದರೆ ಜೀವನ್ಮುಕ್ತನು ತನ್ನ ಆತ್ಮವನ್ನಲ್ಲದೆ ಬೇರೆ ಏನನ್ನೂ ಕಾಣದೇ ಇರುವುದರಿಂದ, ವಾಸನಾ ಹಾಗೂ ಆಸೆಗಳಿಂದ ಮುಕ್ತನಾಗಿರುತ್ತಾನೆ. ಅವನಿಗೆ ಯಾವ ಸಮಸ್ಯೆಗಳೂ ಇರುವುದಿಲ್ಲ, ಯಾವ ಆಲೋಚನೆಗಳೂ ಇರುವುದಿಲ್ಲ. ಪ್ರಪಂಚದೊಡನೆ ಯಾವ ನಂಟೂ ಅವನಿಗಿರುವುದಿಲ್ಲ.

ಹೀಗಾಗಿ ಅವನು ಏನೇ ಮಾಡಲಿ ಅದರಲ್ಲಿ ಸ್ವಾರ್ಥದ ಉದ್ದೇಶವಿರುವುದಿಲ್ಲ. ಆದುದರಿಂದ ಅವನು ತನ್ನ ನಡಿಗೆ, ಮಾತು, ತಿನಿಸು, ಊಟ, ನಿದ್ರೆ ಎಲ್ಲದರಲ್ಲೂ ಹರ್ಷದಿಂದಲೇ ಇರುತ್ತಾನೆ. ಅವನು ತಿನ್ನುತ್ತಿರುವಾಗ, ಅದೊಂದನ್ನೇ ಮಾಡುತ್ತಾನೆ, ಬೇರೆ ಆಲೋಚನೆಗಳನ್ನಲ್ಲ. ಅವನು ನಡೆಯುತ್ತಿರುವಾಗ ಅದೊಂದನ್ನೇ ಮಾಡುತ್ತಾನೆ, ಎಲ್ಲ ಕಾರ್ಯಗಳನ್ನೂ ಅವನು ಪೂರ್ಣವಾಗಿ ಮಾಡುತ್ತಾನೆ ಅದಕ್ಕೆ ಬಾಧಕವಾದ ಬೇರೆ ಯಾವ ಆಲೋಚನೆಗಳೂ ಅವನಿಗಿರುವುದಿಲ್ಲ.

ನಮ್ಮ ದೃಷ್ಟಿಯಲ್ಲಿ ಪ್ರಾಪಂಚಿಕ ವಿಷಯಗಳಲ್ಲಿ ಜೀವನ್ಮುಕ್ತನು ಅನಾಸಕ್ತನಾಗಿರುವುದಿಂದ ಅವನು ನಿಸ್ಸಾರವಾದ, ಬೇಸರದ ಬದುಕನ್ನು ಮಾಡುತ್ತಾನೆ ಎಂದು ನಾವು ಭಾವಿಸುತ್ತೇವೆ. ಸತ್ಯವೇನೆಂದರೆ ಅವನು ಜೀವನದ ಪ್ರತಿಯೊಂದು ಕ್ಷಣವನ್ನೂ ಸಂತೋಷದಿಂದಲೇ ಅನುಭವಿಸುತ್ತಾನೆ.

**69. ಜೀವನ್ಮುಕ್ತನ ಮೇಲೆ ಯಾವ ಕರ್ತವ್ಯವನ್ನೂ ಹೊರಿಸಲಾಗಿಲ್ಲ.**

ಕರ್ತವ್ಯತೈವ ಸಂಸಾರೋ ನ ತಾಂ ಪಶ್ಯಂತಿ ಸೂರಯಃ ।
ಶೂನ್ಯಾಕಾರಾ ನಿರಾಕಾರಾ ನಿರ್ವಿಕಾರಾ ನಿರಾಮಯಾಃ ॥
(XVIII-57)

ನಾವು ಮಾಡಬೇಕಾದ ಕರ್ತವ್ಯಗಳು ಎಂಬ ಭಾವನೆಯೇ ಸಂಸಾರದಲ್ಲಿ ನಮ್ಮ ತೊಡಗುವಿಕೆಗೆ ಕಾರಣವಾಗುತ್ತದೆ. ಆದರೆ ಜ್ಞಾನಿಗಳು ಇಂಥ ಯಾವ ಕರ್ತವ್ಯ ಭಾವನೆಯನ್ನೂ ಕಾಣುವುದೇ ಇಲ್ಲ. ಏಕೆಂದರೆ ಅವರು ಯಾವ ನಿರ್ದಿಷ್ಟ ಆಕಾರ ಶೂನ್ಯರಾಗಿ, ವೈಯಕ್ತಿಕತೆ ಇಲ್ಲದವರಾಗಿ, ಬದಲಾವಣೆಗಳೇ ಇಲ್ಲದವರಾಗಿ ಎಲ್ಲ ದುಃಖ ಸಂಕಟಗಳಿಂದ ಮುಕ್ತರಾಗಿರುತ್ತಾರೆ.

ನಮ್ಮ ಈ ಭಾರತ ದೇಶದಲ್ಲಿ ಬಹುಮಂದಿ ತಮ್ಮ ಮೊಮ್ಮಗನ ಮದುವೆ ಮಾಡುವುದೂ ತಮ್ಮದೇ ಕರ್ತವ್ಯವೆಂದು ಭಾವಿಸಿರುತ್ತಾರೆ. ಎಲ್ಲಕ್ಕಿಂತ ಮುಖ್ಯವಾದ ಕರ್ತವ್ಯವೆಂದರೆ ನಾವು ಯಾರು ಎಂಬುದನ್ನು ತಿಳಿಯುವುದು. ಅದಲ್ಲದೆ ಬೇರೆ ಎಲ್ಲಿ ನಿಮ್ಮ ಕರ್ತವ್ಯ ಇದೆ ಎಂದು ಹೇಗೆ ತಿಳಿಯಬಲ್ಲಿರಿ? ಇದಕ್ಕೆ ಬದಲಾಗಿ ನೀವು ಅಪಾರವಾದ ಧನ, ಸಂಪತ್ತುಗಳನ್ನು ಸಂಗ್ರಹಿಸುವುದೇ ನಿಮ್ಮ ಕರ್ತವ್ಯವೆಂದು ಭಾವಿಸುತ್ತೀರಿ.



ಅದು ನಿಮಗೆ ಮಾತ್ರವಲ್ಲ, ನಿಮ್ಮ ಎರಡು ಮೂರು ತಲೆಮಾರಿನವರೆಗೂ ಸಾಕಾಗುವಷ್ಟಿರಬೇಕು! ಜನರು ತಮ್ಮೆಲ್ಲ ಕಾಲವನ್ನೂ ತಮ್ಮ ಪ್ರಾಪ್ತ ವಯಸ್ಕರಾದ ಮಕ್ಕಳಿಗೆ (ಮಗ–ಮಗಳು) ಸಹಾಯ ಮಾಡುವುದರಲ್ಲೇ ಕಳೆಯುತ್ತಾರೆ–ಏಕೆಂದರೆ ಅದು ತಮ್ಮದೇ ಕರ್ತವ್ಯವೆಂದು ಅವರ ಭಾವನೆ. ಜೀವನ್ಮುಕ್ತರಾದವರು ತಮಗೆ ಯಾವ ಕರ್ತವ್ಯವೂ ಕಡ್ಡಾಯವೆಂದು ಭಾವಿಸುವುದೇ ಇಲ್ಲ. ನೀವು ಕರ್ತವ್ಯವೆಂದು ಭಾವಿಸುವ ನಿಮ್ಮ ಕಾರ್ಯಚಟುವಟಿಕೆಗಳೇ ನಿಮ್ಮನ್ನು ಮತ್ತೆ ಸರಿಪಡಿಸಲಾಗದಂತೆ ಪ್ರಪಂಚದಲ್ಲಿ ತೊಡಗಿಸಿ ದುಃಖ ಸಂಕಟಗಳನ್ನು ಉಂಟುಮಾಡುತ್ತವೆ. ಜೀವನ್ಮುಕ್ತರಾದರೋ ದೇಹದೊಡನೆ ತಮ್ಮ ಸಂಬಂಧಗಳನ್ನು ಕಳಚಿಕೊಂಡು ಬಿಟ್ಟಿರುತ್ತಾರೆ. ಅವರು ದೇಹದೊಡನೆ ತಮ್ಮನ್ನು ಗುರುತಿಸಿ ಕೊಳ್ಳುವುದೂ ಇಲ್ಲ. ದೇಹವನ್ನೇ ಅವರು ಲೆಕ್ಕಿಸದೆ ಇರುವುದರಿಂದ ಅವರು ಆಕಾರರಹಿತರೇ ಆಗಿರುತ್ತಾರೆ. ನಿಜದಲ್ಲಿ ಅವರು ಆಕಾರ ರಹಿತವಾದ ಆತ್ಮವನ್ನು ಮಾತ್ರ ಪರಿಗಣಿಸುವುದರಿಂದ, ಅವರ ದೇಹಕ್ಕೆ ಸಂಬಂಧಿಸಿದ ಕಾಹಿಲೆ ಕಸಾಲೆಗಳಾಗಲೀ ಅಥವಾ ಸಮೀಪ ಬಂಧುಗಳ ಮೇಲೆ ಪರಿಣಾಮ ಉಂಟುಮಾಡುವ ಸಂಪತ್ತು, ಮನೆ, ಮುಂತಾದವು ಗಳಾಗಲೀ ಜೀವನ್ಮುಕ್ತರಲ್ಲಿ ಸಂತೋಷ ಅಥವಾ ಸಂಕಟಕ್ಕೆ ಕಾರಣ ವಾಗುವುದೇ ಇಲ್ಲ. ಆದುದರಿಂದ ಮುಕ್ತ ಜೀವಿಗಳು ಪ್ರಪಂಚದ ಯಾವ ವಸ್ತು ವಿಷಯಕ್ಕೆ ಸಂಬಂಧಪಟ್ಟ ಯಾವುದೇ ಕರ್ತವ್ಯ ತಮಗಿದೆ ಎಂದು ಭಾವಿಸುವುದೇ ಇಲ್ಲ.

**70. ಜೀವನ್ಮುಕ್ತ ಯಾವ ಕೆಲಸದಿಂದಲೂ ಕಲುಷಿತಗೊಳ್ಳುವುದಿಲ್ಲ.**

ಸರ್ವಾರಂಭೇಷು ನಿಷ್ಕಾಮೋ ಯಶ್ಚರೇದ್ ಬಾಲವನ್ಮುನಿಃ ।
ನ ಲೇಪಸ್ತಸ್ಯ ಶುದ್ಧಸ್ಯ ಕ್ರಿಯಮಾಣೋಽಪಿ ಕರ್ಮಣಿ (XVIII-64)

ಜೀವನ್ಮುಕ್ತನನ್ನು ಕುರಿತ ಇಂತಹುದೇ ವಿವರಣೆಯಲ್ಲಿ ಭಗವದ್ಗೀತೆಯಲ್ಲಿ (14-25) ಆರಂಭ ಎಂಬ ಶಬ್ದವನ್ನು ಕ್ರಿಯೆಯ ಪ್ರಾರಂಭ ಎಂಬುದಕ್ಕೆ ಬದಲಾಗಿ, 'ಎಲ್ಲ ಚಟುವಟಿಕೆಗಳು' ಎಂಬುದಾಗಿ ವಿವರಿಸಲಾಗಿದೆ. (ಶಂಕರ ಬಾಷ್ಯ). ಬೇರೆ ಮಾತುಗಳಲ್ಲಿ ಹೇಳುವುದಾದರೆ, ಸಾಧ್ಯವಾದ ಮಟ್ಟಿಗೆ, ಎಲ್ಲ ಯೋಜನೆಗಳನ್ನೂ ಅವನು (ಜೀವನ್ಮುಕ್ತನು) ಪ್ರಾರಂಭ ಮಾಡುವುದೇ ಬಿಟ್ಟು ಬಿಡುತ್ತಾನೆ ಎಂದಲ್ಲ, ಮುಂದುವರಿಯುತ್ತಿರುವ ಅಂತಹ ಚಟುವಟಿಕೆಗಳನ್ನೂ ಬಿಟ್ಟುಬಿಡುತ್ತಾನೆ

ಎಂದು ಅರ್ಥೈಸಬಹುದು. ಜೀವನ್ಮುಕ್ತನು ತನ್ನಿಂದ ಬೇರೆಯಾದ ಯಾವ ವಸ್ತುವನ್ನೂ ಕಾಣುವುದೇ ಇಲ್ಲ. ಅವನಿಂದ ಬೇರೆಯಾದ ಜಗತ್ತೂ ಇಲ್ಲ. ಆದುದರಿಂದ ಎಲ್ಲ ಆಸೆಗಳಿಂದ ವಿಮುಖನಾಗಿರುತ್ತಾನೆ. ಕಾರ್ಯವನ್ನು ಮಾಡುವುದರಿಂದ ಏನನ್ನಾದರೂ ಗಳಿಸುವ ಉದ್ದೇಶವೂ ಅವನಿಗಿಲ್ಲ. ಮರಳಿನಲ್ಲಿ ಆಡುತ್ತಿರುವ ಮಗು ಒದ್ದೆಯಾದ ಮರಳಿನಿಂದಲೇ ಒಂದು ಭಾರಿ ಬಂಗಲೆಯನ್ನು ಕಟ್ಟುತ್ತದೆ. ಮನೆಗೆ ಮರಳುವಾಗ ಆ ಮರಳಿನ ಮನೆಯನ್ನು ಕೆಡವಿ ಹೋಗುತ್ತದೆ. ಅದು ಮಗುವಿನ ಆಟ. ಮನೆಯನ್ನು ಕಟ್ಟುವುದರಲ್ಲಾಗಲಿ, ಕೆಡವುವುದರಲ್ಲಾಗಲೀ ಅದಕ್ಕೆ ಬೇರೆ ಯಾವ ಉದ್ದೇಶವೂ ಇರಲಿಲ್ಲ. ಹೀಗೆಯೇ ಜೀವನ್ಮುಕ್ತನು ಯಾವುದಾದರೂ ಚಟುವಟಿಕೆಯಲ್ಲಿ ತೊಡಗಿರುವಾಗಲೂ, ಯಾವ ಉದ್ದೇಶವನ್ನೂ ಹೊಂದಿರುವುದಿಲ್ಲ. ಹೀಗಾಗಿ ಆ ಕ್ರಿಯೆಗಳು ಅವನಲ್ಲಿ ಯಾವ ವಾಸನೆಗಳನ್ನೂ ಉಂಟುಮಾಡುವುದಿಲ್ಲ. ಜ್ಞಾನಿಗೆ ಕರ್ತೃತ್ವ ಭಾವವೇ ಇಲ್ಲದಿರುವುದರಿಂದ ಕ್ರಿಯೆಯ ಫಲವಾದ ಪುಣ್ಯ, ಪಾಪ ಇತ್ಯಾದಿಗಳು ಅವನಿಗೆ ಉಂಟಾಗುವುದೇ ಇಲ್ಲ. ಅವನು ಅಕಳಂಕಿತನಾಗಿಯೇ ಇದ್ದು ಬಿಡುತ್ತಾನೆ. ಕ್ರಿಯೆಗಳಿಂದ ಅವನು ಬಂಧಿತನಾಗಿಲ್ಲ.

**71. ಎಲ್ಲ ಸಂದರ್ಭಗಳಲ್ಲೂ ಒಂದೇ ಬಗೆಯಾಗಿ ಶಾಂತಚಿತ್ತದಿಂದಿರುತ್ತಾನೆ.**

ಸರ್ವದನ್ಯ ಆತ್ಮಜ್ಞಃ ಸರ್ವಭಾವೇಷು ಯಃ ಸಮಃ ।
ಪಶ್ಯನ್ ಶೃಣ್ವನ್, ಸ್ಪೃಶನ್, ಜಿಘ್ರನ್, ಅಶ್ನನ್, ನಿಸ್ತರ್ಷಮಾನಸಃ ॥
(XVIII-65)

ಜೀವನ್ಮುಕ್ತನು ಎಲ್ಲ ಸಂದರ್ಭಗಳಲ್ಲೂ ಒಂದೇ ರೀತಿಯಾಗಿರುತ್ತಾನೆ. ಅವನು ನೋಡುತ್ತಿರಲಿ, ಕೇಳುತ್ತಿರಲಿ, ಮುಟ್ಟುತ್ತಿರಲಿ, ಮೂಸುತ್ತಿರಲಿ, ತಿನ್ನುತ್ತಿರಲಿ, ಎಲ್ಲ ಆಸೆಗಳಿಂದ ಮುಕ್ತನಾಗಿರುವುದರಿಂದ, ಸಮಚಿತ್ತನೇ ಆಗಿರುತ್ತಾನೆ. ಅಂತಹ ಆತ್ಮಜ್ಞಾನಿಯು ನಿಜಕ್ಕೂ ಧನ್ಯ!

ಆತ್ಮನಿಂದ ಬೇರೆಯಾದ ವಸ್ತುವಾಗಲಿ, ವಿಶ್ವವಾಗಲೀ ಜೀವನ್ಮುಕ್ತನಿಗೆ ಇಲ್ಲವೇ ಆದುದರಿಂದ, ಆತ್ಮವಾಗಿಯೇ ಇದ್ದು ಬಿಡುತ್ತಾನೆ. ಯಾವ ವಸ್ತುವೂ ಅವನಿಗೆ ಇಲ್ಲದಿರುವುದರಿಂದ, ಉದ್ವೇಗ ಅಥವಾ ಸಂತೋಷ, ದುಃಖ, ಇಷ್ಟ ಅನಿಷ್ಟ ಎಂಬ ಪ್ರಶ್ನೆಯೇ ಏಳುವುದಿಲ್ಲ. ಯಾವ ಘಟನೆಯೂ ಯಾವ ಭಾವದ ಅಲೆಯನ್ನೂ ಉಂಟುಮಾಡುವುದಿಲ್ಲ.



ಅವನು ನಷ್ಟ ಹೊಂದಲಿ, ಅಥವಾ ಲಾಭವನ್ನು ಗಳಿಸಲಿ, ಯಾವುದಾದರೂ ಅಪಾಯ ಅವನನ್ನು ಬೆದರಿಸಲಿ, ಅಥವಾ ಸುಖ ಅವನಿಗಾಗಿ ಕಾದಿರಲಿ ಅವನು ಚಿತ್ತ ಸ್ವಾಸ್ಥ್ಯವನ್ನು ಕಳೆದುಕೊಳ್ಳುವುದಿಲ್ಲ. ಅವನು ಕೊಳೆತುಹೋದ ಶವದ ಮಾಂಸವನ್ನು ಸ್ಪರ್ಶಿಸಲಿ ಅಥವಾ ಸುಂದರಿಯೊಬ್ಬಳ ಕೈಯನ್ನು ಸೋಂಕಲಿ, ಸಮಚಿತ್ತನೇ ಆಗಿರುತ್ತಾನೆ. ಜುಗುಪ್ಸೆ ಅಥವಾ ಆಕರ್ಷಣೆ ಅವನಿಗೆ ಇರುವುದಿಲ್ಲ. ಹೀಗಾಗಿ ಅವನು ಯಾವುದಾದರೂ ಕ್ರಿಯೆಯನ್ನು ಮಾಡಿದರೂ ಸಹ, ಅದು ಯಾವ ಗುರುತನ್ನೂ ಅವನಲ್ಲಿ ಉಂಟುಮಾಡುವುದಿಲ್ಲ. ಅಷ್ಟೇಕೆ ಅದನ್ನು ಅವನ ಮೇಲೆ ಯಾವ ಪರಿಣಾಮವನ್ನೂ ಮಾಡುವುದಿಲ್ಲ.

**72. ಮಾಯಾಮಾತ್ರವಾದ ಪ್ರಪಂಚದಲ್ಲಿ ಜೀವನ್ಮುಕ್ತನು ಪ್ರಖರವಾಗಿ ಬೆಳಗುತ್ತಾನೆ.**

ಬುದ್ಧಿ ಪರ್ಯಂತ ಸಂಸಾರೇ ಮಾಯಾಮಾತ್ರಂ ವಿವರ್ತತೇ ।
ನಿರ್ಮಮೋ ನಿರಹಂಕಾರೋ ನಿಷ್ಕಾಮಃ ಶೋಭತೇ ಬುಧಃ ॥
(XVIII-73)

ಸಮಸ್ತ ಪ್ರಪಂಚವೂ ಕೇವಲ ಮನಸ್ಸಿನಲ್ಲಿಯೇ ಅಸ್ತಿತ್ವವನ್ನು ಪಡೆದುಕೊಂಡಿದೆ. ಅಹಂಕಾರ ವಿರಹಿತನೂ ಮಮಕಾರ ರಹಿತನೂ, ಆಶಾಮುಕ್ತನೂ ಆದ ಜೀವನ್ಮುಕ್ತ ಮಾತ್ರ ತನ್ನ ವಿವೇಕದಿಂದ ಇಲ್ಲಿ ಪ್ರಕಾಶಿಸುತ್ತಾನೆ.

ಈ ಸಮಸ್ತ ಜಗತ್ತೂ, ಸತ್ಯದ ಭ್ರಾಂತಿಯಿಂದ ನಿಜವೆಂದು ತೋರಿಬರುತ್ತಿದ್ದರೂ ಅದು ನಿರ್ಬಂಧಿತವೂ ಕಾಲ್ಪನಿಕವೂ ಆದ ಮನಸ್ಸಿನ ಸೃಷ್ಟಿ ಮಾತ್ರ. ಈ ಮಾಯಾ ಶಕ್ತಿಯಿಂದಲೇ, ನಿಜವಾಗಿ ಇಲ್ಲದೇ ಇರುವ ಹಾವು ಕತ್ತಲಲ್ಲಿ ನೋಡುವವನಿಗೆ ಹಗ್ಗದ ಬದಲು ಹಾವು ಕಂಡು ಬರುವಂತೆ, ಪ್ರಪಂಚವು ನಿಜವಾದ ಆತ್ಮನ ಮೇಲೆ ಆರೋಪಿತವಾಗಿದೆ. ಹಾವು ಯಾವಾಗಲೂ ಇರಲೇ ಇಲ್ಲ. ಹಾಗೆಯೇ ಪ್ರಪಂಚವೂ ಯಾವಾಗಲೂ ಇರಲಿಲ್ಲ. ಪ್ರತಿಯೊಬ್ಬ ಸಾಮಾನ್ಯ ಮನುಷ್ಯನೂ ಭ್ರಮಾ ಲೋಕದಲ್ಲೇ ಇದ್ದಾನೆ, ಈ ಕಾಲ್ಪನಿಕ ನಾಟಕದಲ್ಲಿ ದುಃಖ, ಸಂಕಟಗಳನ್ನು ಅನುಭವಿಸುತ್ತಾ ಜೀವಿಸುತ್ತಿದ್ದಾನೆ. ಇಲ್ಲದ ಜಗತ್ತನ್ನೇ ನಾವು ಇದೆ ಎಂದು ತಿಳಿದಿದ್ದೇವೆ. ಜೀವನ್ಮುಕ್ತನು ಮಾತ್ರ ತನ್ನ ವಿವೇಕ ನೇತ್ರದಿಂದ ಈ ಮಾಯೆಯ ಮುಸುಕನ್ನು ಭೇದಿಸಲು ಶಕ್ತನಾಗಿದ್ದಾನೆ ಹಾಗೂ

ಮಾಯೆಯ ಬಲೆಗೆ ಸಿಲುಕದೆ ಪ್ರಕಾಶಿಸುತ್ತಾನೆ. ಇದು ಹೇಗೆ ಸಾಧ್ಯವಾಯಿತೆಂದರೆ ಅವನು ತನ್ನನ್ನು ದೇಹ ಮನದೊಡನೆ ಗುರುತಿಸಿ ಕೊಳ್ಳುವುದನ್ನು ತೊರೆದುಬಿಟ್ಟಿದ್ದಾನೆ. ಪ್ರಾಪಂಚಿಕ ವಸ್ತುಗಳಲ್ಲಿನ ಮಮಕಾರವನ್ನೂ ತ್ಯಜಿಸಿ ಬಿಟ್ಟಿದ್ದಾನೆ. ಆಸೆಗಳೇ ನಮ್ಮನ್ನು ಈ ನಶ್ವರವಾದ ಜಗತ್ತಿಗೆ ಬಂಧಿಸಿಬಿಟ್ಟಿವೆ. ಜೀವನ್ಮುಕ್ತನಾದರೋ ಎಲ್ಲ ಬಗೆಯ ಬಂಧನದಿಂದಲೂ ಮುಕ್ತನಾಗಿದ್ದಾನೆ.

**73. ಅಮರ ಆತ್ಮವನ್ನು ಸಾಕ್ಷಾತ್ಕರಿಸಿಕೊಂಡ ಜೀವನ್ಮುಕ್ತನಿಗೆ ಯಾವ ಪ್ರಪಂಚವೂ ಇಲ್ಲ**

ಅಕ್ಷಯಂ ಗತಸಂತಾಪಂ ಆತ್ಮಾನಂ ಪಶ್ಯತೋ ಮುನೇಃ ।
ಕ್ವ ವಿದ್ಯಾ ಚ ಕ್ವ ವಾ ವಿಶ್ವಂ ಕ್ವ ದೇಹೋಽಹಂ ಮಮೇತಿ ವಾ ॥
(XVIII-74)

ಅವಿನಾಶಿಯಾದ ಆತ್ಮವನ್ನು, ದುಃಖ ಸಂಕಟಗಳಿಗೆ ಅವಕಾಶವೇ ಇಲ್ಲದಂತೆ ಕಾಣುವ ಜ್ಞಾನಿಗೆ ವಿದ್ಯೆ ಎಲ್ಲಿ? ವಿಶ್ವವೆಲ್ಲಿ? ದೇಹವೆಲ್ಲಿ? ಅಹಂಕಾರ ಮಮಕಾರಗಳಾದರೂ ಎಲ್ಲಿ?

ಬ್ರಹ್ಮಜ್ಞಾನವನ್ನು ಪಡೆದ ಜ್ಞಾನಿ ಆತ್ಮವನ್ನಲ್ಲದೆ ಬೇರೆ ಏನನ್ನೂ ಕಾಣುವುದೇ ಇಲ್ಲ. ಅಂತಹ ಅ–ದ್ವೈತ ಸ್ಥಿತಿಯಲ್ಲಿ ಅವನಿಗೆ ದುಃಖವನ್ನು ಉಂಟುಮಾಡುವ, ಸಂಕಟವನ್ನು ತರುವ ಯಾವ ವಸ್ತುವೂ ಇರುವುದೇ ಇಲ್ಲ. ಆತ್ಮವು ಅಮರ, ಅದನ್ನು ನಾಶಪಡಿಸಲು ಸಾಧ್ಯವೇ ಇಲ್ಲ. ಒಮ್ಮೆ ಅವನು ಈ ಸ್ಥಿತಿಯನ್ನು ಪಡೆದನೆಂದರೆ, ವಿಶ್ವದ ಒಂದು ಭಾಗವೇ ಆದ ದೇಹವು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತದೆ. ದೇಹವೇ ಇಲ್ಲವೆಂದಮೇಲೆ ಅವನಿಗೆ ಅಹಂಕಾರವಾಗಲೀ, ಮಮಕಾರವಾಗಲೀ ಇರಲು ಸಾಧ್ಯವೇ ಇಲ್ಲ. ಮತ್ತಾವ ವಿದ್ಯೆ ಅಥವಾ ಪ್ರಪಂಚದ ಅಗತ್ಯವೂ ಅವನಿಗಿರುವುದಿಲ್ಲ. ಅವನು ಆತ್ಮತೃಪ್ತನಾಗಿಯೇ ಸಂತೋಷದಿಂದ ಇದ್ದುಬಿಡುತ್ತಾನೆ.

**74. ಜ್ಞಾನಿಗೆ ಸ್ವರ್ಗವಾಗಲೀ ನರಕವಾಗಲೀ ಅಥವಾ ಮೋಕ್ಷವಾಗಲೀ ಇಲ್ಲ !**

ನ ಸ್ವರ್ಗೋ ನೈವ ನರಕೋ ಜೀವನ್ಮುಕ್ತಿರ್ನಚೈವ ಹಿ।
ಬಹುನಾತ್ರ ಕಿಮುಕ್ತೇನ ಯೋಗದೃಷ್ಟ್ಯಾ ನ ಕಿಂಚನ॥
(XVIII-80)



ಆತ್ಮವನ್ನು ಸಾಕ್ಷಾತ್ಕರಿಸಿಕೊಂಡವನಿಗೆ, ಸ್ವರ್ಗವೂ ಇಲ್ಲ, ನರಕವೂ ಇಲ್ಲ. ಮುಕ್ತಿ (ಜೀವನ್ಮುಕ್ತಿ) ಎಂಬುದೂ ಇಲ್ಲ. ಬಹುವಾಗಿ ಮಾತನಾಡುವುದರಿಂದ ಪ್ರಯೋಜನವೇನು? ಅಂತಿಮ ಸತ್ಯದ ದೃಷ್ಟಿಯಿಂದ, ಆತ್ಮವಲ್ಲದೆ ಬೇರೆ ಏನೂ ಇಲ್ಲ.

ಕಟ್ಟಕಡೆಗೆ ಆತ್ಮವೊಂದೇ ಇರುವುದು. ಅದೊಂದು ಸ್ವಪ್ನನಾಟಕ. ತನಗೆ ತಾನೇ ಲಕ್ಷಾಂತರ ಪಾತ್ರಗಳನ್ನು ವಹಿಸುತ್ತಾ ತನ್ನನ್ನು ತಾನೇ ನೋಡಿಕೊಳ್ಳುತ್ತಾ ನಾಟಕದ ಪ್ರೇಕ್ಷಕನೂ ಆಗಿರುತ್ತದೆ. ಈ ಎಲ್ಲವೂ ಜಗನ್ನಾಟಕದ ಭಾಗಗಳಷ್ಟೆ – ಇರುವವನು ಒಬ್ಬನೇ ಪಾತ್ರಧಾರಿ – ಅವನು ಆತ್ಮವೇ (ತಾನೇ). ಅದೊಂದು ವಿಶ್ವಸ್ವಪ್ನ. ಸ್ವಪ್ನದಿಂದ ಎಚ್ಚರಗೊಳ್ಳುವುದೂ (ಮೋಕ್ಷ) ಎಂದೂ ನಡೆಯಗೇ ಹೋದ ನಾಟಕವೇ ! – ಅದೊಂದು ಬರಿಯ ಕಲ್ಪನೆ. ಆತ್ಮವು ಸದಾ ಸರ್ವದಾ ಸ್ವತಂತ್ರವಾಗಿಯೇ ಇದ್ದಿತು. ಸ್ವರ್ಗ, ನರಕ ಕಡೆಗೆ ಮೋಕ್ಷ ಎಂಬ ಯಾವ ಯಾವ ಬಂಧನವೂ ಅದಕ್ಕೆ (ಆತ್ಮ) ಇರಲೇ ಇಲ್ಲ.

ಮಾನವರನ್ನು ಪಾಪಕರವಾದ ಕಾರ್ಯಗಳನ್ನು ಮಾಡುವುದರಿಂದ ತಡೆಯುವುದಕ್ಕಾಗಿ, ಹಾಗೂ ಪುಣ್ಯಕರವೂ ಉದಾತ್ತವೂ ಆದ ಕಾರ್ಯಗಳನ್ನು ಮಾಡುವಂತೆ ಪ್ರೋತ್ಸಾಹಿಸುವುದಕ್ಕಾಗಿ, ನರಕವೆಂಬ ಶಿಕ್ಷೆಯ ಸ್ಥಳ, ಸ್ವರ್ಗ ಎಂಬ ಬಹುಮಾನದ ಲೋಕವನ್ನು ಶಾಸ್ತ್ರಗಳಲ್ಲಿ ಉಲ್ಲೇಖಿಸಲಾಗಿದೆ ಅಷ್ಟೆ! ಸ್ವರ್ಗ ನರಕಗಳೆಲ್ಲ ಕಾಲ್ಪನಿಕ ಸೃಷ್ಟಿಗಳು. ಅವೆರಡೂ ನಮ್ಮ ದೇಹದಷ್ಟೇ ಸತ್ಯ. ಎಲ್ಲಿಯವರೆಗೆ ಮನುಷ್ಯನು ಅಜ್ಞಾನವಶನಾಗಿದ್ದು, ತನ್ನ ದೇಹವೇ ಸತ್ಯವೆಂದು ತಿಳಿದಿರುತ್ತಾನೋ ಅಲ್ಲಿಯವರೆಗೆ, ಸ್ವರ್ಗ, ನರಕ, ಮೋಕ್ಷ ಎಂಬೆಲ್ಲ ಸಾಪೇಕ್ಷ ಸತ್ಯಗಳೂ ಇರುತ್ತವೆ. ಅಂತಿಮ ವಿಶ್ಲೇಷಣೆಯಲ್ಲಿ ಆತ್ಮವಲ್ಲದೆ ಬೇರೆ ಏನೂ ಇಲ್ಲ.

**75. ಜೀವನ್ಮುಕ್ತನು ಯಾರನ್ನೂ ಹೊಗಳುವುದೂ ಇಲ್ಲ – ತೆಗಳುವುದೂ ಇಲ್ಲ.**

ನ ಶಾಂತಂ ಸ್ತೌತಿ ನಿಷ್ಕಾಮೋ ನ ದುಷ್ಟಮಪಿ ನಿಂದತಿ ।
ಸಮದುಃಖಸುಖಸ್ತೃಪ್ತಃ ಕಿಂಚಿತ್ ಕೃತ್ಯಂ ನ ಪಶ್ಯತಿ ॥ (XVIII-82)

ಜೀವನ್ಮುಕ್ತನು ಸಂತನನ್ನು ಪ್ರಶಂಸಿಸುವುದೂ ಇಲ್ಲ ಅಥವಾ ದುಷ್ಟನನ್ನು ದೂಷಿಸುವುದೂ ಇಲ್ಲ (ತೆಗಳುವುದೂ ಇಲ್ಲ). ಅವನು

ಸುಖ ದುಃಖ ಎಲ್ಲದರಲ್ಲೂ ಸಂತುಷ್ಟನಾಗಿಯೇ ಇರುತ್ತಾನೆ. ಎಲ್ಲ ಕಾಲದಲ್ಲೂ ಸಂತೃಪ್ತನಾಗಿರುತ್ತಾನೆ

ಜೀವನ್ಮುಕ್ತನು ತನ್ನಲ್ಲಿ ಯಾವ ವಾಸನಾ ಅಥವಾ ಅಪೇಕ್ಷೆಗಳನ್ನೂ ಹೊಂದಿರುವುದಿಲ್ಲ. ಹೀಗಾಗಿ ಅವನಿಗೆ ಯಾರ ಆಶೀರ್ವಾದ, ಅನುಗ್ರಹಗಳೂ ಬೇಕಿಲ್ಲ. ಆದುದರಿಂದ ಶಾಂತನೂ ಮೌನಿಯೂ ಆದ ಸಂತನನ್ನು ಅವನು ಸ್ತುತಿಸುವುದಿಲ್ಲ. ಹಾಗೆಯೇ ಯಾವ ದುಷ್ಟ, ದಗಾಕೋರ, ಖದೀಮನನ್ನು ನಿಂದಿಸುವುದೂ, ತಿರಸ್ಕರಿಸುವುದೂ ಇಲ್ಲ. ದುಷ್ಟನು ಜೀವನ್ಮುಕ್ತನಿಗೆ ದುಃಖ ಸಂಕಟಗಳನ್ನುಂಟುಮಾಡಿದರೆ ಅದನ್ನು ಅವನು ಲೆಕ್ಕಿಸುವುದೂ ಇಲ್ಲ. ಸಂತನು ಜೀವನ್ಮುಕ್ತನನ್ನು, ಆಶೀರ್ವದಿಸಿದರೆ ಅವನಿಗೆ ಯಾವ ಸಂತೋಷವೂ ಆಗುವುದಿಲ್ಲ. ಏಕೆಂದರೆ ಅವನಿಗೆ ಈ ಭ್ರಾಮಕ ಪ್ರಪಂಚದಿಂದ ಯಾವ ನಿರೀಕ್ಷೆಯೂ ಇಲ್ಲದಿರುವುದಿಲ್ಲ ವಾದುದರಿಂದ, ಸಂತನು ತನಗೆ ಏನಾದರೂ ವರಗಳನ್ನು ನೀಡಲಿ ಎಂದು ಜೀವನ್ಮುಕ್ತನು ಬಯಸುವುದಿಲ್ಲ. ಅವನಿಗೆ ಯಾವ ಕೊರತೆಯೂ ಇಲ್ಲ. ಎಲ್ಲರಲ್ಲೂ ಒಂದೇ ಆತ್ಮವನ್ನು ಅವನು ಕಾಣುತ್ತಾನೆ.

**76. ಜೀವನ್ಮುಕ್ತನಿಗೆ ಪ್ರಪಂಚದಲ್ಲಾಗಲೀ ಆತ್ಮನಲ್ಲಾಗಲೀ ಯಾವ ಆಸಕ್ತಿಯೂ ಇರುವುದಿಲ್ಲ.**

ಧೀರೋ ನ ದ್ವೇಷ್ಟಿ ಸಂಸಾರಂ ಆತ್ಮಾನಂ ನ ದಿದೃಕ್ಷತಿ ।
ಹರ್ಷಾಮರ್ಷವಿನಿರ್ಮುಕ್ತೋ ನ ಮೃತೋ ನ ಚ ಜೀವತಿ ॥
(XIII-83)

ಜೀವನ್ಮುಕ್ತನು ಪ್ರಪಂಚವನ್ನು ದ್ವೇಷಿಸುವುದಿಲ್ಲ. ಅವನಿಗೆ ಆತ್ಮದರ್ಶನದಲ್ಲಿ ಆಸಕ್ತಿಯೂ ಇಲ್ಲ. ಅವನು ಹರ್ಷ ಕ್ರೋಧಗಳಿಂದ ಮುಕ್ತನಾಗಿರುತ್ತಾನೆ. ಅವನು ಮೃತನಾಗಿಯೂ ಇಲ್ಲ, ಜೀವಂತನಾಗಿಯೂ ಇಲ್ಲ.

ಜೀವನ್ಮುಕ್ತನು ತನ್ನಿಂದ ಬೇರೆಯಾದ ಯಾವ ಪ್ರಪಂಚವನ್ನೂ ಕಾಣುವುದೇ ಇಲ್ಲ. ಪ್ರಪಂಚವೂ ಅವನಿಗಾಗಿ ಇಲ್ಲ, ಇಲ್ಲದೇ ಇರುವುದನ್ನು ಅವನು ಹೇಗೆ ತಾನೇ ದ್ವೇಷಿಸಬಲ್ಲ? ಎರಡನೆಯದಾಗಿ ಅವನು ಸಮದೃಷ್ಟಿಯನ್ನು ಹೊಂದಿರಬೇಕಾಗುತ್ತದೆ. ಅವನಿಗೆ



ಇಷ್ಟಾನಿಷ್ಟಗಳಿಲ್ಲ. ಪ್ರಪಂಚವೇ ಅವನಿಂದ ದೂರಸರಿದಂತೆ ತೋರುತ್ತದೆ. ಈ ಹೇಳಿಕೆಯು ಅಷ್ಟಾವಕ್ರರು ಈ ಮೊದಲು ಬೋಧಿಸಿದುದರ ಪುನರುಕ್ತಿಯೇ ಆಗಿದೆ. ಜೀವನ್ಮುಕ್ತನು ಈ ಪ್ರಪಂಚದ ಸುಖಗಳನ್ನು ಅಪೇಕ್ಷಿಸುವುದೂ ಇಲ್ಲ. ಮೋಕ್ಷವನ್ನೂ ಬಯಸುವುದಿಲ್ಲ (ಭೋಗ ಮೋಕ್ಷ ನಿರಾಕಾಂಕ್ಷೀ). ಆತ್ಮದರ್ಶನದ ಆಸೆಯೂ ಅವನಿಗಿಲ್ಲ, ಏಕೆಂದರೆ ಆತ್ಮವು ದರ್ಶಿಸುವಂತಹ ಒಂದು ವಸ್ತುವಲ್ಲ, (ಇಂದ್ರಿಯಗಳ ಮೂಲಕ ನೋಡಲು) ಸಾಧ್ಯವೇ ಇಲ್ಲ. ಆತ್ಮನು ವಿಷಯಿ – ವಿಷಯ ಬೇರೆ ಇಲ್ಲ.

ಆತ್ಮವು ತಾನೇ ಆಗಿದ್ದಾನೆ. ಅವನೊಬ್ಬನೇ ನೋಟಕ ಎಂದ ಮೇಲೆ ತಾನೇ ನೋಟದ ವಸ್ತುವೂ ಆಗಲು ಹೇಗೆ ಸಾಧ್ಯ? ಎಲ್ಲ ಸಂವೇದನೆಗಳಿಗೂ, ಭಾವೋದ್ರೇಕಕ್ಕೂ ಅವನು ಮುಕ್ತನಾದುದರಿಂದ (ಅವುಗಳಿಂದ ಅಬಾಧಿತನಾದುದರಿಂದ) ಯಾವೊಂದು ವಸ್ತು ಅಥವಾ ಘಟನೆ ಅವನಲ್ಲಿ ಯಾವ ಸಂತಸ ಅಥವಾ ದುಃಖದ ಅಲೆಗೆ ಕಾರಣವಾಗುವುದಿಲ್ಲ. ಹೀಗಿರುವುದರಿಂದ ಅವನು ಪ್ರಪಂಚದ ಯಾವ ಏರಿಳಿತಗಳಿಗೂ ಪ್ರತಿಸ್ಪಂದಿಸುವುದಿಲ್ಲ. ಆ ಏರಿಳಿತಗಳು ಅವನಲ್ಲಿ ಯಾವ ಪ್ರತಿಕ್ರಿಯೆಯನ್ನೂ ಉಂಟುಮಾಡುವುದಿಲ್ಲ. ಆದುದರಿಂದ ಅವನು ಜೀವಂತವಾಗಿಯೇ ಇಲ್ಲ ಎಂದು ಹೇಳಬಹುದು. ಆದರೆ ಅವನು ತನ್ನ ಉಸಿರಾಟವನ್ನು ಮುಂದುವರೆಸಿದ್ದಾನೆ, ಆದುದರಿಂದ ಅವನು ಸತ್ತಿದ್ದಾನೆ ಎನ್ನುವಂತಿಲ್ಲ ! ಎಲ್ಲ ವ್ಯಾವಹಾರಿಕ ದೃಷ್ಟಿಗೆ ಅವನು ಬದುಕಿಯೂ ಇಲ್ಲ, ಸತ್ತೂ ಇಲ್ಲ ಎನ್ನಬಹುದು !

**77. ಮುಕ್ತಿಸಾಧಕ ಎಂಬುವನು ಯಾವಾಗಲೂ ಇರಲೇ ಇಲ್ಲ. ಹಾಗೆಯೇ ಮುಕ್ತನೂ ಇರಲಿಲ್ಲ. ಸೃಷ್ಟಿಯೂ ಇರಲಿಲ್ಲ. ಸಂಹಾರ(ಲಯ)ವೂ ಇರಲಿಲ್ಲ.**

ನ ಸುಖೀ ನ ಚ ವಾ ದುಃಖೀ ನ ವಿರಕ್ತೋ ನ ಸಂಗವಾನ್ ।
ನ ಮುಮುಕ್ಷುರ್ನವಾ ಮುಕ್ತೋ ನ ಕಿಂಚಿನ್ ನಚ ವಾ ಕಿಂಚನ ॥
(XVIII-96)

ಕ್ವ ಸೃಷ್ಟಿಃ ಕ್ವ ಚ ಸಂಹಾರಃ ಕ್ವ ಸಾಧ್ಯಮ್ ಕ್ವ ಚ ಸಾಧನಮ್ ।
ಕ್ವ ಸಾಧಕಃ ಕ್ವ ಸಿದ್ಧಿರ್ವಾ ಸ್ವಸ್ವರೂಪೇಽಹಮದ್ವಯೇ ॥
(XX-7)

ಯಾವೊಬ್ಬನೂ ಸುಖಿವಾಗಿಯೂ ಇಲ್ಲ. ಅಥವಾ ಯಾವನೂ ಅಸುಖಿ ಯಾಗಿಯೂ ಇಲ್ಲ. ಪ್ರಪಂಚದ ವಿಷಯದಲ್ಲಿ ವಿರಕ್ತನೂ ಇಲ್ಲ ಅಥವಾ ಪ್ರಪಂಚದಲ್ಲಿ ಸಂಸಕ್ತನೂ ಇಲ್ಲ, ಮುಕ್ತಿಯನ್ನು ಬಯಸುವ ಮುಮುಕ್ಷುವೂ ಇಲ್ಲ. ಮುಕ್ತನಾದವನೂ ಇಲ್ಲ. ಏನೂ ಎಂದರೆ ಏನೂ ಇಲ್ಲ. ಏನೂ ಇಲ್ಲ ಎಂಬುದೂ ಇಲ್ಲ.

ಸೃಷ್ಟಿ ಎಂಬುದಾಗಲಿ ಸಂಹಾರ (ಲಯ) ಎಂಬುದಾಗಲೀ ಎಲ್ಲಿದೆ? ಸಾದಿಸಬೇಕಾದ ಗುರಿಯಾಗಲಿ ಎಲ್ಲಿದೆ? ಸಾಧನಗಳಾಗಲಿ ಎಲ್ಲಿವೆ? ಸಾಧನೆ ಮಾಡುವ ಸಾಧಕನೆಲ್ಲಿದ್ದಾನೆ? ಸಾಧ್ಯ (ಗುರಿ)ವಾದರೂ ಎಲ್ಲಿ? ನಾನು ಅವಿನಾಶಿ, ಸ್ವಸ್ವರೂಪದಲ್ಲೇ ಇದ್ದೇನೆ. ಈ ಮೇಲೆ ಹೇಳಿದ ವಸ್ತು ವಿಷಯಗಳಾವುವೂ ನನ್ನಲ್ಲಿ ಇಲ್ಲ.

ಅಷ್ಟಾವಕ್ರರ ಉಪದೇಶಗಳು (ಬೋಧನೆಗಳು) ಗೌಡಪಾದರ 'ಅಜಾತವಾದ' ದಂತೆಯೇ ಮುಕ್ತಾಯವಾಗುತ್ತವೆ. ಗೌಡಪಾದರು ಆದಿಶಂಕರರ ಪರಮ ಗುರುಗಳು – ತಮ್ಮ 'ಮಾಂಡೂಕ್ಯಕಾರಿಕೆ' ಯಲ್ಲಿ.

"ನ ನಿರೋಧೋ ನ ಚೋತ್ಪತ್ತಿಃ ನ ಬದ್ಧೋ ನ ಸಾಧಕ ಹಿ
ನ ಮುಕ್ತೊ ನ ಮುಮುಕ್ಷುರ್ವಾ ಇತ್ವೇಶಾ ಪರಮಾರ್ಥತಾ॥"

ಸೃಷ್ಟಿ ಎಂಬುದು ಯಾವಾಗಲೂ ಇರಲೇ ಇಲ್ಲ. ಸಂಹಾರ (ಲಯ)ವಾದಾಗ ಪ್ರಳಯ ಎಂಬುದೂ ಇರಲಿಲ್ಲ. ಯಾರೂ ಯಾವಾಗಲೂ ಬದ್ಧರಾಗಿರಲಿಲ್ಲ. ಮೋಕ್ಷಕ್ಕಾಗಿ ಸಾಧನೆ ಮಾಡುವವನೂ ಇರಲಿಲ್ಲ, ಮುಕ್ತನಾದವನು ಇರಲಿಲ್ಲ, ಇದೇ ಅಂತಿಮ ಸತ್ಯ. ನಂಬಿದರೆ ನಂಬು, ಇಲ್ಲ ಬಿಡು!

ಸಮಸ್ತ ಪ್ರಪಂಚ, ಅದರಲ್ಲಿನ ಜೀವಿಗಳು, ವಸ್ತುಗಳು, ಹುಟ್ಟು ಮತ್ತು ಸಾವು, ಬಂಧಗಳು, ಸಾಧನ, ಮೋಕ್ಷ ಈ ಎಲ್ಲ ಪ್ರಕ್ರಿಯೆಗಳೂ ಸ್ವಪ್ನದಂತೆ ಭ್ರಮೆ. ಈ ಎಲ್ಲವೂ ಯಾವಾಗಲೂ ಇರಲೇ ಇಲ್ಲ. ಬದಲಾವಣೆಯಿಲ್ಲದ ಆತ್ಮವೊಂದೇ ಯಾವಾಗಲೂ ಇರುವುದು. ಅದು ಯಾವಾಗಲೂ ಪರಿವರ್ತನೆ ಹೊಂದಲೇ ಇಲ್ಲ. ಅದೆಲ್ಲ ಕನಸಿನಂತಹ ಮಾನಸಿಕ ಕಲ್ಪನೆ– ಹುಟ್ಟು, ಸಾವು, ಬಂಧ, ಮೋಕ್ಷ, ಇವೆಲ್ಲ ಇರುವಂತೆ ತೋರುತ್ತವೆ ಅಷ್ಟೇ. ಯಾವುದೂ ಸೃಷ್ಟಿಸಲ್ಪಟ್ಟಿಲ್ಲ, ಯಾವುದೂ ನಾಶವಾಗಲೂ ಇಲ್ಲ. ಸೃಷ್ಟಿಯಾದದ್ದು ಯಾವುದೂ ಇಲ್ಲವೆಂದ ಮೇಲೆ,



ಯಾರು ಬದ್ಧರು, ಯಾರು ಮುಕ್ತರು? ಎಲ್ಲರೂ ಮನಸ್ಸಿನ ಈ ಭ್ರಮೆಯಿಂದ ದೂರವಾಗೋಣ, ಎಚ್ಚರಗೊಳ್ಳೋಣ, ಯಾವಾಗಲೂ ಏನೂ ಆಗಲಿಲ್ಲ, ಯಾವುದನ್ನೂ ಮಾಡಬೇಕಾಗಿಯೂ ಇಲ್ಲ. ನಿಜ, ಏಕಮಾತ್ರ ಸತ್ಯವಾದ ಆತ್ಮವೊಂದೇ ಯಾವಾಗಲೂ ಇರುವುದು. ಸಮಸ್ತ ಪ್ರಪಂಚವೂ ಆತ್ಮದ ಮೇಲಿನ ಭ್ರಾಮಕ ಅಧ್ಯಾರೋಪ. ನಾವು ಆತ್ಮವೇ, ನಾವು ಹೇಗಿದ್ದೇವೋ ಹಾಗೇ ಯಾವಾಗಲೂ ಇರುತ್ತೇವೆ.

ಒಂದು ಎಚ್ಚರಿಕೆಯ ಮಾತು ಇಲ್ಲಿ ಅಗತ್ಯ. ಅಷ್ಟಾವಕ್ರರ ಈ ಹೇಳಿಕೆ, ಪ್ರಾರಂಭದಲ್ಲಿ ಮಾಡಲಾಗಿಲ್ಲ. ಇದು ಆಲಸಿಯಾದ ಸಾಧಕನು ಸೋಮಾರಿಯಾಗಿ ಇದ್ದುಬಿಡಲು ಹೇಳಿದ ಪಲಾಯನವಾದವಲ್ಲ. ಪ್ರತಿಯೊಬ್ಬನೂ ಶ್ರಮದ ಸಾಧನೆ ಮಾಡಲೇಬೇಕು. ಸಾಧನೆಯ ಕಡೆಯಲ್ಲಿ ಅಂತಿಮ–ಪರಮ ಜ್ಞಾನವನ್ನು ಪಡೆದುಕೊಳ್ಳಬೇಕು. 'ಅಜಾತವಾದ'ವು ನಮ್ಮ ಆಧ್ಯಾತ್ಮ ಪಥವನ್ನು ಸುಗಮವೂ ಸುಲಲಿತವೂ ಆಗಿ ಮಾಡುತ್ತದೆ. ಆದರೆ ಇದು ಪ್ರಬುದ್ಧ ಸ್ತರದ ಸಾಧನೆಗಾಗಿ ಇರುವಂತಹುದು. ಅಷ್ಟಾವಕ್ರರ ಬೋಧನೆಗಳು ಬಹುಮಂದಿಗೆ ಸೋಲಾಗದ ವಿನಂತಿ (ಅರಿಕೆ). ಅದರಲ್ಲಿ ಮತ್ತೊಂದು ಸಹಾಯಕ ವಿಷಯವೂ ಉಂಟು. ಅದು ಪರಮಾತ್ಮನ 'ಅನುಗ್ರಹ' ಎಂದು ಕರೆಯಲ್ಪಟ್ಟಿದೆ. ಅದು (ಆತ್ಮ) ಯಾವಾಗಲೂ ನಮ್ಮೊಡನೆ ಇದೆ. ಅದು ಎಲ್ಲ ಭ್ರಮೆಯನ್ನೂ ನಿವಾರಿಸಿ, ಅಂತಿಮವಾಗಿ ನಾವು ಯಾರು ಎಂಬುದನ್ನು ತೋರಿಸಿಕೊಡುತ್ತದೆ. ಆ ಅನುಗ್ರಹವು ನಮ್ಮ ಮೇಲೆ ಇಳಿದು ಬರಲಿ ಎಂದು ಪ್ರಾರ್ಥಿಸೋಣ.

ಓಂ ತತ್ಸತ್

Annexure-1 Release-2.7, 15022012

ॐ

## Complete list of books/documents available on website

(http://www.scribd.com/vedavita)

As per the statistics released by Scribd.com, since the launch of this website on 15th August 2009, about **1,03,000** readers have visited this website to read **71** books/documents which are available as of now, about **26,000** copies are downloaded worldwide and **241** people are subscribers to this website.

### 1. Books published by Shri Purushottamananda Trust

| Sr. | Title of Book | Year of Publication |
|---|---|---|
| 1 | Autobiography in Malayalam | 1956 |
| 2 | Autobiography in English | 1994 |
| 3 | Autobiography in Hindi | 2007 |
| 4 | Updeshamrit | 1979 |
| 5 | Nectar of Spiritual Instructions | 1986 |
| 6 | A Peep into the Gita | 1990 |
| 7 | Gita ki ek Jhalak | 2000 |
| 8 | Adhyatma Varta | 2000 |
| 9 | Spiritual talks | 1990 |
| 10 | Guide to Spiritual Aspirants | 1986 |
| 11 | Souvenir (in Hindi and English) | 2004 |
| 12 | Souvenir (in Hindi and English) | 2011 |

### 2. Books authored by His Holiness Swami Shantananda Puri ji

| Sr. | Title of Book | Year of Publication |
|---|---|---|
| 1 | Srimad Bhagavatam : Its message for the Modern Man | 1998 |
| 2 | Sadhanas in Bhagvad Gita | 1999 |
| 3 | Srimad Bhagvat - Adhunik Manav ke Liye Iska Sandesh | 2000 |
| 4 | Srimad Bhagvad Gita ki Adhyatmik Sadhanayein (In Hindi) | 2001 |
| 5 | Fragrant Flowers: Soul-elevating Reminiscences of a Himalayan Monk | 2002 |
| 6 | Jivan Mukti : Liberation- Here & Now | 2002 |
| 7 | Stories for Meditation | 2003 |
| 8 | Answers to basic spiritual questions of Sadhaks | 2003 |
| 9 | Sri Lalita Sahasranama Stotram : An Insight | 2003 |
| 10 | Instant Self- Awareness : Talks on Asthavakra Gita | 2004 |
| 11 | The Quantum Leap into the Absolute : Essence of Asthavakra Gita | 2005 |
| 12 | Golden guidelines to "Who am I" | 2005 |
| 13 | Sadhanas according to Yoga Vasishtha | 2005 |
| 14 | Infallible Vedic Remedies | 2005 |
| 15 | Musings of a Himalayan Monk | 2006 |
| 16 | Stories for Inspiration | 2006 |
| 17 | Srimad Bhagavatam : Its message ... (In Malayalam) | 2006 |
| 18 | Sadhanas according to Tripura Rahasyam | 2007 |
| 19 | Pearls of Wisdom Sublime | 2007 |
| 20 | Sadhanas from Adhyatma Ramayanam | 2007 |

| | | |
|---|---|---|
| 21 | Gita's Sthita Pragna Darshan - A crash course for Moksha | 2008 |
| 22 | Gita's Sthita Pragna Darshan (In Malayalam) | 2006 |
| 23 | A quintessence of Uddhava Gita | 2008 |
| 24 | The Ecstasy of Love Divine : Essence of Narada Bhakti Sutra | 2009 |
| 25 | Living Happily Forever | 2010 |
| 26 | Sadhanas from Kaivalyopanishad | 2010 |
| 27 | The Spiritual Journey of a Himalayan Monk- Biography of Swamiji | 2010 |
| 28 | Gita Sarah | 2010 |
| 29 | Devi Kalottara | 2010 |
| 30 | Sadhanas from Kenopanishad | 2011 |
| 31 | Sri Shiva Sahasranama Stotram (As per Linga Purana) Revised | 2011 |
| 32 | Selected Gems from Ashtavakra Gita | 2011 |

All above books except at Sr. 1, 17, 22 & 31 are published by Parvathamma C.P. Subbaraju Setty Charitable Trust, Bangalore, India for limited free distribution among the devotees of Poojya Swamiji.

### 3. Other documents authored by H.H. Swami Shantananda Puri

| | |
|---|---|
| 1 | Clarifications of doubts of a Sadhak |
| 2 | What I Pray for |
| 3 | Gems from Srimad Bhagvatam |
| 4 | Gems from Guru Gita |
| 5 | My experience of keeping Silence(Mowna) |
| 6 | Mantra Pushpam |
| 7 | Sri Suktam- an Exegesis |
| 8 | Sri Ramana Suprabhatam |
| 9 | An Open Letter to a Sadhak |
| 10 | Boat Leela of Lord Krishna |
| 11 | Message on 82nd Birthday of Revered Swamiji |
| 12 | The 108 Names of Guru with their meanings in Hindi |
| 13 | Introduction to Vasishtha Guha |
| 14 | Introduction to Vasishtha Guha (In Hindi) |
| 15 | Karma, sadhana, renunciation, grace & self realisation |
| 16 | Is Guru necessary |
| 17 | Remedy for Maladies |

**Some more books are also available on the website like "At the feet of my Gurudev" by Swami Nirvedananda, "Swami Nirvedananda- A True Sannyasin".**

NOTE: All the books are available on website and can be downloaded by anybody free of cost for non-commercial personal use by logging into this website- http://www.scribd.com/vedavita

**For any feedback, kindly send mail to: vedavita@gmail.com**

P.S. **Interested devotees may send their Email-id for inclusion in mailing list.**

*This document is released by H.H. Swami Shantananda Puri on 15th Feb 2012 at Ghazipur (U.P) India for information of all devotees and interested readers.*